ಬೆಂಗಳೂರು ಸಂಪುಟ: 16 ಸಂಚಿಕೆ: 64 ಪುಟ: 06 ಶುಕ್ರವಾರ 31-01-2025

Mail:mussanje2010@gmail.com www.mussanjenews.com

# ಮುಸ್ಸಂಜೆ

ಪ್ರಭಾವಶಾಲಿ ಕನ್ನಡ ಸಂಜೆ ದಿನ ಪತ್ರಿಕೆ

Managing Editor: N.Veerendra Babu (MBA, LLB)    Executive Editor: L P Babu    Honourary Editor: Venkatesh



ಬೆಸ್ಟ್ ಆ್ಯಕ್ಟರ್ ಪ್ರಶಸ್ತಿ ಪಡೆದ ಸಮರ್ಜಿತ್

ಯುವ ಗಾಯಕರಿಗೆ ಸಿಂಗಿಂಗ್ ಟಿಪ್ಸ್

ದಕ್ಷಿಣದ ನಟರ ಅವಶ್ಯಕತೆಯಿದೆ ↘ ಪುಟ 6

## ಕಾನೂನು ಬಾಹಿರವಾಗಿ ಕಾರ್ಯನಿರ್ವಹಿಸುತ್ತಿರುವ ಮೈಕ್ರೋ ಫೈನಾನ್ಸ್ ಸಂಸ್ಥೆಗಳ ಮೇಲೆ ಕ್ರಮ

# ಆತ್ಮಹತ್ಯೆ ಬೇಡ: ಸಿಎಂ

**ಬೆಂಗಳೂರು:** ಮೈಕ್ರೋ ಫೈನಾನ್ಸ್ ಗಳ ವಸೂಲಿ ಕ್ರಮಕ್ಕೆ ಯಾರೂ ಆತ್ಮಹತ್ಯೆ ಮಾಡಿಕೊಳ್ಳಬೇಡಿ. ಸರ್ಕಾರ ನಿಮ್ಮ ಜೊತೆಗಿದೆ. ತೊಂದರೆ ಕೊಟ್ಟರೆ ಕಂಪ್ಲೇಂಟ್ ಕೊಡಿ. ಕಾನೂನು ಕ್ರಮ ತಗೊತೀವಿ ಎಂದು ಸಿದ್ದರಾಮಯ್ಯ ಅವರು ಕರೆ ನೀಡಿದರು.

ಮೈಸೂರು ಸುತ್ತೂರಿನ ಶಿವರಾತ್ರೀಶ್ವರ ಶಿವಯೋಗಿಗಳ ಜಾತ್ರಾ ಮಹೋತ್ಸವದಲ್ಲಿ ಪಾಲ್ಗೊಂಡು ಮಹದೇಶ್ವರ ದೇವಸ್ಥಾನಕ್ಕೆ ಭೇಟಿ ನೀಡಿ ವಿಶೇಷ ಪೂಜೆ ಸಲ್ಲಿಸಿ ಗದ್ದುಗೆ ದರ್ಶನ ಪಡೆದ ಬಳಿಕ ವೇದಿಕೆ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದರು.

ಬಸವಣ್ಣನವರ ಆಶಯುಗಳೆಲ್ಲಾ ನಮ್ಮ ಸಂವಿಧಾನದಲ್ಲಿ ಅಡಕವಾಗಿವೆ. ಇದನ್ನು ಇಡೀ ಸಮಾಜ ಅರಿತುಕೊಳ್ಳಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕರೆ ನೀಡಿದರು. ಜಾತ್ಯತೀತ ಸಮಾಜ ನಿರ್ಮಾಣ ಸಂವಿಧಾನದ ಮೂಲ ಉದ್ದೇಶ. ಶರಣ ಶ್ರೇಷ್ಠರಾದ ಬಸವಾದಿ ಶರಣರ ಆಶಯವೂ ಆಗಿದೆ. ಇದನ್ನು ಪ್ರತಿಯೊಬ್ಬರೂ ಅರ್ಥ ಮಾಡಿಕೊಂಡು ಬಸವಣ್ಣನವರ ಆಶಯದಂತೆ ಜಾತಿ, ಧರ್ಮದ ಹೆಸರಿನ ಮನುಷ್ಯ ತಾರತಮ್ಯ ಹಾಗೂ ಮೌಢ್ಯಗಳನ್ನು ತೊರೆಯಬೇಕು ಎಂದು ಕರೆ ನೀಡಿದರು.

ನಮಗೆ ಸಿಕ್ಕಿರುವ ರಾಜಕೀಯ ಸ್ವಾತಂತ್ರ್ಯ ಆರ್ಥಿಕವಾಗಿ, ಸಮಾಜಿಕವಾಗಿ ಇಲ್ಲ . ಇದು ಸಿಗದ ಹೊರತು ಸ್ವಾತಂತ್ರ್ಯದ ಆಶಯ ಪೂರ್ತಿ ಆಗುವುದಿಲ್ಲ ಎನ್ನುವ ಮಾತನ್ನು ಬಾಬಾ ಸಾಹೇಬ್ ಅಂಬೇಡ್ಕರ್ ಅವರು ಸಂವಿಧಾನ ಜಾರಿ ಸಭೆಯಲ್ಲೇ ಹೇಳಿದ್ದರು. ಅವತ್ತಿನ ಅವರು ಮಾತು ಇವತ್ತಿಗೂ ಸತ್ಯ ಎಂದರು.ಪುಟ 2



## ಸರ್ಕಾರ ನಿಮ್ಮ ಜೊತೆಗಿದೆ: ಕಂಪ್ಲೇಂಟ್ ಕೊಡಿ

ಆರ್‌ಬಿಐ ನಿಯಮಾವಳಿ ಉಲ್ಲಂಘಿಸುವ ,ಹೆಚ್ಚಿನ ಬಡ್ಡಿದರ ವಸೂಲು ಮಾಡುವ ಹಾಗೂ ಕಾನೂನು ಬಾಹಿರವಾಗಿ ಕಾರ್ಯನಿರ್ವಹಿಸುತ್ತಿರುವ ಮೈಕ್ರೋ ಫೈನಾನ್ಸ್ ಸಂಸ್ಥೆಗಳ ಮೇಲೆ ಸರ್ಕಾರ ಕಾನೂನು ಕ್ರಮ ಕೈಗೊಳ್ಳಲಿದ್ದು, ಜನರು ಆತಂಕಕ್ಕೊಳಗಾಗಿ ಆತ್ಮಹತ್ಯೆಯಂತಹ ತಪ್ಪು ನಿರ್ಧಾರಗಳನ್ನು ಕೈಗೊಳ್ಳಬಾರದು ಎಂದು ರಾಜ್ಯದ ಜನರಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ವಿನಂತಿಸಿದರು.

ಮೈಕ್ರೋ ಫೈನಾನ್ಸ್ ನಿಂದ ಜನರಿಗಾಗುತ್ತಿರುವ ತೊಂದರೆ ಹಾಗೂ ಬಿಜೆಪಿಯವರು ರಾಜ್ಯದಲ್ಲಿ ಗೂಂಡಾ ರಾಜ್ಯವಿದೆ ಎಂಬ ಆರೋಪಕ್ಕೆ ಪ್ರತಿಕ್ರಿಯೆ ನೀಡಿ, ಜನರು ಸಾಲ ಲಭ್ಯವಾಗುವ ಕಡೆ ಸಾಲ ಪಡೆಯುತ್ತಿದ್ದಾರೆ. ಖಾಸಗಿ ಹಣಕಾಸು ಸಂಸ್ಥೆ, ಲೇವಾದೇವಿಗಾರರು ನೀಡುವ ಸಾಲದ ಮೇಲೆ ಹೆಚ್ಚಿನ ಬಡ್ಡಿ ದರವನ್ನು ಹಾಕುವುದಲ್ಲದೇ, ಗೂಂಡಾಗಳ ಮೂಲಕ ಜನರನ್ನು ಹೆದರಿಸಿ, ಅಮಾನವೀಯ ರೀತಿಯಲ್ಲಿ ಸಾಲ ವಸೂಲಾತಿಯಲ್ಲಿ ತೊಡಗಿದ್ದಾರೆ. ಮೈಕ್ರೋ ಫೈನಾನ್ಸ್ ಸಂಸ್ಥೆಗಳು ವಾರ್ಷಿಕವಾಗಿ ಶೇ. 28 ರಿಂದ 30 ರಷ್ಟು ಬಡ್ಡಿ ವಸೂಲಿ ಮಾಡುತ್ತಿವೆ. ಇದರಿಂದ ಸಾಲ ಪಡೆದ ಪುಟ 2



ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಅವರು ಶುಕ್ರವಾರ ಶ್ರೀಕ್ಷೇತ್ರ ಸುತ್ತೂರು ಮಠದ ಮಹದೇಶ್ವರ ದೇವಸ್ಥಾನಕ್ಕೆ ಭೇಟಿ ನೀಡಿ ವಿಶೇಷ ಪೂಜೆ ಸಲ್ಲಿಸಿ, ನಾಡಿನ ಒಳಿತಿಗಾಗಿ ಪ್ರಾರ್ಥಿಸಿದರು.

## ಭಾರತ 3ನೇ ದೊಡ್ಡ ಆರ್ಥಿಕತೆಯಾಗಲಿದೆ

**ನವದೆಹಲಿ:** ಭಾರತ ಜಗತ್ತಿನ ಮೂರನೇ ಅತಿದೊಡ್ಡ ಆರ್ಥಿಕತೆಯಾಗಲಿದೆ ಎಂದು ರಾಷ್ಟ್ರಪತಿ ದ್ರೌಪದಿ ಮುರ್ಮು ಸಂಸತ್ತಿನ ಜಂಟಿ ಅಧಿವೇಶನವನ್ನು ಉದ್ದೇಶಿಸಿ ಮಾಡಿದ ಭಾಷಣದಲ್ಲಿ ತಿಳಿಸಿದ್ದಾರೆ. ಆರ್ಥಿಕ ಬೆಳವಣಿಗೆ ಮತ್ತು ಅಭಿವೃದ್ಧಿಯನ್ನು ಹೆಚ್ಚಿಸಲು ಸರ್ಕಾರ, ವೇಗವಾಗಿ ಪ್ರಮುಖ ನಿರ್ಧಾರಗಳನ್ನು ಜಾರಿಗೊಳಿಸುತ್ತಿದೆ ಎಂದಿದ್ದಾರೆ.



ಸರ್ಕಾರ ರೈತರಿಗೆ ಬೆಂಬಲ ನೀಡಲು ಬದ್ಧವಾಗಿದೆ, ಪಿಎಂ ಕಿಸಾನ್‌ಸಮ್ಮಾನ್‌ನಿಧಿ ಯೋಜನೆಯಲ್ಲಿ ₹41,000 ಕೋಟಿಯನ್ನು ಲಕ್ಷಾಂತರ ರೈತರಿಗೆ ವಿತರಿಸಲಾಗಿದೆ, ಈ ಉಪಕ್ರಮ ರೈತರಿಗೆ ಆರ್ಥಿಕವಾಗಿ ನೆರವಾಗುವ ಜೊತೆಗೆ ಕೃಷಿಯಲ್ಲಿ ಸ್ಥಿರತೆ ಮತ್ತು ಗ್ರಾಮೀಣ ಆರ್ಥಿಕತೆಯ ಬೆಳವಣಿಗೆಗೆ ಭರವಸೆ ನೀಡಲಿದೆ ಎಂದು ತಿಳಿಸಿದರು. ಕೇಂದ್ರದ ಹಲವು ಪ್ರಮುಖ ನೀತಿ, ಸುಧಾರಣೆಗಳನ್ನು ಉಲ್ಲೇಖಿಸಿದ ಅವರು, 'ಒಂದು ದೇಶ, ಒಂದು ಚುನಾವಣೆ' ದೇಶದೆಲ್ಲೆಡೆ ಚುನಾವಣೆಯನ್ನು ಸಮ್ಮಿಳಿತಗೊಳಿಸಲಿದೆ, ವಕ್ಫ್‌ಮಸೂದೆಯು ವಕ್ಫ್‌ಆಸ್ತಿ ನಿರ್ವಹಣೆಯಲ್ಲಿ ಪಾರದರ್ಶಕತೆಯನ್ನು ಪರಿಚಯಿಸಲಿದೆ ಎಂದರು.ಯುವ ಸಬಲೀಕರಣ ಮತ್ತು ಉದ್ಯೋಗದ ಕುರಿತು ಮಾತನಾಡಿ, ಸರ್ಕಾರವು ಶಿಕ್ಷಣದ ಅವಕಾಶವನ್ನು ವಿಸ್ತರಿಸುವ ಮತ್ತು ಉದ್ಯೋಗ ಸೃಷ್ಟಿಯ ಪ್ರಯತ್ನವನ್ನು ಮುಂದುವರೆಸಿದೆ ಎಂದು ಹೇಳಿದರು.

ತಮ್ಮದೇ ಮನೆ ನಿರ್ಮಾಣ ಮಾಡಬೇಕೆಂಬ ಕನಸು ಹೊಂದಿರುವ ಮಧ್ಯಮ ವರ್ಗದವರಿಗೆ ಮನೆ ಮಾಲೀಕತ್ವವನ್ನು ಹೌಸಿಂಗ್ ಪುಟ 2

## ಕಲಾಪಕ್ಕೆ ಸಹಕರಿಸಿ

**ನವದೆಹಲಿ:** ಇಂದಿನಿಂದ ಆರಂಭವಾಗಲಿರುವ ಅಧಿವೇಶನದ ಸುಗಮ ಕಲಾಪಕ್ಕೆ ಸಹಕಾರ ನೀಡುವಂತೆ ವಿಪಕ್ಷ ಸದಸ್ಯರ ಬಳಿ ಪ್ರಧಾನಿ ನರೇಂದ್ರ ಮೋದಿ ಮನವಿ ಮಾಡಿದ್ದಾರೆ. ಈ ಕುರಿತು ಮಾತನಾಡಿರುವ ನಾಳೆ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಕೇಂದ್ರ ಬಜೆಟ್ ಮಂಡನೆ ಮಾಡಲಿದ್ದಾರೆ. ದೇಶದ ಬಡವರಿಗೆ ಲಕ್ಷ್ಮೀ ದೇವಿಯ ಪುಟ 2



## ವಿವಾದಿತ ಹೇಳಿಕೆ : ಆಯೋಗದ ಮುಂದೆ ಕೇಜ್ರಿ



**ನವದೆಹಲಿ:** ಯಮುನಾ ನದಿಯಲ್ಲಿ ವಿಷ ಬೆರೆಸಿರುವ ಕುರಿತು ಚುನಾವಣಾ ಆಯೋಗ ನೀಡಿರುವ ನೋಟಿಸ್‌ಗೆ ಸಂಬಂಧಿಸಿದಂತೆ ಎಎಪಿ ಮುಖ್ಯಸ್ಥ ಅರವಿಂದ್ ಕೇಜ್ರಿವಾಲ್ ಶುಕ್ರವಾರ ಚುನಾವಣಾ ಆಯೋಗದ ಕಚೇರಿಗೆ ಭೇಟಿ ನೀಡಿ ಸಮಜಾಯಿಷಿ ನೀಡಿದ್ದಾರೆ.

ದೆಹಲಿ ಮುಖ್ಯಮಂತ್ರಿ ಅತಿಶಿ ಮತ್ತು ಪಂಜಾಬ್ ಮುಖ್ಯಮಂತ್ರಿ ಭಗವಂತ್ ಮಾನ್ ಅವರೊಂದಿಗೆ ಕೇಜ್ರಿವಾಲ್ ಅವರು ಇಂದು ಬೆಳಿಗ್ಗೆ 11 ಗಂಟೆಗೆ ಇ ಸಿ ಕಚೇರಿಗೆ ಭೇಟಿ ನೀಡಿ ಮಾಹಿತಿ ನೀಡಿದ್ದಾರೆ ಎಂದು ತಿಳಿದುಬಂದಿದೆ.

ಇ ಸಿ ಮತ್ತು ಅದರ ಮುಖ್ಯ ಚುನಾವಣಾ ಆಯುಕ್ತರು ತಮ ಹೇಳಿಕೆಯ ಮೇಲೆ ರಾಜಕೀಯ ಮಾಡುತ್ತಿದ್ದಾರೆ ಎಂದು ಕೇಜ್ರಿವಾಲ್ ನಿನ್ನೆ ಆರೋಪಿಸಿದರು ಮತ್ತು ಹರಿಯಾಣದಿಂದ ದೆಹಲಿಗೆ ಸರಬರಾಜಾಗುವ ಯಮುನಾ ನೀರಿನಲ್ಲಿ ಹೆಚ್ಚಿನ ಪ್ರಮಾಣದ ಅಮೋನಿಯಾ ಅಂಶವಿದೆ ಎಂದು ಆರೋಪಿಸಿದ್ದರು.

ಬಿಜೆಪಿ ಸರಕಾರವು ಯಮುನಾ ಪುಟ 2

## 'ಅಯೋಗ್ಯರು ಎನ್ನುವವರೇ ಅಯೋಗ್ಯರು'



**ಮೈಸೂರು:** ಎಲ್ಲರಿಗೂ ಅವರ ನಂಬಿಕೆ ಪ್ರಕಾರ ಬದುಕುವ ಸ್ವಾತಂತ್ರ್ಯ ಇದೆ. ಕುಂಭಮೇಳದ ವಿರುದ್ಧ ಮಾತನಾಡುವವರು ಅಯೋಗ್ಯರು ಎನ್ನುವವರೇ ಅಯೋಗ್ಯರು ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿವೈ ವಿಜಯೇಂದ್ರಗೆ ವಿಧಾನಪರಿಷತ್ ಸದಸ್ಯ ಯತೀಂದ್ರ ಸಿದ್ದರಾಮಯ್ಯ ತಿರುಗೇಟು ನೀಡಿದ್ದಾರೆ.

ಮಾಧ್ಯಮಗಳ ಜೊತೆ ಮಾತನಾಡಿದ ಯತೀಂದ್ರ ಸಿದ್ದರಾಮಯ್ಯ, ಹಿಂದೂ ಧರ್ಮದಲ್ಲಿ ಒಂದೇ ರೀತಿಯ ನಂಬಿಕೆ ಇದೆಯಾ? ಹಿಂದೂಧರ್ಮದಲ್ಲಿ ಹಲವು ರೀತಿಯ ನಂಬಿಕೆ ಇದೆ. ನಾಸ್ತಿಕರೂ ಕೂಡ ಹಿಂದೂ ದರ್ಮದಲ್ಲಿದ್ದಾರೆ ನಾಸ್ತಿಕರೆಲ್ಲಾ ಹಿಂದೂ ದರ್ಮದ ಬಗ್ಗೆ ಟೀಕೆ ಮಾಡುತ್ತಾರೆ ಎಂದರು.

ಕುಂಭಮೇಳದಲ್ಲಿ ಸ್ನಾನದ ಬಗ್ಗೆ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹೇಳಿಕೆ ಕುರಿತು ಪ್ರತಿಕ್ರಿಯಿಸಿದ ಯತೀಂದ್ರ ಸಿದ್ದರಾಮಯ್ಯ, ಯಾರಿಗೆ ನಂಬಿಕೆ ಇರುತ್ತದೆ ಅವರು ಹೋಗಿ ಸ್ನಾನ ಮಾಡುತ್ತಾರೆ.

ನಂಬಿಕೆ ಇಲ್ಲದವರು ಕುಂಭಮೇಕ್ಕೆ ಹೋಗಿ ಸ್ನಾನಮಾಡಲ್ಲ ಒಂದೇ ರೀತಿ ನಂಬಿಕೆ ಇರಬೇಕು ಎಂದು ಹೇಳಲು ಸಾಧ್ಯವಿಲ್ಲ. ನನಗೆ ದೇವರ ಮೇಲೆ ಇದೆ ಎಂದರು.

## ಕಾಲ್ತುಳಿತ: ಕೆಲವರ ಪತ್ತೆ ಇನ್ನೂ ಹಲವರು ನಾಪತ್ತೆ



**ಪ್ರಯಾಗರಾಜ್:** ಮೌನಿ ಅಮಾವಾಸ್ಯೆಯಂದು ಪ್ರಯಾಗ್‌ರಾಜ್‌ನಲ್ಲಿ ಸಂಭವಿಸಿದ ಕಾಲ್ತುಳಿತದ ನಂತರ ಕೆಲವರು ಇಹಲೋಕ ತ್ಯಜಿಸಿ ಕುಟುಂಬದಿಂದ ದೂರಾದರೇ, ಇನ್ನೂ ಕೆಲವರು ನಾಪತ್ತೆಯಾಗಿದ್ದಾರೆ.

ಕುಟುಂಬದಿಂದ ಬೇರ್ಪಟ್ಟು ನಾಪತ್ತೆಯಾದವರ ಪತ್ತೆಗಾಗಿ ಕುಟುಂಬ ಸದಸ್ಯರು ಇನ್ನಿಲ್ಲದಂತೆ ಅಲೆದಾಡುತ್ತಿರುವ ಘಟನೆ ಮನಕಲುಕುವಂತಿದೆ.

ದೂರದ ಅಮೇರಿಕಾದಲ್ಲಿರುವ ಲೀನಾ ಸಾಹೂಗೆ, ಪ್ರಯಾಗರಾಜ್ ಯಾತ್ರಿಕರ ಸಮುದ್ರದಲ್ಲಿ ಕಣ್ಮರೆಯಾದ 70 ವರ್ಷದ ತಾಯಿ ಚಿನ್ಮೋಯ್ ಬಗ್ಗೆ ಇಲ್ಲಿಯವರೆಗೆ ಯಾವುದೇ ಸುಳಿವು ಸಿಕ್ಕಿಲ್ಲ.ಆದರೆ ಕೊನೆಗೂ ಕುಟುಂಬಸ್ಥರ ಆತಂಕ-ತಳಮಳ ದೂರವಾಗಿ ಚಿನ್ಮೊಯ್ ಲಾಸ್ಟ್ ಅಂಡ್ ಫೌಂಡ್ ಸೆಂಟರ್ 21 ರಲ್ಲಿ ಕಂಡು ಬಂದಿದ್ದಾರೆ, ಇದರಿಂದ ಕುಟುಂಬದವರ ಸಂತಸ ಮುಗಿಲು ಮುಟ್ಟಿದೆ.ಇದು ಆಡಳಿತವು ಸ್ಥಾಪಿಸಿದ ಹಲವು ಕೇಂದ್ರಗಳಲ್ಲಿ ಒಂದಾಗಿದೆ.

ಹಾಗೆಯೇ ಬಂಗಾಳದ ಮುಖೇಶ್ ಚೌಹಾಣ್ ಕಳೆದುಹೋದ ತನ್ನ ತಂದೆಯನ್ನು ಇಡೀ ಪ್ರಯಾಗ್ ರಾಜ್ ಮೂಲೆ ಮೂಲೆಯಲ್ಲಿ ಹುಡುಕಿದ್ದಾರೆ.

ಕೊನೆಗೆ ಮುಖೇಶ್ ತನ್ನ ತಂದೆಯನ್ನು ಸೆಕ್ಟರ್ 18 ರ ಶಿಬಿರದಲ್ಲಿ ಸುರಕ್ಷಿತವಾಗಿ ಇರುವುದನ್ನು ಕಂಡು ಸಂತಸದ ಕಣ್ಣೀರು ಕಣ್ಣೀರು ಸುರಿಸಿದ್ದಾರೆ.

ಆದರೆ ಈ ಅದೃಷ್ಟ ಎಲ್ಲರಿಗೂ ಒದಗಿ ಬಂದಿಲ್ಲ. ಏಕೆಂದರೆ ದುಮ್ಕಾದ ವೃದ್ಧೆ ಸೇರಿದಂತೆ ನಾಲ್ವರು ನಾಪತ್ತೆಯಾಗಿದ್ದಾರೆ. ಪ್ರತಿಯೊಬ್ಬರ ಕುಟುಂಬ ಸದಸ್ಯರು ತಮ್ಮ ಕಳೆದುಹೋದವರ ಹುಡುಕಾಟದಲ್ಲಿ ನಿರತರಾಗಿದ್ದಾರೆ. ಗುರುವಾರ ಸಂಜೆಯವರೆಗೂ ನಾಪತ್ತೆಯಾದವರನ್ನು ಯಾರೂ ಪತ್ತೆ ಮಾಡಿರಲಿಲ್ಲ. ನಾಪತ್ತೆಯಾಗಿರುವ ನಾಲ್ವರೂ ವೃದ್ಧರು. ಪುಟ 2

## ಉದ್ದೇಶ ಪೂರ್ವಕವಾಗಿ ಟಾರ್ಗೆಟ್ ಮಾಡಿದೆ

**ಮೈಸೂರು:** ಮುಡಾ ಪ್ರಕರಣಕ್ಕೆ ಸಂಬಂಧಿಸಿದಂತೆ ಉದ್ದೇಶಪೂರ್ವಕವಾಗಿ ನನ್ನನ್ನು ಟಾರ್ಗೆಟ್ ಮಾಡಿ ಇಡಿ ತನಿಖೆ ನಡೆಸುತ್ತಿದೆ. ನನ್ನ ಇಮೇಜ್ ಗೆ ಡ್ಯಾಮೇಜ್ ಮಾಡುವ ಕೆಲಸ ನಡೆಯುತ್ತಿದೆ ಎಂದು ಸಿಎಂ ಸಿದ್ದರಾಮಯ್ಯ ಕಿಡಿಕಾರಿದ್ದಾರೆ.



ಮೈಸೂರಿನಲ್ಲಿ ಮಾಧ್ಯಮಗಳ ಜೊತೆ ಮಾತನಾಡಿದ ಅವರು, ನನ್ನನ್ನ ಟಾರ್ಗೆಟ್ ಮಾಡಿ ಇಡಿ ತನಿಖೆ ಮಾಡುತ್ತಿದ್ದಾರೆ . ತನಿಖೆ ಮಾಡುತ್ತಿರುವ ಲೋಕಾಯುಕ್ತ ಸ್ವತಂತ್ರ ತನಿಖೆ ಅಲ್ಲವೇ? ಬೇಕು ಅಂತಾನೆ ರಾಜಕೀಯ ಮಾಡಲಾಗುತ್ತಿದೆ. ಇಡಿ ರಿಲೀಸ್ ಮಾಡಿರುವುದು ಸೀಜ್ ರಿಪೋರ್ಟ್ ಅಷ್ಟೇ. ಅಕ್ರಮ ಹಣ ವರ್ಗಾವಣೆ ಆಗಿರುವುದಕ್ಕೆ ಸಾಕ್ಷಿ ಏನಿದೆ? ಇದು ಮನಿ ಲಾಂಡರಿಂಗ್ ಬರಲ್ಲ ಎಂದು ಕೋರ್ಟ್ ಹೇಳಿದೆ ಎಂದರು.

ಉದ್ದೇಶಪೂರ್ವಕವಾಗಿ ರಾಜಕೀಯ ಮಾಡುತ್ತಿದ್ದಾರೆ. ನಾನು ಸಿಎಂ ಆಗಿದ್ದಕ್ಕೆ ನನ್ನನ್ನು ಟಾರ್ಗೆಟ್ ಮಾಡಲಾಗುತ್ತಿದೆ. ನನ್ನ ಪತ್ನಿಗೆ ಇಡಿಯವರು 2 ಬಾರಿ ನೋಟಿಸ್ ಕೊಟ್ಟಿದ್ದಾರೆ. ಇದನ್ನು ಪ್ರಶ್ನಿಸಿ ನನ್ನ ಪತ್ನಿ ನ್ಯಾಯಾಲಯ ಮೊರೆಹೋಗಿದ್ದಾರೆ ಎಂದರು.

## ಅರ್ಥಪೂರ್ಣ ಚರ್ಚೆಗಳಿಗೆ ದಾರಿ ಮಾಡಿಕೊಡಿ

**ನವದೆಹಲಿ:** ಸಂಸತ್ತಿನಲ್ಲಿ ರಚನಾತ್ಮಕ ಚರ್ಚೆ ಮತ್ತು ಸಂವಾದದ ಅಗತ್ಯವನ್ನು ಒತ್ತಿಹೇಳಿರುವ ಉಪ ರಾಷ್ಟ್ರಪತಿ ಜಗದೀಪ್ ಧನಕರ್ ಅವರು, ಕಲಾಪ ಅಡ್ಡಿಪಡಿಸುವ ಯುಗವು ಕೊನೆಗೊಳ್ಳಬೇಕು ಮತ್ತು ಅರ್ಥಪೂರ್ಣ ಚರ್ಚೆಗಳಿಗೆ ದಾರಿ ಮಾಡಿಕೊಡಬೇಕು ಎಂದು ಹೇಳಿದರು.

ರಾಷ್ಟ್ರೀಯ ಮಹಿಳಾ ಆಯೋಗದ (ಎನ್‌ಸಿಡಬ್ಲ್ಯು) 33ನೇ ಸಂಸ್ಥಾಪನಾ ದಿನವನ್ನು ಉದ್ದೇಶಿಸಿ ಮಾತನಾಡಿದ ಅವರು, ದೇಶಕ್ಕೆ ನಿಜವಾಗಿಯೂ ಬೇಕಾಗಿರುವುದು ರಚನಾತಕ ಮತ್ತು ಸಹಕಾರಿಯಾಗಿರುವ ವಿರೋಧವಾಗಿದೆ ಎಂದಿದ್ದಾರೆ.

ಈ ಸಂಸತ್ತಿನಲ್ಲಿ ಈಗ ಹೆಚ್ಚಿನ ಚರ್ಚೆ, ಸಂವಾದ, ಚರ್ಚೆ, ಚರ್ಚೆಗಳು ನಡೆಯಲಿವೆ ಮತ್ತು ಈ ಸಂಸತ್ತಿನಲ್ಲಿ ಗೊಂದಲ ಅಥವಾ ಅಡ್ಡಿ ಇಲ್ಲ ಎಂದು ರಾಜ್ಯಸಭಾ ಅಧ್ಯಕ್ಷರು



ಸಹಕಾರಿ ವಿರೋಧದ ಮಹತ್ವವನ್ನು ಎತ್ತಿ ತೋರಿಸಿದರು. ಮಹಿಳಾ ಸಬಲೀಕರಣವನ್ನು ಪ್ರತಿಬಿಂಬಿಸಿದ ಅವರು, ಇತ್ತೀಚೆಗೆ ಮಹಿಳೆಯರಿಗೆ ಶಾಸನಸಭೆಗಳಲ್ಲಿ ಮೀಸಲಾತಿ ನೀಡಿರುವುದನ್ನು ಶ್ಲಾಘಿಸಿದರು, ಇದು ಹೆಗ್ಗುರುತು ಸಾಧನೆ ಎಂದು ಬಣ್ಣಿಸಿದರು.

ಈಗ ನಾವು ಮಹಿಳೆಯರಿಗೆ ಮೂರನೇ ಒಂದು ಭಾಗದಷ್ಟು ಮೀಸಲಾತಿಯನ್ನು ಹೊಂದಿದ್ದೇವೆ ಎಂದು ಅವರು ಹೇಳಿದರು, ಮಹಿಳೆಯರ ಆಕಾಂಕ್ಷೆಗಳನ್ನು ಬೆಂಬಲಿಸುವ ಸಕಾರಾತಕ ಪರಿಸರ ವ್ಯವಸ್ಥೆಗೆ ದೇಶವು ಸಾಕ್ಷಿಯಾಗಿದೆ. ಆದಾಗ್ಯೂ, ಹೆಚ್ಚಿದ ಆಕಾಂಕ್ಷೆಗಳೊಂದಿಗೆ ಹೆಚ್ಚಿನ ಸವಾಲುಗಳು ಬರುತ್ತವೆ,

ಶಕ್ತಿ ಮತ್ತು ನಿರ್ದೇಶನದ ನಿಯಂತ್ರಣದ ಅಗತ್ಯವಿರುತ್ತದೆ ಎಂದು ಅವರು ಎಚ್ಚರಿಸಿದ್ದಾರೆ.ಮಹಿಳೆಯರ ಸಕ್ರಿಯ ಕೊಡುಗೆ ಇಲ್ಲದೆ ಭಾರತದ ಪ್ರಗತಿ ಅಪೂರ್ಣ ಎಂದು ಉಪಾಧ್ಯಕ್ಷರು ಒತ್ತಿ ಹೇಳಿದರು. ಪುಟ 2

## ಯಾರ ಒಳಜಗಳ ನಂಬಿ ನಾವು ರಾಜಕಾರಣ ಮಾಡುತ್ತಿಲ್ಲ

**ಶಿವಮೊಗ್ಗ:** ಯಾರ ಒಳಜಗಳ ನಂಬಿ ನಾವು ರಾಜಕಾರಣ ಮಾಡುತ್ತಿಲ್ಲ ಜನರ ನಂಬಿಕೆ ಉಳಿಸಿಕೊಂಡು ಹೋಗುವುದು ರಾಜಕೀಯ ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿದ್ದಾರೆ.

ಮಾಧ್ಯಮಗಳ ಜೊತೆ ಮಾತನಾಡಿದ ಡಿಸಿಎಂ, ಯಾರ ಒಳಜಗಳ ನಂಬಿ ನಾವು ರಾಜಕಾರಣ ಮಾಡುತ್ತಿಲ್ಲ ಜನರ ನಂಬಿಕೆ ಉಳಿಸಿಕೊಂಡು ಹೋಗುವುದು ರಾಜಕೀಯ. ತಮ್ಮಲ್ಲಿರುವ ಒಳ ಜಗಳ ಮುಚ್ಚಿಕೊಳ್ಳಲು ಕಾಂಗ್ರೆಸ್ ಮೇಲೆ ಬಿಜೆಪಿ ಆರೋಪ ಮಾಡುತ್ತಿದೆ ಎಂದು ಟಾಂಗ್ ಕೊಟ್ಟರು.

ಜನರು ಬಿಜೆಪಿಯನ್ನ ವಿಪಕ್ಷದಲ್ಲಿ ಕೂರಿಸಿದ್ದಾರೆ. ಬಿಜೆಪಿಗೆ ಅಧಿಕಾರ ನೀಡಿದಾಗ ಅನುಭವ ಇರಲಿಲ್ಲ ಎಂದು ಡಿಕೆ ಶಿವಕುಮಾರ್ ಹೇಳಿದರು.

ಇನ್ನೂ ಬೇರೆ ಪಕ್ಷಗಳಿಂದ ಬಂದು ಬಿಜೆಪಿ ಸೇರಿದಂತ ಶಾಸಕರಗಳನ್ನು ಅಲ್ಲಿ



ಬಳಸಿಕೊಳ್ಳಲಾಗುತ್ತಿದೆ. ಅವರುಗಳನ್ನು ನೇಪ ಮಾತ್ರ ಶಾಸಕರು, ಸಂಸದರು ಎಂದ ಪಕ್ಷದಲ್ಲಿಟ್ಟುಕೊಂಡಿದ್ದಾರೆಯೇ ಹೊರತು ಅಭಿವೃದ್ಧಿಗಾಗಲೀ ಅವರ ಬೆಳವಣಿಗೆಗಾಗಲೀ ಅಲ್ಲ. ಅವರುಗಳನ್ನು ಕೇವಲ ಉಪಯೋಗದ ವಸ್ತುಗಳನ್ನಾಗಿ ಬಳಸಿ ಬಿಸಾಕುತ್ತಿದ್ದಾರೆ ಎಂದು ಡಿ.ಕೆ. ಶಿವಕುಮಾರ್ ಖಾರವಾಗಿ ನುಡಿದರು.

ಮೊದಲ ಪುಟದಿಂದ

## ಕಂಪ್ಲೇಂಟ್ ಕೊಡಿ

ಜನರು ಬೇಸತ್ತು, ಆತ್ಮಹತ್ಯೆಗೆ ಶರಣಾಗುತ್ತಿರುವುದನ್ನು ಗಮನಿಸಲಾಗಿದೆ. ಮೈಕ್ರೋ ಫೈನಾನ್ಸ್ ವ್ಯವಸ್ಥೆಗಳು ಕೇಂದ್ರಸರ್ಕಾರದ ಅಧೀನದಲ್ಲಿ ಬರುವ ರಿಸರ್ವ್ ಬ್ಯಾಂಕ್ ನ ಮಾರ್ಗಸೂಚಿಯಂತೆ ಕಾರ್ಯನಿರ್ವಹಿಸುತ್ತವೆ. ಆದ್ದರಿಂದ ಮೈಕ್ರೋ ಫೈನಾನ್ಸ್ ನ ನಿಯಂತ್ರಣಕ್ಕೆ ಸಂಬಂಧಿಸಿದಂತೆ ಸರ್ಕಾರ ಸಧ್ಯದಲ್ಲಿಯೇ ಸುಗ್ರೀವಾಜ್ಞೆಯನ್ನು ಹೊರಡಿಸಲಿದ್ದು, ಕಿರುಕುಳ ನೀಡುತ್ತಿರುವ ಸಂಸ್ಥೆಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಿದೆ ಎಂದರು.

## ದೊಡ್ಡ ಆರ್ಥಿಕತೆಯಾಗಲಿದೆ

ಸ್ಕೀಮ್‌ಗಳ ಮೂಲಕ ನೀಡಲು ಸರ್ಕಾರ ಬದ್ಧ, ವಿವಿಧ ಉಪಕ್ರಮಗಳ ಮೂಲಕ ತೀರಾ ಬಡತನದಿಂದ 25 ಕೋಟಿ ಜನರನ್ನು ಯಶಸ್ವಿಯಾಗಿ ಮೇಲೆತ್ತಲಾಗಿದೆ, ಆರ್ಥಿಕ ಒಳಗೊಳ್ಳುವಿಕೆ ಮತ್ತು ಸಾಮಾಜಿಕ ಮೇಲೆತ್ತುವಿಕೆಯ ಮೇಲೆ ಆಡಳಿತದ ಗಮನ ಕೇಂದ್ರೀಕೃತವಾಗಿದೆ ಎಂದರು.

ಮಹಿಳೆಯರ ಆರ್ಥಿಕ ಮತ್ತು ತಾಂತ್ರಿಕ ಸಬಲೀಕರಣದ ನಿಟ್ಟಿನಲ್ಲಿ ಡ್ರೋಣ್ ದೀದಿ ಯೋಜನೆಯನ್ನು ಉಲ್ಲೇಖಿಸಿ, ಈ ಯೋಜನೆಯ ಮೂಲಕ ಮಹಿಳೆಯರಿಗೆ ಡ್ರೋಣ್‌ತಂತ್ರಜ್ಞಾನವನ್ನು ನೀಡುವ ಜೊತೆಗೆ ಕೃಷಿ ಮತ್ತು ಲಾಜಿಸ್ಟಿಕ್‌ವಲಯದಲ್ಲಿ ಹೊಸ ಉದ್ಯೋಗಾವಕಾಶ ಸಿಗುತ್ತಿದೆ ಎಂದು ವಿವರಿಸಿದರು.

ಡಿಜಿಟಲ್‌ಡೊಮೈನ್‌ನಲ್ಲಿ ಭಾರತ ಪ್ರಗತಿ ಸಾಧಿಸುತ್ತಿದೆ, ಹೊಸ ಹೊಸ ಅವಿಷ್ಕಾರದಲ್ಲಿ ಜಾಗತಿಕ ನಾಯಕನಾಗುವ ಆಕಾಂಕ್ಷೆ ಹೊಂದಿದೆ, ಸೈಬರ್‌ಸೆಕ್ಯೂರಿಟಿಯತ್ತ ಸರ್ಕಾರ ನಿರಂತರವಾಗಿ ಸಾಮರ್ಥ್ಯದಾಯಕವಾಗಿ ಕಾರ್ಯ ನಿರ್ವಹಿಸುತ್ತಿದೆ, ಡಿಜಿಟಲ್‌ವಂಚನೆಗಳು ಮತ್ತು ಡೀಪ್‌ಫೇಕ್‌ಗಳು ಸಾಮಾಜಿಕ, ಆರ್ಥಿಕ ಮತ್ತು ರಾಷ್ಟ್ರೀಯ ಭದ್ರತೆಗೆ ಪ್ರಮುಖ ಸವಾಲಾಗಿವೆ ಎಂದರು.

ಭಾಷಣದ ವೇಳೆ ಮಹಾ ಕುಂಭ ಮೇಳದಲ್ಲಿ ನಡೆದ ಕಾಲ್ತುಳಿತದಲ್ಲಿ ಸಾವನ್ನಪ್ಪಿದ ಘಟನೆಗೆ ರಾಷ್ಟ್ರಪತಿ ಸಂತಾಪ ವ್ಯಕ್ತಪಡಿಸಿದರು, ಇದೇ ವೇಳೆ ಗಾಯಾಳುಗಳ ಶೀಘ್ರ ಚೇತರಿಕೆಗೆ ಹಾರೈಸಿದರು, ಮಾಜಿ ಪ್ರಧಾನಿ ಡಾ.ಮನಮೋಹನ್‌ಸಿಂಗ್‌ಅವರ ಅಗಲಿಕೆಗೂ ದುಃಖ ವ್ಯಕ್ತಪಡಿಸಿದರು.

## ಕಲಾಪಕ್ಕೆ ಸಹಕರಿಸಿ

ಕೃಪೆ ಸಿಗಲಿ. ಅಧಿವೇಶನದಲ್ಲಿ ಐತಿಹಾಸಿಕ ಬಿಲ್‌ಗಳ ಮಂಡನೆಯಾಗಲಿದೆ. ಯುವಕರ ಗಮನದಲ್ಲಿಟ್ಟುಕೊಂಡು ಯೋಜನೆ ಜಾರಿ ಮಾಡಲಾಗುತ್ತದೆ. ಅಧಿವೇಶನದಲ್ಲಿ ಭಾರತದ ಅಭಿವೃದ್ದಿಗಳ ಬಗ್ಗೆ ಚರ್ಚೆ ಮಾಡಿ. ಸುಗಮ ಕಲಾಪಕ್ಕೆ ಸಹಕಾರ ನೀಡಿ ಎಂದು ಪ್ರಧಾನಿ ಮೋದಿ ಮನವಿ ಮಾಡಿದರು.

## ಆಯೋಗದ ಮುಂದೆ ಕೇಜ್ರಿ

ನೀರಿನಲ್ಲಿ ವಿಷ ಬೆರೆಸಿ ದೆಹಲಿಯಲ್ಲಿ ಹತ್ಯಾಕಾಂಡಕ್ಕೆ ಯತ್ನಿಸುತ್ತಿದೆ ಎಂಬ ಅವರ ಆರೋಪದ ಮೇಲೆ ಉತ್ತರ ಕೋರಿ ಇಸಿ ಅವರಿಗೆ ಎರಡು ನೋಟಿಸ್‌ಗಳನ್ನು ನೀಡಿತ್ತು.

ನವದೆಹಲಿ ಕ್ಷೇತ್ರದಿಂದ ದೆಹಲಿ ಚುನಾವಣೆಗೆ ಸ್ಪರ್ಧಿಸುತ್ತಿರುವ ಕೇಜ್ರಿವಾಲ್, ಇಂದು ಬೆಳಿಗ್ಗೆ 11 ಗಂಟೆಯೊಳಗೆ ದೆಹಲಿ ಜಲ ಮಂಡಳಿಯ ಸಿಬ್ಬಂದಿ ಇಂಜಿನಿಯರ್‌ಗಳು, ಸ್ಥಳ ಮತ್ತು ವಿಷ ಪತ್ತೆ ಮಾಡುವ ವಿಧಾನದ ವಿವರಗಳನ್ನು ಹಂಚಿಕೊಳ್ಳಲು ಮಾಹಿತಿ ಪಡೆದುಕೊಂಡಿದ್ದಾರೆ ಎಂದು ವರದಿಯಾಗಿದೆ.

## ಇನ್ನೂ ಹಲವರು ನಾಪತ್ತೆ

ಎಲ್ಲಾ ಜನರು ಸ್ಥಳೀಯ ಪೊಲೀಸರಿಗೆ ದೂರು ನೀಡಿ ತಮ್ಮ ಸಂಬಂಧಿಕರನ್ನು ಹುಡುಕುವಂತೆ ಮನವಿ ಮಾಡಿದ್ದಾರೆ, ಆದರೆ ಇದುವರೆಗೆ ಮಹಿಳೆ ಸೇರಿದಂತೆ ನಾಲ್ವರು ಪತ್ತೆಯಾಗಿಲ್ಲ. ಇದರಿಂದ ಕುಟುಂಬ ಸದಸ್ಯರು ತೀವ್ರ ಆತಂಕದಲ್ಲಿದ್ದಾರೆ. ಕುಟುಂಬ ಸದಸ್ಯರು ಪ್ರಯಾಗ್‌ರಾಜ್‌ನಲ್ಲಿ ಕಳೆದುಹೋದವರ ಹುಡುಕಾಟದಲ್ಲಿ ತೊಡಗಿದ್ದಾರೆ. ಪ್ರತಿಯೊಬ್ಬರ ಕುಟುಂಬ ಸದಸ್ಯರು ದುಃಖ ತಡೆಯಲಾಗದೆ ಕಣ್ಣೀರು ಸುರಿಸುತ್ತಿದ್ದಾರೆ.

ದುಮ್ಕಾ ಬ್ಲಾಕ್‌ನ 65 ವರ್ಷದ ದೇವಂತಿ ದೇವಿ, ಜಾರ್‌ಮುಂಡಿ ಬ್ಲಾಕ್‌ನ ಗ್ರಾಮ ಪಂಚಾಯಿತಿ ಗಾರ್ಡ ಅಮರಕುಂಡ ನಿವಾಸಿ ಭೋಲಾ ದರ್ವೆ, ಸರಯ್ಯಹತ್ ಬುಧಿಜಿಲುವಾ ಗ್ರಾಮದ 68 ವರ್ಷದ ಸುರೇಶ್ ಮಂಡಲ್ ಮತ್ತು ಜಾಮಾದ ಲಕ್ಷ್ಮೀಪುರದ 65 ವರ್ಷದ ಭೋಲಾ ಮಾಂಝಿ ನಾಪತ್ತೆಯಾಗಿದ್ದಾರೆ.

## ದಾರಿ ಮಾಡಿಕೊಡಿ

ಮನುಕುಲದ ಅರ್ಧದಷ್ಟು ಕೊಡುಗೆಯಿಲ್ಲದೆ, ಗ್ರಹವು ಸಂತೋಷವಾಗಿರಲು ಸಾಧ್ಯವಿಲ್ಲ ಅಥವಾ ರಾಷ್ಟ್ರವು ಪ್ರಗತಿ ಹೊಂದಲು ಸಾಧ್ಯವಿಲ್ಲ ಎಂದು ಅವರು ಪ್ರತಿಪಾದಿಸಿದರು. ಎನ್‌ಸಿಡಬ್ಲ್ಯೂ ಪಾತ್ರದ ಕುರಿತು, ಸಂವೇದನಾಶೀಲತೆಗಿಂತ ಮಾಹಿತಿಯ ಪ್ರಸಾರ ಮತ್ತು ರಚನಾತಕ ಮನವೊಲಿಕೆಯ ಮೇಲೆ ಕೇಂದ್ರೀಕರಿಸಲು ಧನಕರ್ ಆಯೋಗವನ್ನು ಒತ್ತಾಯಿಸಿದರು.

# ಬಾಕಿ ಪ್ರಕರಣಗಳ ಇತ್ಯರ್ಥ್ಯಕ್ಕೆ: ಐವರು ನಿವೃತ್ತ ನ್ಯಾಯಾಧೀಶರ ನೇಮಕ



ನವದೆಹಲಿ: ದೇಶದ ವಿವಿದ ಹಂತದ ನ್ಯಾಯಾಲಯಗಳಲ್ಲಿ 62 ಲಕ್ಷ ಪ್ರಕರಣಗಳ ಬಾಕಿ ಇದ್ದು ಅವುಗಳ ಇತ್ಯರ್ಥಕ್ಕೆ ಅನುಕೂಲವಾಗುವಂತೆ ಪ್ರತಿ ಹೈಕೋರ್ಟ್ ಗೆ ಗರಿಷ್ಠ 5 ನಿವೃತ್ತ ನ್ಯಾಯಾಧೀಶರನ್ನು ಮರು ನೇಮಕ ಮಾಡಿಕೊಳ್ಳಲು ಸುಪ್ರೀಂ ಕೋರ್ಟ್ ಸಮ್ಮತಿಸಿದೆ.

ಕೇಂದ್ರ ಸರ್ಕಾರದ ಅನುಮತಿಯೊಂದಿಗೆ ಸುಪ್ರೀಂಕೋರ್ಟ್ , ಈ ಆದೇಶ ನೀಡಿದ್ದು ಕ್ರಿಮಿನಲ್ ಪ್ರಕರಣಗಳ ವಿಚಾರಣೆಗೆ ಪ್ರತಿ ಹೈಕೋರ್ಟ್‌ಗೆ ಗರಿಷ್ಠ ಐವರು ನಿವೃತ್ತ ಹೈಕೋರ್ಟ್ ನ್ಯಾಯಾಧೀಶರನ್ನು ಮರುನೇಮಕ ಮಾಡಬಹುದು ಎಂದು ಹೇಳಿದೆ.

ರಾಜ್ಯ ಹೈಕೋರ್ಟ್ ನ್ಲಲ್ಲಿ ಮಂಜೂರಾದ ಸಾಮರ್ಥ್ಯದ ಶೇಕಡಾ 10 ರಷ್ಟು ಮೀರಬಾರದು ಎಂದು ಸುಪ್ರೀಂಕೋರ್ಟ್ ತಿಳಿಸಿದೆ. ಅಟಾರ್ನಿ ಜನರಲ್ ಆರ್ ವೆಂಕಟರಮಣಿ ಅವರು ಕೇಂದ್ರ ಸರ್ಕಾರದಿಂದ ಯಾವುದೇ ಆಕ್ಷೇಪಣೆಯನ್ನು ದಾಖಲಿಸದ ಕಾರಣ, ಮುಖ್ಯ ನ್ಯಾಯಮೂರ್ತಿ ನೇತೃತ್ವದ ಪೀಠ ಸಂವಿಧಾನದ ಸುಪ್ತ ವಿಧಿ 224 ಎ ಅಡಿಯಲ್ಲಿ ಮರುನೇಮಕಾತಿ ಪ್ರಕ್ರಿಯೆಗೆ ಚಾಲನೆ ನೀಡಿತು, ಕಳೆದ 75 ವರ್ಷಗಳಲ್ಲಿ ಕೇವಲ ಮೂರು ಬಾರಿ ಈ ರೀತಿಯ ಅಧಿಕಾರ ಮಾತ್ರ ಬಳಸಲಾಗಿದೆ.

ಪ್ರಕರಣಗಳ ಸಮರ್ಥ ವಿಲೇವಾರಿಯ ಸಾಬೀತಾದ ದಾಖಲೆಯೊಂದಿಗೆ ನಿವೃತ್ತ ನ್ಯಾಯಮೂರ್ತಿಗಳ ಹೆಸರನ್ನು ಸುಪ್ರೀಂ ಕೋರ್ಟ್ ಕೊಲಿಜಿಯಂಗೆ ಶಿಫಾರಸು ಮಾಡಲು ಈ ಕ್ರಮವು ಹೈಕೋರ್ಟ್ ಕೊಲಿಜಿಯಂಗಳನ್ನು ಸಕ್ರಿಯಗೊಳಿಸುತ್ತದೆ, ನಂತರ ಸೂಕ್ತ ವ್ಯಕ್ತಿಗಳನ್ನು ಆಯ್ಕೆ ಮಾಡುತ್ತದೆ ಮತ್ತು ಅವರ ಹೆಸರನ್ನು ನಿಗದಿತ ಅವಧಿಗೆ ಹೈಕೋರ್ಟ್ ಗೆ ತಾತ್ಕಾಲಿಕ ನ್ಯಾಯಾಧೀಶರಾಗಿ ನೇಮಕ ಮಾಡಲು ಶಿಫಾರಸು ಮಾಡುತ್ತದೆ. .

ಸುಪ್ರೀಂ ಕೋರ್ಟ್‌ನ ಅಗ್ರ ಮೂರು ನ್ಯಾಯಾಧೀಶರಾದ ಮುಖ್ಯ ನ್ಯಾಯಮೂರ್ತಿ ಸಂಜೀವ್ ಖನ್ನಾ ಮತ್ತು ನ್ಯಾಯಮೂರ್ತಿಗಳಾದ ಬಿ ಆರ್ ಗವಾಯಿ ಮತ್ತು ಸೂರ್ಯ ಕಾಂತ್ ಅವರ ಪೀಠ ನಿವೃತ್ತ ನ್ಯಾಯಾಧೀಶರು ತಾತ್ಕಾಲಿಕ ನ್ಯಾಯಾಧೀಶರಾಗಿ ನೇಮಕಗೊಂಡ ನಂತರ, ಹೈಕೋರ್ಟ್‌ನ ಹಾಲಿ ನ್ಯಾಯಾಧೀಶರ ನೇತೃತ್ವದ ಪೀಠದ ಭಾಗವಾಗಿರುತ್ತಾರೆ ಎಂದು ಸ್ಪಷ್ಟಪಡಿಸಿದೆ.

ತಾತ್ಕಾಲಿಕ ನ್ಯಾಯಾಧೀಶರಿಗಿಂತ ಜೂನಿಯರ್ ಆಗಿರಬಹುದು ಮತ್ತು ಬಾಕಿ ಇರುವ ಪ್ರಕರಣಗಳನ್ನು ನಿರ್ಧರಿಸಬಹುದು.

ಇದರರ್ಥ, ತಾತ್ಕಾಲಿಕ ನ್ಯಾಯಾಧೀಶರನ್ನು ಹೊಂದಿರುವ ಪೀಠದ ಮುಂದೆ ಯಾವುದೇ ಹೊಸ ಪ್ರಕರಣಗಳನ್ನು ಪಟ್ಟಿ ಮಾಡಲಾಗುವುದಿಲ್ಲ. 1970 ರವರೆಗೆ, ಕೆಲವು ನಿವೃತ್ತ ಸುಪ್ರೀಂಕೋರ್ಡ್ ನ್ಯಾಯಾಧೀಶರನ್ನು ಉನ್ನತ ನ್ಯಾಯಾಲಯಕ್ಕೆ ಮರುನೇಮಕ ಮಾಡಲಾಗಿತ್ತು

ನಿವೃತ್ತ ಹೈಕೋರ್ಟ್ ನ್ಯಾಯಾಧೀಶರ ಮರುನೇಮಕ ನಿದರ್ಶನಗಳು ನಿರ್ದಿಷ್ಟ ಉದ್ದೇಶಗಳಿಗಾಗಿ  ನ್ಯಾಯಮೂರ್ತಿ ಸೂರಜ್ ಭಾನ್ ಅವರು ನವೆಂಬರ್ 1972 ರಲ್ಲಿ ಮಧ್ಯಪ್ರದೇಶ ಹೈಕೋರ್ಟ್, ಅವರ ನಿವೃತ್ತಿಯ ಸುಮಾರು ಒಂಬತ್ತು ತಿಂಗಳ ನಂತರ, ಚುನಾವಣಾ ಅರ್ಜಿಗಳ ವಿಲೇವಾರಿಗಾಗಿ; ಆಗಸ್ಟ್ 1983 ರಲ್ಲಿ ಮದ್ರಾಸ್ ಹೈಕೋರ್ಟ್‌ನಲ್ಲಿ ಎರಡು ವರ್ಷಗಳ ಕಾಲ ನ್ಯಾಯಮೂರ್ತಿ ಪಿ ವೇಣುಗೋಪಾಲ್; ಮತ್ತು ನ್ಯಾಯಮೂರ್ತಿ ಒ ಪಿ ಶ್ರೀವಾಸ್ತವ ಅವರು ಅಯೋಧ್ಯೆ ಮೊಕದ್ದಮೆಗಳ ವಿಚಾರಣೆಯ ವಿಶೇಷ ಪೀಠದ ಭಾಗವಾಗಿ 2007 ರಲ್ಲಿ ಅಲಹಾಬಾದ್ ಹೈಕೋರ್ಟ್‌ನ ತಾತ್ಕಾಲಿಕ ನ್ಯಾಯಾಧೀಶರಾಗಿ ಕಾರ್ಯನಿರ್ವಹಿಸಿದರು.

### ಎಲ್ಲೆಲ್ಲಿ ಎಷ್ಟು ಬಾಕಿ ಪ್ರಕರಣ

ಅಲಹಾಬಾದ್ ಉಚ್ಚ ನ್ಯಾಯಾಲಯ 160 ನ್ಯಾಯಾಧೀಶರ ಅನುಮೋದಿತ ಬಲವನ್ನು ಹೊಂದಿದೆ 11.5 ಲಕ್ಷಕ್ಕೂ ಹೆಚ್ಚು ಪ್ರಕರಣಗಳಲ್ಲಿ ಗರಿಷ್ಠ ಬಾಕಿ ಇದೆ 6 ಲಕ್ಷ ಸಿವಿಲ್ ಪ್ರಕರಣಗಳು ಮತ್ತು 5.5 ಲಕ್ಷ ಕ್ರಿಮಿನಲ್ ಪ್ರಕರಣಗಳಿವೆ. ಹೈಕೋರ್ಟ್‌ಗಳಲ್ಲಿ ಒಟ್ಟು 62 ಲಕ್ಷಕ್ಕೂ ಹೆಚ್ಚು ಪ್ರಕರಣಗಳು ಬಾಕಿ ಉಳಿದಿದ್ದು, 18.2 ಲಕ್ಷ ಕ್ರಿಮಿನಲ್ ಪ್ರಕರಣಗಳು ಮತ್ತು 44 ಲಕ್ಷ ಸಿವಿಲ್ ಪ್ರಕರಣಗಳಾಗಿವೆ. ಬಾಂಬೆ ಹೈಕೋರ್ಟ್‌ನಲ್ಲಿ 6.5 ಲಕ್ಷ, ಕಲ್ಕತ್ತಾನಲ್ಲಿ 2 ಲಕ್ಷ, ಮದ್ರಾಸ್ 5.2 ಲಕ್ಷ, ದೆಹಲಿ 1.3 ಲಕ್ಷ, ಪಂಜಾಬ್

# ಸರ್ಕಾರಿ ಶಾಲಾ ಮಕ್ಕಳಿಗೆ ಅತ್ಯಾಧುನಿಕ ಡಿಜಿಟಲ್ ಶಿಕ್ಷಣ




**ಬೆಂಗಳೂರು:** ಸರ್ಕಾರಿ ಶಾಲಾ ಮಕ್ಕಳು ಹಾಗೂ ವಿಶೇಷ ಚೇತನ ಮಕ್ಕಳಿಗೂ ಅಗತ್ಯ ಮೂಲಸೌಕರ್ಯದ ಜೊತೆಗೆ ಡಿಜಿಟಲ್ ಶಿಕ್ಷಣ ನೀಡುವ ಉದ್ದೇಶದಿಂದ ಗ್ಲೋಬಲೋಜಿಕ್, ಮೊಬೈವಿಲ್ ಹಾಗೂ ಇಟಾಚಿ ಕಂಪನಿಗಳ ಸಹಯೋಗದೊಂದಿಗೆ ಸಿಎಸ್‌ಆರ್ ಅಡಿಯಲ್ಲಿ ಹೆಣ್ಣೂರಿನ "ಶ್ರೋಧಂಜಲಿ ಇಂಟಿಗ್ರೇಟೆಡ್ ಪ್ರಾಥಮಿಕ ಶಾಲೆ" ಹಾಗೂ ಭಾರತೀಯ ವಿದ್ಯಾನಿಕೇತನ ಹೈಸ್ಕೂಲ್ ಗಳಿಗೆ ಪ್ರತ್ಯೇಕವಾಗಿ ಡಿಜಿಟಲೀಕರಣದ ಶಿಕ್ಷಣಕ್ಕೆ ಸಂಬಂಧಿಸಿದ ಉಪಕರಣ ಹಾಗೂ ಮೂಲಭೂತ ಸೌಕರ್ಯಗಳನ್ನು ಒದಗಿಸಿಕೊಡಲಾಯಿತು.

ಮೊದಲಿಗೆ, ಗ್ಲೋಬಲೋಜಿಕ್, ಅಸೋಸಿಯೇಷನ್ ಆಫ್ ಪೀಪಲ್ ವಿಥ್ ಡಿಸೆಬಿಲಿಟೀಸ್ (ಎಪಿಡಿ) ಸಹಯೋಗದೊಂದಿಗೆ, ಶ್ರೋಧಂಜಲಿ ಇಂಟಿಗ್ರೇಟೆಡ್ ಪ್ರಾಥಮಿಕ ಶಾಲೆಯಲ್ಲಿ ಶಿಕ್ಷಣ ಪಡೆಯುತ್ತಿರುವ 129 ವಿಶೇಷ ಚೇತನ ಮಕ್ಕಳಿಗೆ ಮೂಲಸೌಕರ್ಯಗಳನ್ನು ನೀಡಲಾಯಿತು. ಇಲ್ಲಿನ ವಿಶೇಷ ಚೇತನ ಮಕ್ಕಳಿಗೆ ಶಿಕ್ಷಣ ಕಲಿಯಲು ನೆರವು ನೀಡಲಾಯಿತು. ಇದರ ಜೊತೆಗೆ, ವೈಯಕ್ತಿಕ ಚಿಕಿತ್ಸೆ, ಸಹಾಯಕ ಸಾಧನಗಳು ಸೇರಿದಂತೆ ಈ ಮಕ್ಕಳ ಸಂಪೂರ್ಣ ಜವಾಬ್ದಾರಿಯನ್ನು ಈ ಸಂಸ್ಥೆಗಳು ವಹಿಸಿಕೊಂಡವು. ಮತ್ತೊಂದು ಶಾಲೆಯಾದ ಭಾರತೀಯ ವಿದ್ಯಾನಿಕೇತನ ಹೈಸ್ಕೂಲ್‌ನಲ್ಲಿ ಮಕ್ಕಳಿಗೆ ಡಿಜಿಟಲ್ ಶಿಕ್ಷಣಕ್ಕೆ ಆದ್ಯತೆ ನೀಡಲಾಯಿತು. 700ಕ್ಕೂ ಅಧಿಕ ಮಕ್ಕಳನ್ನು ಹೊಂದಿರುವ ಈ ಶಾಲೆಯಲ್ಲಿ "ಡಿಜಿ ವಿದ್ಯಾ ಶಾಲಾ" ಕಾರ್ಯಕ್ರಮವನ್ನು ಪ್ರಥಮ್ ಇನ್ಫೋಟೆಕ್ ಫೌಂಡೇಶನ್ ಮತ್ತು ಎಜುಕೇಷನಲ್ ಇನಿಶಿಯೇಟಿವ್ಸ್ (ಇಐ) ಯ ಸಹಯೋಗದೊಂದಿಗೆ ಚಾಲನೆ ನೀಡಲಾಯಿತು.

ವಿದ್ಯಾರ್ಥಿಗಳ ಶೈಕ್ಷಣಿಕ ಮತ್ತು ಅರಿವಿನ ಸಾಮರ್ಥ್ಯಗಳನ್ನು ಹೆಚ್ಚಿಸಲು ಎಐ-ಚಾಲಿತ ಕಲಿಕೆಯನ್ನು ಇಲ್ಲಿ ನೀಡಲಾಗುತ್ತದೆ. ಮಕ್ಕಳೇ ಲ್ಯಾಪ್‌ಟಾಪ್‌ಗಳನ್ನು ಎಐ ಸಹಾಯದ ಮೂಲಕ ತಮ್ಮ ಶಿಕ್ಷಣವನ್ನು ಪಡೆದುಕೊಳ್ಳಲಿದ್ದಾರೆ. ಈ ಯೋಜನೆಯು ಭಾಷೆ, ಇಂಗ್ಲಿಷ್ ಮತ್ತು ಗಣಿತದಂತಹ ವಿಷಯಗಳಲ್ಲಿ ಸಾಕ್ಷರತೆಯನ್ನು ಸುಧಾರಿಸುವುದಲ್ಲದೆ, ಮೂಲಭೂತ ಸಾಕ್ಷರತೆ ಮತ್ತು ಸಂಖ್ಯಾಶಾಸ್ತ್ರ (ಎಫ್‌ಎಲ್‌ಎನ್) ಮತ್ತು ರಾಷ್ಟ್ರೀಯ ಶಿಕ್ಷಣ ನೀತಿಗೆ ಸಹಕಾರಿಯಾಗಲಿದೆ.

ಈ ಕುರಿತು ಮಾತನಾಡಿದ ಗ್ಲೋಬಲೋಜಿಕ್‌ನ ಎಂಜಿನಿಯರಿಂಗ್-ಎಪಿಎಸಿ (ಖಾಸಗಿ ಇಕ್ವಿಟಿ, ಹೈ-ಟೆಕ್ ಮತ್ತು ಐಎಸ್ವಿ) ಮುಖ್ಯಸ್ಥ ಮಧುಸೂಧನ್ ಮೂರ್ತಿ, ಅಂತರ್ಗತ ಶಿಕ್ಷಣದ ಮಹತ್ವ ಮತ್ತು ಈ ಉಪಕ್ರಮವು ಸಾಮಾಜಿಕ ಜವಾಬ್ದಾರಿಯತ್ತ ಕಂಪನಿಯ ಬದ್ಧತೆಯನ್ನು ತೋರಿಸುತ್ತದೆ. "ಶಿಕ್ಷಣವು ಸಬಲೀಕರಣಕ್ಕೆ ಅಡಿಪಾಯವಾಗಿದ್ದು, ಈ ಶಾಲೆಗೆ ನಮ್ಮ ಬೆಂಬಲದ ಮೂಲಕ, ಪ್ರತಿ ಮಗುವಿಗೆ ಅವರ ಸವಾಲುಗಳನ್ನು ಲೆಕ್ಕಿಸದೆ ಗುಣಮಟ್ಟದ ಕಲಿಕೆ ಮತ್ತು ಸಮಗ್ರ ಅಭಿವೃದ್ಧಿಗೆ ಹಾಗೂ ಅವರ ಭವಿಷ್ಯ ನಿರ್ಮಿಸಲು ನೆರವಾಗಲಿದ್ದೇವೆ ಎಂದರು. ಮೊಬೈವಿಲ್, ಇಂಕ್‌ನ ಸಿಇಒ ರವಿ ತುಮ್ಮಾರುಕುಡಿ ಮಾತನಾಡಿ, ತಂತ್ರಜ್ಞಾನಕ್ಕೆ ಶಿಕ್ಷಣವನ್ನು ಪರಿವರ್ತಿಸುವ ಅಧಿಕಾರವಿದೆ. ಪ್ರಾಜೆಕ್ಟ್ ಮೈಂಡ್‌ಸ್ಪಾರ್ಕ್‌ಗೆ ನಮ್ಮ ಬೆಂಬಲವು ಪ್ರತಿ ಮಗುವಿಗೆ ಅವರ ಹಿನ್ನೆಲೆಯನ್ನು ಲೆಕ್ಕಿಸದೆ, ಇಂದಿನ ಡಿಜಿಟಲ್ ಜಗತ್ತಿನಲ್ಲಿ ಯಶಸ್ವಿಯಾಗಲು ಸರಿಯಾದ ಸಾಧನಗಳು ಮತ್ತು ಅವಕಾಶಗಳನ್ನು ಪಡೆಯುವುದನ್ನು ಖಚಿತಪಡಿಸಿಕೊಳ್ಳುವ ಒಂದು ಹೆಜ್ಜೆಯಾಗಿದೆ ಎಂದರು.

ಸಿಎಸ್‌ಆರ್ ಮುಖ್ಯಸ್ಥೆ ಮೋನಿಕಾ ವಾಲಿಯಾ ಮಾತನಾಡಿ, ಎರಡೂ ಉಪಕ್ರಮಗಳು ಮತ್ತು ಅವರು ರಚಿಸುವ ಗುರಿ ಹೊಂದಿರುವ ಸಾಮೂಹಿಕ ಪರಿಣಾಮವನ್ನು ಶ್ಲಾಘಿಸಿದರು. "ಸುಸ್ಥಿರ ಬದಲಾವಣೆಯನ್ನು ಸೃಷ್ಟಿಸಲು ನಮ್ಮ ಸಂಪನ್ಮೂಲಗಳನ್ನು ಹೆಚ್ಚಿಸುವುದರಲ್ಲಿ ನಾವು ನಂಬುತ್ತೇವೆ. ಶ್ರೀಧಂಜಲಿ ಇಂಟಿಗ್ರೇಟೆಡ್ ಪ್ರಾಥಮಿಕ ಶಾಲೆಯಲ್ಲಿನ ಅಂತರ್ಗತ ಶಿಕ್ಷಣ ಮಾದರಿ ಮತ್ತು ಪ್ರಾಜೆಕ್ಟ್ ಡಿಜಿ ವಿದ್ಯಾ ಶಾಲಾ ಅವರ ಟೆಕ್-ಚಾಲಿತ ಕಲಿಕೆಯ ವಿಧಾನವು ಸಮಾಜದಲ್ಲಿ ಅರ್ಥಪೂರ್ಣ ಪ್ರಭಾವವನ್ನು ಹೆಚ್ಚಿಸುವ ನಮ್ಮ ಬದ್ಧತೆಯನ್ನು ಪ್ರತಿಬಿಂಬಿಸುತ್ತದೆ. ಎಪಿಡಿ ಮತ್ತು ಪಿಐಎಫ್‌ನೊಂದಿಗಿನ ನಮ್ಮ ಸಹಭಾಗಿತ್ವದ ಮೂಲಕ, ವ್ಯವಹಾರಗಳು ಶಿಕ್ಷಣ ಮತ್ತು ಸೇರ್ಪಡೆಗೆ ಹೇಗೆ ಗಣನೀಯ ರೀತಿಯಲ್ಲಿ ಕೊಡುಗೆ ನೀಡುತ್ತವೆ ಎಂಬುದಕ್ಕೆ ಉದಾಹರಣೆಯನ್ನು ನೀಡುವ ಗುರಿ ಹೊಂದಿದ್ದೇವೆ ಎಂದರು.

# ವಿಜಯೇಂದ್ರ ಪರ ಬ್ಯಾಟ್ ಬೀಸಿದ ಸಂಸದ

**ಮೈಸೂರು:** ಬಿಜೆಪಿ ರಾಜ್ಯಾಧ್ಯಕ್ಷರ ಬದಲಾವಣೆಗೆ ಪಕ್ಷದಲ್ಲಿ ಕೆಲ ನಾಯಕರು ಆಗ್ರಹಿಸಿರುವ ವಿಚಾರಕ್ಕೆ ಸಂಬಂಧಿಸಿದಂತೆ ಪ್ರತಿಕ್ರಿಯಿಸಿರುವ ಮೈಸೂರು-ಕೊಡಗು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಬಿವೈ ವಿಜಯೇಂದ್ರ ಪರ ಬ್ಯಾಟ್ ಬೀಸಿದ್ದಾರೆ.

ಮೈಸೂರಿನಲ್ಲಿ ಮಾಧ್ಯಮಗಳ ಜೊತೆ ಮಾತನಾಡಿದ ಸಂಸದ ಯದುವೀರ್, ಬಿವೈ ವಿಜಯೇಂದ್ರ ರಾಜ್ಯಾಧ್ಯಕ್ಷರಾಗಿ ಸಾಕಷ್ಟು ಕೆಲಸ ಮಾಡುತ್ತಿದ್ದಾರೆ. ಲೋಕಸಭಾ ಚುನಾವಣೆಯಲ್ಲೂ ಕೂಡ ಪಕ್ಷವನ್ನು ಗೆಲ್ಲಿಸಿದ್ದಾರೆ. ಪಕ್ಷದ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ನಿಭಾಯಿಸಿದ್ದಾರೆ. ಕೆಲವರು ಪಕ್ಷದಲ್ಲಿ ವಿರೋಧ ಮಾಡುತ್ತಿದ್ದಾರೆ. ಎಲ್ಲವನ್ನೂ ಪಕ್ಷದ ಹೈಕಮಾಂಡ್ ಗಮನಿಸುತ್ತಿದ್ದು, ಬಣ ರಾಜಕೀಯದಿಂದ ಪಕ್ಷಕ್ಕೆ ಹಿನ್ನಡೆಯಾಗತ್ತೆ. ಎಲ್ಲವನ್ನೂ ವರಿಷ್ಠರು ಸರಿ ಮಾಡುವ ಭರವಸೆಯಿದೆ ಎಂದರು.



ಬೆಂಗಳೂರು ಅರಮನೆ ಆಸ್ತಿ ಸುಗ್ರೀವಾಜ್ಞೆಗೆ ರಾಜ್ಯಪಾಲರ ಅಂಕಿತ ವಿಚಾರ ಕುರಿತು ಪ್ರತಿಕ್ರಿಯಿಸಿದ ಸಂಸದ ಯದುವೀರ್, ಈಗಾಗಲೇ ಈ ಕೇಸ್ ಸುಪ್ರೀಂ ಕೋರ್ಟ್ ನಲ್ಲಿದೆ. ಟಿ.ಡಿ.ಆರ್ ಕೊಡದೆ ಸುಗ್ರೀವಾಜ್ಞೆ ಮೂಲಕ ಆಸ್ತಿ ನಿಯಂತ್ರಣಕ್ಕೆ ಸರ್ಕಾರ ಮುಂದಾಗಿದ್ದು, ನಾವು ಕಾನೂನು ಮೂಲಕ ಹೋರಾಟ ಮುಂದುವರೆಸುತ್ತೇವೆ ಎಂದರು.

ಮೈಕ್ರೋ ಫೈನಾನ್ಸ್ ಹಾವಳಿಯಿಂದ ಮೈಸೂರಿನಲ್ಲಿ 4 ಜನರ ಸಾವನ್ನಪ್ಪಿದ ವಿಚಾರಕ್ಕೆ ಸಂಬಂಧಿಸಿದಂತೆ ಪ್ರತಿಕ್ರಿಯಿಸಿದ ಯದುವೀರ್, ಸರ್ಕಾರ ಮೈಕ್ರೋ ಫೈನಾನ್ಸ್ ಹಾವಳಿ ನಿಯಂತ್ರಣ ಮಾಡಬೇಕು. ಈ ಬಗ್ಗೆ ಕಠಿಣ ನಿರ್ಧಾರ ತೆಗೆದುಕೊಳ್ಳಬೇಕು. ಫೈನಾನ್ಸ್ ನೀಡುವ ಸಂಸ್ಥೆಗಳ ಜೊತೆ ಸಭೆ ಮಾಡಿ ಶೀಘ್ರ ಜನರ ಪರ ನಿಲ್ಲಬೇಕು ಎಂದು ಸಲಹೆ ನೀಡಿದರು.

ಮಹಾರಾಣಿ ಕಾಲೇಜು ಕುಸಿತ ವಿಚಾರ ಕುರಿತು ಪ್ರತಿಕ್ರಿಯಿಸಿದ ಸಂಸದ ಯದುವೀರ್, ನಾವು ಪಾರಂಪರಿಕ ಕಟ್ಟಡ ಸಂರಕ್ಷಣೆ ಮಾಡಿ ಎಂದು ಈ ಹಿಂದೆಯೇ ಹೇಳಿದ್ದೇವೆ. 15 ವರ್ಷಗಳ ಹಿಂದೆ ಮಹಾರಾಣಿ ಕಾಲೇಜು ಕಟ್ಟಡ ದುರಸ್ತಿ ಕಾರ್ಯ ಮಾಡಿದ್ದರೆ ಈ ರೀತಿ ಆಗುತ್ತಿರಲಿಲ್ಲ. ಅದನ್ನು ಬಿಟ್ಟು ಕಟ್ಟಡ ಕುಸಿದಾಗ ಒಡೆಯುವ ನಿರ್ಧಾರ ಒಳ್ಳೆಯದಲ್ಲ ಈಗಾಗಲೇ ಲ್ಯಾಂಡ್ ಸ್ಟೋನ್ ಬಿಲ್ಡಿಂಗ್, ದೇವರಾಜ ಮಾರುಕಟ್ಟೆ ಎಲ್ಲವನ್ನೂ ದುರಸ್ತಿ ಮಾಡಿ ರಿನೋವೇಶನ್ ಮಾಡಬೇಕಿದೆ. ಇಲ್ಲದಿದ್ದರೆ ಮುಂದಿನ ದಿನಗಳಲ್ಲಿ ಅವು ಕೂಡ ಕುಸಿಯುತ್ತವೆ. ಸರ್ಕಾರ ಇನ್ನಾದರೂ ಪಾರಂಪರಿಕ ಕಟ್ಟಡಗಳ ರಕ್ಷಣೆಗೆ ಮುಂದಾಗಲಿ ಎಂದರು.

ಕುಂಭಮೇಳದ ಕಾಲ್ತುಳಿತ ಪ್ರಕರಣ, ಉತ್ತರ ಪ್ರದೇಶ ಸರ್ಕಾರ ಉತ್ತಮ ವ್ಯವಸ್ಥೆ ಮಾಡಿದೆ. ಆದರೆ ಜನರು ಹೆಚ್ಚಾದ ಹಿನ್ನಲೆ ಕಾಲ್ತುಳಿತ ಸಂಭವಿಸಿದೆ. ಇದರಿಂದ ಅನೇಕರು ಪ್ರಾಣ ಕಳೆದುಕೊಂಡಿದ್ದು, ಈ ಘಟನೆ ನಡೆಯಬಾರದಿತ್ತು. ಈ ಘಟನೆಯಿಂದ ನೋವಾಗಿದೆ. ಈಗಾಗಲೇ ಜನರ ರಕ್ಷಣೆ ಸರ್ಕಾರ ಹೆಲ್ಪ್ ಲೈನ್ ಮಾಡಿದೆ ಎಂದು ತಿಳಿಸಿದರು. ಬನ್ನಿಮಂಟಪ ಎಲ್. ಐ.ಸಿ ಸರ್ಕಲ್ ಗೆ ಅರ್ಜುನನ ಹೆಸರಿಡುವಂತೆ ಪಾಲಿಕೆಗೆ ಪತ್ರ ಬರೆದಿದ್ದೇನೆ. ಅಲ್ಲಿ ಅರ್ಜುನನ ಪ್ರತಿಮೆ ಕೂಡ ಮಾಡಬೇಕು ಅನ್ನೋದು ನಮ್ಮ ಆಸೆ. ಮುಂದಿನ ದಿನಗಳಲ್ಲಿ ಆ ಎಲ್ಲಾ ಕೆಲಸವನ್ನು ಮಾಡಬೇಕಿದೆ ಎಂದು ಸಂಸದ ಯದುವೀರ್ ಹೇಳಿದರು.

# ಘನತೆ ಸಾವು ರೋಗಿ ಹಕ್ಕು

**ಬೆಂಗಳೂರು:** ತೀವ್ರ ಅನಾರೋಗ್ಯಕ್ಕೊಳಗಾಗಿ ಯಾವುದೇ ಚಿಕಿತ್ಸೆ ನೀಡಿದರೂ ಗುಣಮುಖರಾಗಲು ಸಾಧ್ಯವೇ ಇಲ್ಲದ ರೋಗಿಗಳಿಗೆ ಘನತೆಯಿಂದ ಸಾಯುವ ಹಕ್ಕನ್ನು ರಾಜ್ಯದಲ್ಲಿ ಜಾರಿ ಮಾಡಲಾಗಿದೆ.ಸುಪ್ರೀಂಕೋರ್ಟ್‌ನ ಆದೇಶದಂತೆ ಕರ್ನಾಟಕದಲ್ಲಿ ಈ ಐತಿಹಾಸಿಕ ಕಾನೂನನ್ನು ಜಾರಿ ಮಾಡಲಾಗಿದೆ. ಈ ಸಂಬಂಧ ರಾಜ್ಯದ ಆರೋಗ್ಯ ಇಲಾಖೆ ಆದೇಶ ಹೊರಡಿಸಿದೆ.

ಚೇತರಿಕೆಯ ಭರವಸೆ ಇಲ್ಲದೆ ಮಾರಕ ಆರೋಗ್ಯದಿಂದ ಬಳಲುತ್ತಿರುವವರಿಗೆ ಅಥವಾ ನಿರಂತರ ಕೋಮಾ ಸ್ಥಿತಿಯಲ್ಲಿರುವವರು ಮತ್ತು ಯಾವುದೇ ಚಿಕಿತ್ಸೆ ನೀಡಿದರೂ ಬದುಕಲ್ಲ ಎಂಬ ರೋಗಿಗಳಿಗೆ ಈ ಆದೇಶದಿಂದ ಅವರು ಘನತೆಯಿಂದ ಸಾವನ್ನಪ್ಪಲು ಅವಕಾಶ ಸಿಕ್ಕಂತಾಗುತ್ತದೆ. ಯಾವುದೇ ವ್ಯಕ್ತಿ ತೀವ್ರ ಅನಾರೋಗ್ಯಕ್ಕೊಳಗಾದ ಆತ ಘನತೆಯಿಂದ ಸಾವಿಗೆ ಒಳಗಾಗಬೇಕು. ಈ ಸಂಬಂಧ ಕಾನೂನನ್ನು ಜಾರಿ ಮಾಡುವುದು ಸೂಕ್ತ ಎಂದು ಹಿಂದೆ ಸುಪ್ರೀಂಕೋರ್ಟ್ ಹೇಳಿ, ಕಾನೂನು ಜಾರಿಗೆ ಸೂಚನೆ ನೀಡಿತ್ತು ಅದರಂತೆ ಇಡೀ ದೇಶದಲ್ಲೇ ರಾಜ್ಯದಲ್ಲಿ ಈ ಕಾನೂನನ್ನು ಜಾರಿಗೆ ತರಲಾಗಿದೆ. ಈ ಬಗ್ಗೆ ಟ್ವೀಟ್ ಮಾಡಿರುವ ಆರೋಗ್ಯ ಸಚಿವ ದಿನೇಶ್‌ಗುಂಡೂರಾವ್, ರೋಗಿಯು ಘನತೆಯಿಂದ ಸಾಯುವ ಹಕ್ಕಿಗಾಗಿ ಸುಪ್ರೀಂಕೋರ್ಟ್‌ನ ನಿರ್ದೇಶವನ್ನು ಜಾರಿಗೆ ತರಲು ಐತಿಹಾಸಿಕ ಆದೇಶ ಹೊರಡಿಸಿದ್ದೇವೆ. ಇದು ಚೇತರಿಕೆಯ ಭರವಸೆ ಇಲ್ಲದ ಮಾರಕ ಅನಾರೋಗ್ಯದಿಂದ ಬಳಲುತ್ತಿರುವವರಿಗೆ ಮುಂದೆ ಜೀವ ಉಳಿಸುವ ಚಿಕಿತ್ಸೆಯಿಂದ ಪ್ರಯೋಜನ ಆಗಲ್ಲ ಎಂಬುದನ್ನು ದೃಢೀಕರಿಸಿದ ನಂತರ ಘನತೆಯಿಂದ ಸಾಯುವ ಅವಕಾಶವನ್ನು ಈ ಕಾನೂನು ನೀಡುತ್ತದೆ ಎಂದು ಅವರು ಹೇಳಿದ್ದಾರೆ. ಇದರಿಂದ ಅನೇಕ ಕುಟುಂಬಗಳು ಮತ್ತು ವ್ಯಕ್ತಿಗಳಿಗೆ ಹೆಚ್ಚಿನ ಅನುಕೂಲವಾಗಲಿದ್ದು, ಗೌರವಯುತವಾದ ಸಾವನ್ನು ಬಯಸುವವರಿಗೂ ಅನುಕೂಲವಾಗುತ್ತದೆ ಎಂದು ಅವರು ಹೇಳಿದ್ದಾರೆ. ಕರ್ನಾಟಕ ರಾಜ್ಯ ಪ್ರಗತಿಪರ ರಾಜ್ಯವಾಗಿದ್ದು, ಹೆಚ್ಚು ಮತ್ತು ನ್ಯಾಯಯುತ ಸಮಾಜಕ್ಕಾಗಿ ಉದಾರ ಮತ್ತು ಸಮಾನ ಮೌಲ್ಯಗಳನ್ನು ಎತ್ತಿಹಿಡಿಯುವಲ್ಲಿ ನಾವು ಯಾವಾಗಲೂ ಮುಂಚೂಣಿಯಲ್ಲಿದ್ದೇವೆ ಎಂದು ಆರೋಗ್ಯ ಸಚಿವ ದಿನೇಶ್‌ಗುಂಡೂರಾವ್ ಟ್ವೀಟ್‌ನಲ್ಲಿ ತಿಳಿಸಿದ್ದಾರೆ ರೋಗಿಯು ಘನತೆಯಿಂದ ಸಾಯುವ ಹಕ್ಕಿನ ಸಂಬಂಧ ಜಿಲ್ಲಾ ಮಟ್ಟದಲ್ಲಿ ತಜ್ಞ ವೈದ್ಯರನ್ನೊಳಗೊಂಡ ಸಮಿತಿ ರಚಿಸಲಾಗುತ್ತದೆ. ಈ ಸಮಿತಿ ರೋಗಿ ಯಾವುದೇ ಚಿಕಿತ್ಸೆ ನೀಡಿದರೂ ಬದುಕುಳಿಯಲ್ಲ ಎಂದು ದೃಢಪಡಿಸಿದ ನಂತರ ಘನತೆಯಿಂದ ಸಾಯಲು ಅವಕಾಶ ಕೊಡುವ ನಿರ್ಧಾರವನ್ನು ಕೈಗೊಳ್ಳುತ್ತದೆ. ಒಬ್ಬ ರೋಗಿಯು ಗಂಭೀರ ಕಾಯಿಲೆಯಿಂದ ಅಸ್ವಸ್ಥನಾಗಿ ಚೇತರಿಕೆ ಅಥವಾ ಗುಣಮುಖರಾಗದ ಆಶಾಭಾವನೆ ಹೊಂದಿಲ್ಲದೆ ಸುದೀರ್ಘ ಅವಧಿಯಿಂದ ಚಿಕಿತ್ಸೆ ಪಡೆಯುತ್ತಿದ್ದರೆ ಹಾಗೂ ಯಾವುದೇ ನಿರ್ಧಾರ ತೆಗೆದುಕೊಳ್ಳುವ ಸಾಮರ್ಥ್ಯ ಹೊಂದಿಲ್ಲದಿದ್ದ ಸಂದರ್ಭದಲ್ಲಿ ನಿಗದಿಯ ಕಾರ್ಯವಿಧಾನಕ್ಕೆ ಪೂರಕವಾಗಿ ಸೂಕ್ತ ತೀರ್ಮಾನ ಕೈಗೊಳ್ಳುವುದು ಎಂದು ಸರ್ವೋಚ್ಚ ನ್ಯಾಯಾಲಯ ಅಭಿಪ್ರಾಯ ಪಟ್ಟಿತ್ತು ಈಗ ರಾಜ್ಯಸರ್ಕಾರ ಈ ನಿರ್ದೇಶನವನ್ನು ಅನುಷ್ಠಾನಗೊಳಿಸಲು ಆದೇಶ ಹೊರಡಿಸಿದೆ.

## ಆತ್ಮಹತ್ಯೆ ಬೇಡ: ಸಿಎಂ

ಮೊದಲ ಪುಟದಿಂದ



ಬಸವಣ್ಣನವರು 850 ವರ್ಷಗಳ ಹಿಂದೆ "ಇವ ನಾರವ ಎಂದು ಪ್ರಶ್ನಿಸದೆ, ಇವ ನಮ್ಮವ" ಎಂದು ಹೇಳಿ ಅಂದಿದ್ದರು. ಆದರೂ ಇವತ್ತಿಗೂ ನಾವು ಜಾತಿ ಕೇಳುವುದನ್ನು ನಿಲ್ಲಿಸಿಲ್ಲ, ಜಾತಿ-ಧರ್ಮದ ಅನಿಷ್ಠ ತಾರತಮ್ಯವನ್ನು ಇವತ್ತಿಗೂ ಕಾಣುತ್ತೇನೆ ಎಂದರು.

ನಾನು ವೈಯುಕ್ತಿಕವಾಗಿ ಬಸವಣ್ಣನವರ ಅಪ್ಪಟ ಹಿಂಬಾಲಕ. ಅದಕ್ಕೇ ಸರ್ಕಾರಿ ಕಚೇರಿಗಳಲ್ಲಿ ಬಸವಣ್ಣನವರ ಫೋಟೋ ಕಡ್ಡಾಯಗೊಳಿಸಿದೆ ಎಂದರು.

ವಿದ್ಯಾವಂತರೂ ಕರ್ಮಸಿದ್ಧಾಂತವನ್ನು ಆಚರಿಸುವ ದುರಂತವನ್ನು ನಾವು ಕಾಣುತ್ತೇವೆ. ಯಾವ ದೇವರೂ ಬಡವನಾಗಿರು, ಹಸಿದುಕೊಂಡಿರು, ಹರಿದ ಬಟ್ಟೆಯಲ್ಲಿರು ಎಂದು ಹಣೆಬರಹ ಬರೆಯುವುದಿಲ್ಲ. ಇಂಥಾ ಮೌಢ್ಯವನ್ನು ವಿದ್ಯಾವಂತರೂ ಆಚರಿಸುತ್ತಿದ್ದಾರೆ. ಹೀಗಾದಾಗ ಅವರ ವಿದ್ಯೆಗೆ ಗೌರವ ಬರುತ್ತದಾ ಎಂದು ಪ್ರಶ್ನಿಸಿದರು.

ಜಾತಿ ಆಧಾರದಲ್ಲಿ ಮನುಷ್ಯನ ಯೋಗ್ಯತೆ ಅಳೆಯುವ ಪದ್ಧತಿಯನ್ನು ನಮ್ಮ ಸಂವಿಧಾನ ವಿರೋಧಿಸಿತು. ಪ್ರತಿಭೆ ಮತ್ತು ಸಾಮರ್ಥ್ಯ ಪ್ರತಿಯೊಬ್ಬರ ಸ್ವತ್ತು. ಅವಕಾಶಗಳು ಸಿಗಬೇಕಷ್ಟೆ. ಅವಕಾಶ ಸಿಕ್ಕಾಗ ಎಲ್ಲರ ಪ್ರತಿಭೆಯೂ ಹೊರಗೆ ಬರುತ್ತವೆ. ಇದಕ್ಕೆ ಪ್ರತಿಯೊಬ್ಬರೂ ಶಿಕ್ಷಣ ಪಡೆಯಬೇಕು ಎಂದರು.

ಸುತ್ತೂರು ಮಠ ಶಿಕ್ಷಣ ಮತ್ತು ಅನ್ನ ದಾಸೋಹ ನಡೆಸುತ್ತಾ ಇಡೀ ಸಮಾಜದ ಆಸ್ತಿಯಾಗಿದೆ. ಜಾತ್ಯತೀತ ಮೌಲ್ಯಗಳು ಸುತ್ತೂರು ಮಠದ ಮೌಲ್ಯಗಳೂ ಆಗಿವೆ ಎಂದರು.

ಕಾಯಕ ಮತ್ತು ದಾಸೋಹ ಎರಡೂ ಬಸವಾದಿ ಶರಣರ ಆಶಯವಾಗಿತ್ತು. ಕಾಯಕ ಅಂದ್ರೆ ಉತ್ಪತ್ತಿ, ದಾಸೋಹ ಅಂದರೆ ವಿತರಣೆ ಎಂದು ವಿಶ್ಲೇಷಿಸಿದರು.

ನಾವು ಉಚಿತವಾಗಿ ಅಕ್ಕಿ ಕೊಟ್ಟಿದ್ದರಿಂದ ಬಡವರು, ಶ್ರಮಿಕರು ಸೋಮಾರಿಗಳಾಗುತ್ತಿದ್ದಾರೆ ಎನ್ನುವುದು ದುಡಿಯದ ಗ್ರ ಮೈಗಳ್ಳರು, ದುಡಿಯದೆ ಬೊಜ್ಜು ಬೆಳೆಸಿಕೊಂಡವರು ಮಾತ್ರ ಹೇಳಲು ಸಾಧ್ಯ ಎಂದರು.

ಬರಿ ಬಾಯಿ ಮಾತಿನಲ್ಲಿ ಬಸವಣ್ಣ ಮತ್ತು ಅಂಬೇಡ್ಕರ್ ಅವರ ಆಶಯಗಳು ಜಾರಿ ಆಗುವುದಿಲ್ಲ. ಆಶಯಗಳಿಗೆ ಪೂರಕವಾದ ಕಾರ್ಯಕ್ರಮಗಳನ್ನು ರೂಪಿಸಿ ಜಾರಿಗೊಳಿಸಬೇಕು. ಈ ಉದ್ದೇಶದಿಂದಲೇ ನಾವು ಗ್ಯಾರಂಟಿಗಳನ್ನು ಜಾರಿಗೊಳಿಸಿದೆವು ಎಂದು ಕರೆ ನೀಡಿದರು.

ನಾವು ಗ್ಯಾರಂಟಿಗಳನ್ನು ಜಾರಿಗೊಳಿಸಿದಾಗ ರಾಜ್ಯದ ಬೊಕ್ಕಸ ದಿವಾಳಿ ಆಗತ್ತೆ ಎಂದು ಬೊಬ್ಬೆ ಹೊಡೆಯುತ್ತಿದ್ದ ಬಿಜೆಪಿಯವರೇ ಈಗ ನಮ್ಮ ಗ್ಯಾರಂಟಿಗಳನ್ನು ಕಾಪಿ ಹೊಡೆದು ಅವರು ಅಧಿಕಾರದಲ್ಲಿರುವ ರಾಜ್ಯಗಳಲ್ಲಿ ಘೋಷಿಸುತ್ತಿದ್ದಾರೆ ಎಂದು ವ್ಯಂಗ್ಯವಾಡಿದರು.

ಆರ್ಥಿಕ, ಸಾಮಾಜಿಕ ಚಲನೆ ಸಿಕ್ಕಾಗ ಮಾತ್ರ ಜಾತಿ ವ್ಯವಸ್ಥೆ ಹೋಗಲು ಸಾಧ್ಯ. ನಮ್ಮ ಗ್ಯಾರಂಟಿಗಳು ಪ್ರತೀ ಬಡವ ಮತ್ತು ಮಧ್ಯಮ ವರ್ಗದ ಕುಟುಂಬಗಳಿಗೆ ಆರ್ಥಿಕ ಚಲನೆ ನೀಡಿವೆ. ಜನರ ಕೊಳ್ಳುವ ಶಕ್ತಿಯನ್ನು ನಾವು ಹೆಚ್ಚಿಸಿದ್ದರಿಂದಲೇ ರಾಜ್ಯದ ಆರ್ಥಿಕ ಪರಿಸ್ಥಿತಿ ಕೂಡ ಸದೃಢವಾಗಿದೆ ಎಂದರು.

ಬಡವರ ಆರ್ಥಿಕ ಅಸಹಾಯಕತೆಯನ್ನು ಶೋಷಿಸುವ ಮೈಕ್ರೋ ಫೈನಾನ್ಸ್ ಗಳ ಅತಿರೇಕದ ವಸೂಲಿ ನಿಯಂತ್ರಿಸಲು ಸುಗ್ರೀವಾಜ್ಞೆ ಮೂಲಕ ಕಠಿಣ ಕಾನೂನು ತರುತ್ತಿದ್ದೇವೆ ಎಂದರು.

**ಕೇಂದ್ರದಿಂದ ರಾಜ್ಯಕ್ಕೆ ಅನ್ಯಾಯ**

ಕೇಂದ್ರದ ಬಜೆಟ್ ಅಧಿವೇಶನದಿಂದ ರಾಜ್ಯದ ನಿರೀಕ್ಷೆಗಳ ಬಗ್ಗೆ ಪ್ರತಿಕ್ರಿಯೆ ನೀಡಿ, ಕೇಂದ್ರಸರ್ಕಾರದವರು ರಾಜ್ಯಕ್ಕೆ ತಮ್ಮ ಬಜೆಟ್ ನಲ್ಲಿ ಘೋಷಣೆ ಮಾಡಿದ ಅನುದಾನವನ್ನು ನೀಡಿಲ್ಲ. 2023-24 ರ ಕೇಂದ್ರ ಬಜೆಟ್ ನಲ್ಲಿ ಭದ್ರಾ ಮೇಲ್ದಂಡೆ ಯೋಜನೆಗೆ ಇಳಿಸಿದ್ದಾರೆ.ಡಿದ್ದಾರೆ.ಈ 5300 ಕೋಟಿ ರೂ. ಘೋಷಣೆ ಮಾಡಿದ್ದರು. ಆದರೆ ಇದುವರೆಗೂ ಒಂದು ರೂಪಾಯಿ ಬಿಡುಗಡೆಯಾಗಿಲ್ಲ. ನಬಾರ್ಡ್ ನ ಅನುದಾನದಲ್ಲಿ ಶೇ.58 ರಷ್ಟು ಕಡಿತ ಮಾಡಿದ್ದು, ಕಳೆದ ವರ್ಷ ನಬಾರ್ಡ್ ನ ಅಡಿ ನೀಡಲಾಗಿದ್ದ 5800 ಕೋಟಿ ರೂ. ,ಈ ವರ್ಷ 2345 ಕೋಟಿ ರೂ. ಇಳಿಸಿದ್ದಾರೆ. ಕರ್ನಾಟಕ 4ಲಕ್ಷ ಕೋಟಿಯಷ್ಟು ಕೇಂದ್ರಕ್ಕೆ ತೆರಿಗೆ ನೀಡಿದರೆ, ರಾಜ್ಯಕ್ಕೆ ಕೇವಲ 60 ಸಾವಿರ ಕೋಟಿ ಮರಳಿ ಬರುತ್ತಿದ್ದುದ್ದು, ತೆರಿಗೆ ಹಂಚಿಕೆಯ ಪಾಲಿನಲ್ಲಿಯೂ ರಾಜ್ಯಕ್ಕೆ ಅನ್ಯಾಯವಾಗುತ್ತಿದೆ ಎಂದರು.

**ಬಾಲಿಶ ಹೇಳಿಕೆ**

ಕುಂಭಮೇಳದ ಬಗ್ಗೆ ಟೀಕೆ ಮಾಡುವವರು ಅಯೋಗ್ಯರು ಎಂದು ಪ್ರತಿಪಕ್ಷ ನಾಯಕರಾದ ವಿಜಯೇಂದ್ರರವರು ಹೇಳಿರುವ ಬಗ್ಗೆ ಪ್ರತಿಕ್ರಿಯೆ ನೀಡಿ, ತಪ್ಪು ನಡೆದಾಗ ಟೀಕೆ ಮಾಡುವ ಸ್ವಾತಂತ್ರ್ಯ ಪ್ರತಿಯೊಬ್ಬರಿಗೂ ಇರುತ್ತದೆ. ವಿಜಯೇಂದ್ರರವರ ಹೇಳಿಕೆ ಬಾಲಿಶವಾಗಿದೆ ಎಂದರು.

**ವರ್ಚಸ್ಸು ಕುಂದಿಸುವ ಪ್ರಯತ್ನ**

ಮುಡಾಪ್ರಕರಣದ ಮೂಲಕ ಸಿದ್ದರಾಮಯ್ಯನವರ ತೇಜೋವಧೆ ಮಾಡಲಾಗುತ್ತಿದೆಯೇ ಎಂಬ ಬಗ್ಗೆ ಉತ್ತರಿಸಿ, ಕರ್ನಾಟಕ ಮುಖ್ಯಮಂತ್ರಿಯಾಗಿರುವ ಕಾರಣದಿಂದ ನನ್ನ ತೇಜೋವಧೆ ಮಾಡಲಾಗುತ್ತಿದೆ. ನನ್ನ ಶ್ರೀಮತಿಯವರಿಗೆ ಇಡಿಯುವರ ನೋಟೀಸ್ ಬಂದ ಹಿನ್ನೆಲೆಯಲ್ಲಿ ನ್ಯಾಯಾಲಯದಿಂದ ತಡೆಯಾಜ್ಞೆಯನ್ನು ತರಲಾಗಿದೆ. ನನ್ನ ವರ್ಚಸ್ಸಿಗೆ ಭಂಗ ತರಬೇಕೇಂಬ ದುರುದ್ದೇಶದಿಂದ, ಇಂತಹ ಕುಕೃತ್ಯಗಳನ್ನು ಮಾಡಲಾಗುತ್ತಿದೆ. ಆದರೆ ಅವರ ಪ್ರಯತ್ನಗಳು ಸಫಲವಾಗಲು ಸಾಧ್ಯವಿಲ್ಲ ವೆಂದರು.

ವರಿಷ್ಠರ ತೀರ್ಮಾನವೇ ಅಂತಿಮ

ಮುಖ್ಯಮಂತ್ರಿಯಾಗಿ ಐದು ವರ್ಷ ಪೂರ್ಣಗೊಳಿಸುವ ಬಗ್ಗೆ ಪತ್ರಕರ್ತರ ಪ್ರಶ್ನೆಗೆ ಉತ್ತರಿಸಿ, ಈ ಬಗ್ಗೆ ಪಕ್ಷದ ವರಿಷ್ಠರ ತೀರ್ಮಾನವೇ ಅಂತಿಮ. ಪಕ್ಷದ ನಾಯಕರು ಸಭೆ ಮಾಡುವುದರಲ್ಲಿ ಯಾವುದೇ ರಾಜಕೀಯವಿಲ್ಲ. ಸತ್ಯಕ್ಕೆ ವಿರುದ್ಧವಾದ ಊಹೆಗಳು ತಪ್ಪು ಎಂದರು.

# ಜನಾರ್ದನ ರೆಡ್ಡಿ, ಬಿಜೆಪಿ ನಡೆಗೆ ಖಂಡನೆ

**ಕುಣಿಗಲ್:** ಮಾಜಿ ಸಚಿವರು, ಹಿಂದುಳಿದ ವರ್ಗಗಳ ನಾಯಕರಾದಬಿ. ಶ್ರೀರಾಮುಲು ಅವರನ್ನು ರಾಜಕೀಯವಾಗಿ ತೇಜೋವದೆ ಮಾಡುತ್ತಿರುವ ಜನಾರ್ಧನ ರೆಡ್ಡಿ ಹಾಗೂ ಬಿಜೆಪಿ ಪಕ್ಷದ ನಡೆಯನ್ನು ವೀರ ಮದಕರಿ ನಾಯಕ ಸೇನೆ ಮಧ್ಯ ಕರ್ನಾಟಕ ವಿಭಾಗದ ಅಧ್ಯಕ್ಷರಾದ ಆರ್. ತಿಮ್ಮರಾಜು ತೀವ್ರವಾಗಿ ಖಂಡಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡುತ್ತಾ ಮಾಜಿ ಸಚಿವರು, ನಾಯಕ ಸಮಾಜದ ಹಿತ ಚಿಂತಕರು, ನಮ್ಮ ನೆಚ್ಚಿನ ಹಿರಿಯ ನಾಯಕರಾದ ಬಿ.ಶ್ರೀರಾಮುಲುರವರನ್ನು ರಾಜಕೀಯ ಷಡ್ಯಂತ್ರದಿಂದ ಮುಗಿಸಲು ಮುಂದಾಗಿರುವ ಬಗ್ಗೆ ತೀವ್ರವಾಗಿ ಖಂಡಿಸುತ್ತಾ, ಬಿಜೆಪಿ ಸರ್ಕಾರವು ಅಧಿಕಾರಕ್ಕೆ ಬರಲು ಶ್ರೀರಾಮುಲು ಅಪಾರ ಕೊಡುಗೆ ನೀಡಿದ್ದು, ರಾಜ್ಯಾದ್ಯಂತ ನಾಯಕ ಜನಾಂಗವನ್ನು ಸಂಘಟನೆ ಮಾಡಿ ಬಿಜೆಪಿ ಸರ್ಕಾರವು ಅಸ್ತಿತ್ವಕ್ಕೆ ಬರಲು ಪ್ರಮುಖ ಕಾರಣಕರ್ತರಾಗಿದ್ದಾರೆ. ಬಿಜೆಪಿ ಪಕ್ಷವು ಅಧಿಕಾರಕ್ಕೆ ಬಂದರೆ ಉಪಮುಖ್ಯಮಂತ್ರಿ ಮಾಡುತ್ತೇವೆ ಎಂಬ ಭರವಸೆ ನೀಡಿ ಇಡೀ ನಾಯಕ ಸಮುದಾಯದ ಮತವನ್ನು ಬಳಸಿಕೊಂಡು ಅಧಿಕಾರಕ್ಕೆ ಬಂದರು. ಚಿತ್ರದುರ್ಗದಲ್ಲಿ ಮದಕರಿ ಡ್ರೀಮ್ ಪಾರ್ಕ್ ನಿರ್ಮಾಣ ಮಾಡುತ್ತೇವೆ ಎಂದು ಭರವಸೆ ನೀಡಿ ಅಧಿಕಾರ ಪಡೆದು ಯಾವುದೇ ಕಾರ್ಯ ಅನುಷ್ಠಾನ ಗೊಳಿಸದೆ ವಿಫಲಗೊಂಡು 2024ರಲ್ಲಿ ಸಂಡೂರು ಉಪಚುನಾವಣೆಯಲ್ಲಿ ಬಿಜೆಪಿ ಸೋಲಲು ಶ್ರೀರಾಮುಲು ಕಾರಣವೆಂದು ಆರೋಪ ಮಾಡುತ್ತಿರುವುದನ್ನು ತೀವ್ರವಾಗಿ ಖಂಡಿಸುತ್ತಾ ಶ್ರೀರಾಮುಲು ಉಪಚುನಾವಣೆಯಲ್ಲಿ ಬಿಜೆಪಿ ಪರವಾಗಿ ಪಕ್ಷ ನಿಷ್ಠೆಯಿಂದ ಪ್ರಾಮಾಣಿಕವಾಗಿ ಪ್ರಚಾರ ಮಾಡಿದ್ದರೂ ಸಹ ದುರುದ್ದೇಶದಿಂದ ಬಿಜೆಪಿಯ ಒಂದು ಗುಂಪು ಶ್ರೀರಾಮುಲು ಅವರನ್ನು ಮೂಲೆ ಗುಂಪು ಮಾಡಲು ಇಲ್ಲಸಲ್ಲದ ಅಪಪ್ರಚಾರದಲ್ಲಿ ತೊಡಗಿ ಸೋಲಲುಮೂಲ ಕಾರಣರು ಎಂದು ಅಪಪ್ರಚಾರ ಮಾಡುತ್ತಿರುವುದು ಬಿಜೆಪಿ ಪಕ್ಷಕ್ಕೆ ಶೋಭೆ ತರುವುದಿಲ್ಲ ಎಂದರು.



ಪಕ್ಷದ ವರಿಷ್ಠರು ಸತ್ಯಶೋಧನಾ ಸಮಿತಿಯನ್ನು ರಚಿಸಿ ನಿಷ್ಪಕ್ಷಪಾತ ತನಿಖೆ ಮಾಡಿದರೆಒಳ್ಳೆಯದು, ರಾಜ್ಯದಲ್ಲಿ ನಾಯಕ ಜನಾಂಗದಲ್ಲಿ ಶ್ರೀರಾಮುಲು ಪ್ರಭಾವಿ ನಾಯಕರಾಗಿದ್ದು ಅವರ ಬಗ್ಗೆ ಇಲ್ಲಸಲ್ಲದ ಆರೋಪ ಮಾಡಿ ತೇಜೋವದೆ ಮಾಡಿದರೆ ಇಡೀ ಸಮುದಾಯ ಸುಮ್ಮನೆ ಕೂರದೆ ಮುಂದಿನ ದಿನಗಳಲ್ಲಿ ಬಿಜೆಪಿ ಪಕ್ಷಕ್ಕೆ ಸರಿಯಾದ ಪಾಠ ಕಲಿಸಬೇಕಾಗುತ್ತದೆ, ಶಾಸಕರಾದ ಜನಾರ್ದನ್ ರೆಡ್ಡಿ ಶ್ರೀರಾಮುಲುರವರ ಬಗ್ಗೆ ಹಾಗೂ ನಾಯಕ ಸಮಾಜದ ಬಗ್ಗೆ ಹಗುರವಾಗಿ ಮಾತನಾಡಿಅವಮಾನ ಮಾಡಿದ್ದಾರೆ, ಕೂಡಲೇ ಕ್ಷಮೆಯಾಚಿಸಬೇಕು,2019ರಲ್ಲಿ ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬರಲು ರಮೇಶ್ ಜಾರಕಿಹೊಳಿ 17 ಶಾಸಕರನ್ನ ಕರೆತಂದ ಪ್ರತಿಫಲ ಬಿಜೆಪಿ ಅಧಿಕಾರಕ್ಕೆ ಬರಲು ಕಾರಣವಾಗಿದ್ದು ನಾಯಕ ಸಮಾಜದ ಮುಖಂಡರನ್ನು ನಿರಂತರವಾಗಿ ತುಳಿಯುತ್ತಿದ್ದು ಕೂಡಲೇ ಸಮುದಾಯ ಮುಖಂಡರಿಗೆ ಸೂಕ್ತ ಪ್ರಾತಿನಿತ್ಯ ನೀಡಬೇಕು, ಮಾಜಿ ಮಂತ್ರಿ ಶ್ರೀರಾಮುಲು ಬಗ್ಗೆ ಯಾವುದೇ ಮುಖಂಡರು ಷಡ್ಯಂತರ ಮಾಡಿದರೆ ಅಂಥವರ ವಿರುದ್ಧ ಉಗ್ರ ಹೋರಾಟ ನಡೆಸಲಾಗುವುದು ಎಂದು ಎಚ್ಚರಿಕೆ ನೀಡಿ ಕೂಡಲೇ ಶ್ರೀರಾಮುಲು ಅವರಿಗೆ ಸೂಕ್ತ ರಾಜಕೀಯ ಪ್ರಾತಿನಿಧ್ಯ ನೀಡಬೇಕೆಂದು ಒತ್ತಾಯ ಪಡಿಸಿದರು.

# ಜಕಣಾಚಾರಿ ಚಿರಸ್ಮರಣೀಯರು ಶಾಸಕ ಸಿ.ಪುಟ್ಟರಂಗಶೆಟ್ಟಿ



**ಚಾಮರಾಜನಗರ:** ಶಿಲ್ಪಕಲೆಗೆ ಜೀವತುಂಬಿದ ವಿಶ್ವಕರ್ಮ ಅಮರಶಿಲ್ಪಿ ಜಕಣಾಚಾರಿ ಅವರು ಇಂದಿಗೂ ಚಿರಸ್ಮರಣೀಯರಾಗಿದ್ದಾರೆ ಎಂದು ಎಂ.ಎಸ್.ಐ.ಎಲ್ ಅಧ್ಯಕ್ಷರಾದ ಶಾಸಕ ಸಿ. ಪುಟ್ಟರಂಗಶೆಟ್ಟಿ ಅವರು ಹೇಳಿದ್ದಾರೆ.

ನಗರದ ಜಿಲ್ಲಾಡಳಿತ ಭವನದ ಆವರಣದಲ್ಲಿರುವ ಡಾ.ರಾಜ್‌ಕುಮಾರ್ ಜಿಲ್ಲಾ ರಂಗಮಂದಿರದಲ್ಲಿಂದು ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಕನ್ನಡ ಮತು ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ ಆಯೋಜಿಸಲಾಗಿದ್ದ ವಿಶ್ವಕರ್ಮ ಅಮರಶಿಲ್ಪಿ ಜಕಣಾಚಾರಿ ಅವರ ಸಂಸ್ಮರಣಾ ದಿನ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ವಿಶ್ವಕರ್ಮ ಅಮರಶಿಲ್ಪಿ ಜಕಣಾಚಾರಿ ಅವರು ಶಿಲ್ಪಕಲೆಗೆ ಅಪಾರ ಕೊಡುಗೆ ನೀಡಿದ್ದಾರೆ. ವಿಶೇಷವಾಗಿ ಸುಂದರ ದೇವಾಲಯಗಳನ್ನು ನಿರ್ಮಿಸುವ ಮೂಲಕ ಶಿಲೆಗಳಿಗೆ ಜೀವ ತುಂಬುವ ಕೆಲಸ ಮಾಡಿದ್ದಾರೆ. ಶಿಲ್ಪಕಲೆಗಳಲ್ಲಿನ ಕೆತ್ತನೆಗಳು ಈಗಲೂ ಜನರ ಮನಸೂರೆಗೊಂಡಿವೆ. ವಿಶ್ವಕರ್ಮ ಅಮರಶಿಲ್ಪಿ ಜಕಣಾಚಾರಿ ಅವರ ತ್ಯಾಗ, ಆದರ್ಶ ಗುಣಗಳನ್ನು ನಾವೆಲ್ಲರೂ ಅಳವಡಿಸಿಕೊಳ್ಳಬೇಕಾಗಿದೆ ಎಂದರು.

ಕರ್ನಾಟಕವನ್ನು ಆಳಿದ ಚಾಲುಕ್ಯ, ಹೊಯ್ಸಳ ಅರಸರು ಸಹ ಶಿಲ್ಪಕಲೆಯನ್ನು ಪ್ರೋತ್ಸಾಹಿಸಿದ್ದರು. ರಾಜ್ಯದ ಪ್ರಮುಖ ಐತಿಹಾಸಿಕ ತಾಣಗಳಾದ ಬೇಲೂರು, ಹಳೇಬೀಡು, ಪಟ್ಟದಕಲ್ಲುಗಳಲ್ಲಿನ ದೇವಾಲಯಗಳಲ್ಲಿ ಶಿಲ್ಪಕಲೆಯ ಸುಂದರ ಕೆತ್ತನೆಗಳನ್ನು ಕಾಣಬಹುದು. ಆ ಮೂಲಕ ತಮ್ಮ ಜೀವಂತಿಕೆಯನ್ನು ಉಳಿಸಿಕೊಂಡಿರುವ ವಿಶ್ವಕರ್ಮ ಅಮರಶಿಲ್ಪಿ ಜಕಣಾಚಾರಿ ಅವರು ಎಂದೆಂದಿಗೂ ಸ್ಮರಣೀಯರಾಗಿದ್ದಾರೆ ಎಂದು ಶಾಸಕರಾದ ಸಿ. ಪುಟ್ಟರಂಗಶೆಟ್ಟಿ ಅವರು ತಿಳಿಸಿದರು.

ಚಾಮರಾಜನಗರ–ರಾಮಸಮುದ್ರ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಮಹಮ್ಮದ್ ಅಸ್ಗರ್ ಮುನ್ನಾ, ನಗರಸಭಾ ಉಪಾಧ್ಯಕ್ಷರಾದ ಮಮತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕರಾದ ಉದಯ್‌ಕುಮಾರ್, ಸಮಾಜದ ಮುಖಂಡರಾದ ಶಂಭುಲಿಂಗ, ಕುಮಾರ, ಮಹೇಶ್ ಹೊನ್ನಳ್ಳಿ, ಮಂಜು, ರಂಗಸ್ವಾಮಿ, ಮಹೇಶ್ ಚಾಮರಾಜನಗರ, ಸ್ವಾಮಿ, ಸೋಮಣ್ಣ, ಇತರರು ಕಾರ್ಯಕ್ರಮದಲ್ಲಿ ಇದ್ದರು.

# ಸ್ವಚ್ಛತೆಯ ಅರಿವು ಅಗತ್ಯ: ಜಿಲ್ಲಾ ನ್ಯಾಯಾಧೀಶೆ ಬಿ.ಎಸ್.ಭಾರತಿ

**ಚಾಮರಾಜನಗರ:** ಸ್ವಚ್ಛತೆ ಬಗ್ಗೆ ಪ್ರತಿಯೊಬ್ಬರಿಗೂ ಅರಿವು ಅಗತ್ಯ ಎಂದು ಜಿಲ್ಲಾ ಪ್ರಧಾನ ಸೆಷನ್ಸ್ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷರಾದ ಬಿ.ಎಸ್.ಭಾರತಿ ಅವರು ಹೇಳಿದ್ದಾರೆ.

ನಗರದ ಜಿಲ್ಲಾ ನ್ಯಾಯಾಲಯ ಆವರಣದಲ್ಲಿ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ನ್ಯಾಯಾಂಗ ಇಲಾಖೆ ಹಾಗೂ ಜಿಲ್ಲಾ ವಕೀಲರ ಸಂಘ ಸಹಯೋಗದೊಂದಿಗೆ ಹಮ್ಮಿಕೊಳ್ಳಲಾಗಿದ್ದ ರಾಷ್ಟ್ರೀಯ ಸ್ವಚ್ಛತಾ ದಿನಾಚರಣೆ ಕಾರ್ಯಕ್ರಮವನ್ನು ಉದ್ದೇಶಿಸಿ ಅವರು ಮಾತನಾಡಿದರು.

ಜನಸಾಮಾನ್ಯರು ಪ್ರತಿನಿತ್ಯ ತಮ್ಮ ಮನೆಯ ಒಳಗೆ ಹಾಗೂ ಹೊರ ಆವರಣದಲ್ಲಿನ ಸ್ವಚ್ಛತೆಯನ್ನು ಕಾಪಾಡಿಕೊಳ್ಳಬೇಕು.



ಸ್ವಚ್ಛತೆ ಬಗ್ಗೆ ತಾವು ಅರಿತು ಇತರರಿಗೂ ತಿಳಿ ಹೇಳಬೇಕು. ಆ ಮೂಲಕ ಉತ್ತಮ ಪರಿಸರವನ್ನು ಕಾಪಾಡಿಕೊಳ್ಳಬೇಕು ಎಂದು ನ್ಯಾಯಾಧೀಶರಾದ ಭಾರತಿ ಅವರು ತಿಳಿಸಿದರು.

ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳು ಹಾಗೂ ಹಿರಿಯ ಸಿವಿಲ್ ನ್ಯಾಯಾಧೀಶರಾದ ಈಶ್ವರ ಅವರು ಮಾತನಾಡಿ ನಾವು ವಾಸಿಸುವ ಸ್ಥಳಗಳಲ್ಲಿ ಸ್ವಚ್ಛತೆಯನ್ನು ಕಾಪಾಡಿಕೊಳ್ಳಬೇಕು ಇದರಿಂದ ನಮ್ಮ ಆರೋಗ್ಯವೂ ಚೆನ್ನಾಗಿ ಇರುತ್ತದೆ ಹಾಗೂ ಉತ್ತಮ ಗಾಳಿ, ಬೆಳಕು ನಮಗೆ ದೊರಕುತ್ತದೆ ಎಂದು ಹೇಳಿದರು.

ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶ ರಾದ ಎಸ್‌ಜೆ ಕೃಷ್ಣ, ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶ'ರಾದ ಬಿ.ಎಸ್ ಹೊನ್ನಸ್ವಾಮಿ, ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರಾದ ಸುನೀಲ್, ಪ್ರಧಾನ ಸಿವಿಲ್‌ನ್ಯಾಯಾಧೀಶ ರಾದ ವೆಂಕಟೇಶ್, ಹೆಚ್ಚುವರಿ ಸಿವಿಲ್ ನ್ಯಾಯಾಧೀಶರಾದ ನಿವೇದಿತ, ಜಿಲ್ಲಾ ವಕೀಲರ ಸಂಘದ ಅಧ್ಯಕ್ಷರಾದ ಎಸ್. ನಂಜಯ್ಯ, ಪ್ರಧಾನ ಕಾರ್ಯದರ್ಶಿ ರಂಗಸ್ವಾಮಿ ಇತರರು ಈ ಸಂದರ್ಭದಲ್ಲಿ ಇದ್ದರು. ಇದೇ ವೇಳೆ ಗಣ್ಯರು ನ್ಯಾಯಾಲಯದ ಆವರಣದಲ್ಲಿ ಶ್ರಮದಾನ ಮಾಡಿದರು.

# ಕೊನೆಗೊಂಡ ಅನಿರ್ದಿಷ್ಟಾವಧಿ ಧರಣಿ

**ಚೇಳೂರು:** ತಾಲ್ಲೂಕು ದಲಿತ ಸಂಘರ್ಷ ಶಾಖೆಯಿಂದ ದಲಿತರ ಮೂಲಭೂತ ಸಮಸ್ಯೆಗಳು ಮತ್ತು ದಲಿತರ ಮೇಲಿನ ದೌರ್ಜನ್ಯಗಳ ಬಗ್ಗೆ ಸರ್ಕಾರ ಹಾಗೂ ಜಿಲ್ಲಾಡಳಿತದ ನಿರ್ಲಕ್ಷ ಹಾಗೂ ದಲಿತ ವಿರೋಧಿ ನೀತಿಯನ್ನು ಖಂಡಿಸಿ ಮನುಷ್ಯನ ನೆಮ್ಮದಿಯ ಬದುಕಿಗೆ ಭೂಮಿ, ನಿವೇಶನ, ವಸತಿ, ಸ್ಮಶಾನ, ನೀಡಿ ಜಮೀನುಗಳಿಗೆ ಹೋಗಲು ದಾರಿಗಳು ಸೇರಿದಂತೆ 25 ಬೇಡಿಕೆಗಳನ್ನು ಈಡೇರಿಸಬೇಕೇಂದು ಒತ್ತಾಯಿಸಿ ತಾಲೂಕು ಕಛೇರಿಯ ಮುಂದೆ ನಡೆಯುತಿದ್ದ ಅನಿರ್ದಿಷ್ಟಾವಧಿ ಧರಣಿ ಗುರುವಾರ ಕೊನೆಗೊಂಡಿದೆ.

ಗುರುವಾರ ತಾಲೂಕು ಕಛೇರಿಯ ಮುಂದೆ ಧರಣಿ ಸತ್ಯಾಗ್ರಹ ಸ್ಥಳಕ್ಕೆ ಭೇಟಿ ನೀಡಿದ ತಹಸೀಲ್ದಾರ್‌ಗೆ ಮನವಿ ಪತ್ರ ನೀಡಲಾಯಿತು. ಈ ಸಂದರ್ಭದಲ್ಲಿ ದಸಂಸ ಸಂಚಾಲಕ ಜಲಪಿಗಾರಪಲ್ಲಿ ಜಿ. ನರಸಿಂಹಪ್ಪ ಮಾತನಾಡಿ ಒಂಭತ್ತು ದಿನಗಳ ಕಾಲ ಧರಣಿ ಮಾಡಲು ಸಹಕರಿಸಿದ ಎಲ್ಲರಿಗೂ ಧನ್ಯವಾದ ಹೇಳಿದರು. ಧರಣಿಯಲ್ಲಿ ಪುಲಗಲ್ ವೆಂಕಟರಮಣ, ಗೆಜ್ಜಿ ವೆಂಕಟ್ರಾಯಪ್ಪ, ಟಿ.ಎನ್.ಸೀನಪ್ಪ, ಎಂ.ಈಶ್ವರ್, ಡಿ.ವಿ.ವೆಂಕಟೇಶ, ಶ್ರೀನಿವಾಸ್, ಕಲಾವಿದ ಸಿ.ಜಿ. ಶಿವಣ್ಣ, ರಾಮೋಜಿಪಲ್ಲಿ ವೆಂಕಟೇಶ್, ಪಾಳ್ಯಕೆರೆ ವಾಲ್ಮೀಕಿ ನಾಯಕ ಸಂಘದ ಅಧ್ಯಕ್ಷರಾದ ಎಸ್.ನರಸಿಂಹಪ್ಪ ಮತ್ತಿತರರು ಹಾಜರಿದ್ದರು



# ಸುಧಾಕರ್ ಆತ್ಮವಿಮರ್ಶೆ ಮಾಡಿಕೊಳ್ಳಬೇಕು

**ಶಿಡ್ಲಘಟ್ಟ:** ಜಿಲ್ಲೆಯಲ್ಲಿ ಬಿಜೆಪಿ ಪಕ್ಷವು ಈ ಹಿಂದೆಯೂ ಇತ್ತು, ಮುಂದೆಯೂ ಇನ್ನಷ್ಟು ಪ್ರಬಲವಾಗಿ ಬೆಳೆಯುವುದರಲ್ಲಿ ಅನುಮಾನವೇ ಇಲ್ಲ ಬಿಜೆಪಿ ಪಕ್ಷವು ಕಾರ್ಯಕರ್ತರ ಪಕ್ಷವಾಗಿದೆ ನನ್ನಿಂದ ಬಿಜೆಪಿ ಪಕ್ಷ ಎಂಬ ಭ್ರಮೆಯನ್ನು ಬಿಡುವುದು ಒಳ್ಳೆಯದು ಎಂದು ಸಂಸದ ಡಾ.ಕೆ.ಸುಧಾಕರ್‌ಗೆ ಬಿಜೆಪಿ ಮುಖಂಡ ಬಳುವನಹಳ್ಳಿ ಲೋಕೇಶ್‌ಗೌಡ ತಿಳಿ ಹೇಳಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿ, ಬಿಜೆಪಿಯ ಚಿಕ್ಕಬಳ್ಳಾಪುರ ಜಿಲ್ಲಾಧ್ಯಕ್ಷರ ಆಯ್ಕೆ ರಾತ್ರೋ ರಾತ್ರಿ ನಡೆದಿದ್ದಲ್ಲ, ಕಳೆದ ಒಂದೂವರೆ ತಿಂಗಳಿನಿಂಲೂ ಆಂತರಿಕ ಆಯ್ಕೆ ಪ್ರಕ್ರಿಯೆ ನಡೆದುಕೊಂಡು ಬಂದಿದ್ದು



ನಿಮಗೂ ಗೊತ್ತಿದೆ, ಅಂತಿಮವಾಗಿ ಬಿ.ಸಂದೀಪ್ ರೆಡ್ಡಿ ಅವರ ಆಯ್ಕೆ ಆಗಿದೆ ಎಂದರು.ಆದರೆ ನನ್ನ ಮಾತೇ ನಡೆಯಬೇಕು, ನಾನು ಹೇಳಿದ್ದೇ ಅಂತಿಮವಾಗಬೇಕು ಎಂಬ ಅಹಂನಿಂದ ಸಂಸದ ಡಾ.ಕೆ. ಸುಧಾಕರ್ ಅವರು ಈ ರೀತಿಯಾಗಿ ರಾಜ್ಯಾಧ್ಯಕ್ಷರ ಬಿ.ವೈ.ವಿಜಯೇಂದ್ರ ಅವರ ವಿರುದ್ದ ಮಾತನಾಡುವುದು ತಪ್ಪು, ಅದು ಅವರ ಹತಾಶೆ, ವಿಚಲಿತರಾಗಿರುವುದನ್ನು ಸೂಚಿಸುತ್ತದೆ ಎಂದು ಹೇಳಿದರು.

ನೀವು ಬಿಜೆಪಿಗೆ ಬರುವುದಕ್ಕೂ ಮೊದಲೇ ಈ ಭಾಗದಲ್ಲಿ ಬಿಜೆಪಿಯ ಎಮ್ಮೆಲ್ಲೆಗಳು ಇದ್ದರು, ಅನೇಕ ಜನಪ್ರತಿನಿಧಿಗಳು ಗೆದ್ದಿದ್ದರಧ, 1.5 ಲಕ್ಷ ರೂ.ಗಳ ಸದಸ್ಯತ್ವ ಹಣವನ್ನು ರಾಜ್ಯ ಸಂಘಕ್ಕೆ ಪಾವತಿಸಿದ ಮೊದಲ ಜಿಲ್ಲೆ ಚಿಕ್ಕಬಳ್ಳಾಪುರ ಆಗಿತ್ತು, ಈಗಲೂ ಕೇಂದ್ರ ಕಚೇರಿಯಲ್ಲಿ ಆ ದಾಖಲೆಗಳನ್ನು ನೋಡಬಹುದು ಎಂದರು.

ನೀವು ಬಿಜೆಪಿಗೆ ಬಂದ ಮೇಲೆ ಇಲ್ಲಿ ಸಂಘಟನೆ ಕುಂಠಿತವಾಗಿದೆ,ಅದಕ್ಕೆ ನೀವೇ ಆತ್ಮ ವಿಮರ್ಶೆ ಮಾಡಿಕೊಳ್ಳಬೇಕು, ನಿಮ್ಮ ಸ್ವಾರ್ಥಕ್ಕಾಗಿ ಯಾರು ಯಾರನ್ನು ಎಲ್ಲೆಲ್ಲಿ ತುಳಿದಿದ್ದೀರಿ ಎಂಬುದು ನಿಮಗೆ ಗೊತ್ತಿದೆ, ಆ ಎಲ್ಲಾ ತಪ್ಪುಗಳನ್ನು ಸರಿಪಡಿಸಿಕೊಂಡು ಹೋಗಬೇಕಿದೆ, ಅದನ್ನು ಬಿಟ್ಟು ನೀವು ಹೇಳಿದ ವ್ಯಕ್ತಿ ಜಿಲ್ಲಾಧ್ಯಕ್ಷರಾಗಲಿಲ್ಲ, ನಿಮ್ಮನ್ನು ಮೀರಿ ಬೆಳೆಯುತ್ತಾನೆ ಎಂಬ ಹತಾಶೆಯಲ್ಲಿ ಈ ರೀತಿಯಲ್ಲಿ ಪಕ್ಷ ಮತ್ತು ಪಕ್ಷದ ರಾಜ್ಯಾಧ್ಯಕ್ಷರ ವಿರುದ್ಧ ಮಾತಾನಾಡುವುದು ನಿಮಗೆ ಶೋಭೆಯಲ್ಲ,ಪಕ್ಷಕ್ಕೂ ಒಳ್ಳೆಯದಲ್ಲ ಎಂಬ ಬುದ್ದಿ ಮಾತನ್ನು ಹೇಳಿದರು.

# ಪೌರಕಾರ್ಮಿಕರ ದಿನಾಚರಣೆ

**ಚಾಮರಾಜನಗರ:** ನಗರಸಭಾ ವತಿಯಿಂದ ಪೌರಕಾರ್ಮಿಕರ ದಿನಾಚರಣೆ ಕಾರ್ಯಕ್ರಮವನ್ನು ನಗರದ ಶ್ರೀ ಮಹರ್ಷಿ ವಾಲ್ಮೀಕಿ ಭವನದಲ್ಲಿ ಹಮ್ಮಿಕೊಳ್ಳಲಾಗಿತ್ತು

ಬೆಳಿಗ್ಗೆ 10.30 ಗಂಟೆಗೆ ನಗರದ ನಗರಸಭಾ ಕಚೇರಿಯ ಮುಂಭಾಗದಿಂದ ಶ್ರೀ ಮಹರ್ಷಿ ವಾಲ್ಮೀಕಿ ಭವನದವರೆಗೆ ಅಧಿಕಾರಿಗಳು, ನಗರಸಭಾ ಸದಸ್ಯರು, ಸಿಬ್ಬಂದಿ ಹಾಗೂ ಪೌರಕಾರ್ಮಿಕರಿಂದ ವಿವಿಧ ಕಲಾ ತಂಡಗಳೊಂದಿಗೆ ಜಾಥಾ ನಡೆಸಿದರು. ಶಾಸಕರು ಹಾಗೂ ಜಿಲ್ಲಾಧಿಕಾರಿಗಳು ಜಾಥಾಗೆ ಚಾಲನೆ ನೀಡಿದರು.

# ಹನಿ ನೀರಾವರಿ ಘಟಕ ವಿತರಣೆಗೆ ಅರ್ಜಿ ಆಹ್ವಾನ

**ಚಾಮರಾಜನಗರ:** ಕೃಷಿ ಇಲಾಖೆಯಿಂದಪ್ರಧಾನಮಂತ್ರಿ ಕೃಷಿ ಸಿಂಚಾಯಿ ಯೋಜನೆಯಡಿ 2024–25ನೇ ಸಾಲಿನ ಸೂಕ್ಷ್ಮ ನೀರಾವರಿ ಕಾರ್ಯಕ್ರಮದಡಿ ನೀರಿನ ಸಮರ್ಥ ಬಳಕೆ ಉತ್ತೇಜಿಸುವ ಸಲುವಾಗಿಎಲ್ಲಾ ವರ್ಗದ ರೈತರಿಗೆ ಸಹಾಯಧನದಲ್ಲಿ ತುಂತುರು ಹಾಗೂ ಹನಿ ನೀರಾವರಿಘಟಕ ವಿತರಣೆಗೆ ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿಯನ್ನು ಆಯಾ ರೈತ ಸಂಪರ್ಕ ಕೇಂದ್ರದಲ್ಲಿ ಉಚಿತವಾಗಿ ಪಡೆದು

ದಾಖಲಾತಿಗಳನ್ನು ಸಲ್ಲಿಸಿ, ತುಂತುರು ನೀರಾವರಿ ಮತ್ತು ಹನಿ ನೀರಾವರಿ ಘಟಕದಸೌಲಭ್ಯ ಪಡೆದುಕೊಳ್ಳಬೇಕೆಂದು ಸಹಾಯಕ ಕೃಷಿ ನಿರ್ದೇಶಕರುಪ್ರಕಟಣೆಯಲ್ಲಿ ಕೋರಿದ್ದಾರೆ.

# ಕಸ ವಿಲೇವಾರಿಗೆ ಸಹಕರಿಸಿ: ನ್ಯಾ.ಭವಾನಿ



**ಚಿಕ್ಕಬಳ್ಳಾಪುರ:** ದೇಶದೆಲ್ಲೆಡೆ ಸ್ವಚ್ಛತೆ ಇರಬೇಕು ಎಂಬುದು ಮಹಾತ್ಮ ಗಾಂಧೀಜಿಯವರ ಮಹತ್ವದ ಕನಸಾಗಿತ್ತು, ಈ ಹಿನ್ನೆಲೆಯಲ್ಲಿ ಹಸಿ ಕಸ ಮತ್ತು ಒಣ ಕಸವನ್ನು ಪ್ರತ್ಯೇಕಿಸಿ ನಗರಸಭೆ ಹಾಗೂ ಸ್ಥಳೀಯಾಡಳಿತ ಸಂಸ್ಥೆಗಳ ತ್ಯಾಜ್ಯ ವಿಲೇವಾರಿ ವಾಹನಗಳಿಗೆ ನೀಡುವ ಮೂಲಕ ಸ್ವಚ್ಛತೆಗೆ ಮೊದಲ ಆದ್ಯತೆ ನೀಡಿ ಗಾಂಧೀಜಿಯವರ ಕನಸನ್ನು ನನಸು ಮಾಡಲು ಪ್ರತಿಯೊಬ್ಬರೂ ಸಹಕರಿಸಬೇಕು ಎಂದು ಗೌರವಾನ್ವಿತ ಜಿಲ್ಲಾ ಪ್ರಧಾನ ಹಾಗೂ ಸತ್ರ ನ್ಯಾಯಾಧೀಶೆ ನೇರಳೆ ವೀರಭದ್ರಯ್ಯ ಭವಾನಿ ಅವರು ಮನವಿ ಮಾಡಿದ್ದಾರೆ.

ಹುತಾತ್ಮರ ದಿನದ ಪ್ರಯುಕ್ತ ಜಿಲ್ಲಾಡಳಿತ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಜಿಲ್ಲಾ ವಕೀಲರ ಸಂಘ ಹಾಗೂ ನಗರಸಭೆ ಸಹಯೋಗದಲ್ಲಿ ಇಂದು ಚಿಕ್ಕಬಳ್ಳಾಪುರ ನಗರದ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಆವರಣದಲ್ಲಿ ಹಮ್ಮಿಕೊಂಡಿದ್ದ "ರಾಷ್ಟ್ರೀಯ ಸ್ವಚ್ಛತಾ ಕರ್ಯಕ್ರಮ"ಕ್ಕೆ ಮಾವಿನ ಸಸಿ ನೆಡುವ ಮೂಲಕ ಚಾಲನೆ ನೀಡಿ ಅವರು ಮಾತನಾಡಿದರು.

ಗಾಂಧೀಜಿಯವರು ಸ್ವಚ್ಛತೆಗೆ ಮೊದಲ ಆದ್ಯತೆ ನೀಡಿದ್ದರು, ಇಡೀ ದೇಶವೆಲ್ಲಾ ಸ್ವಚ್ಛವಾಗಿರಬೇಕು ಎಂಬ ಕನಸು ಕಂಡಿದ್ದರು, ಅವರ ಕನಸನ್ನು ನಾವೆಲ್ಲರೂ ನನಸು ಮಾಡಿ ಅವರಿಗೆ ನಿಜವಾದ ಅರ್ಥದಲ್ಲಿ ಗೌರವ ಸಲ್ಲಿಸಬೇಕಿದೆ, ನಾವು ವಾಸಿಸುವ ಸುತ್ತಮುತ್ತಲ ಪರಿಸರ ಶುಚಿತ್ವದಿಂದ ಕೂಡಿದ್ದಾಗ ಮಾತ್ರ ಲವಲವಿಕೆಯಿಂದ ಕ್ರಿಯಾಶೀಲರಾಗಿ ಕೆಲಸ ಮಾಡಿ ಆರೋಗ್ಯವಾಗಿರಲು ಸಾಧ್ಯ, ಆದ್ದರಿಂದ ಕಸವನ್ನು ಮನೆಯಿಂದಲೇ ಅಂದರೆ ಮೂಲದಲ್ಲೇ ಹಸಿ ಮತ್ತು ಒಣಕಸವನ್ನಾಗಿ ಬೇರ್ಪಡಿಸಿ ನಗರಸಭೆಯ ಕಸಸಂಗ್ರಹ ವಾಹನಕ್ಕೆ ನೀಡಬೇಕು, ರಸ್ತೆಗಳು, ಮಾರುಕಟ್ಟೆ, ಬಸ್ ನಿಲ್ದಾಣ, ಸರ್ಕಾರಿ ಕಚೇರಿಗಳು ಸೇರಿದಂತೆ ಎಲ್ಲ ಸಾರ್ವಜನಿಕ ಸ್ಥಳಗಳನ್ನು ತಮ್ಮ ಮನೆಗಳ ರೀತಿಯೇ ಸ್ವಚ್ಛತೆಯನ್ನು ಕಾಪಾಡಿಕೊಳ್ಳಬೇಕು ಎಂದು ತಿಳಿಸಿದರು.

ಜಿಲ್ಲಾಧಿಕಾರಿ ಪಿ.ಎನ್.ರವೀಂದ್ರ ಅವರು ಮಾತನಾಡಿ, ಸ್ವಚ್ಛತೆ ಎಲ್ಲಿರುತ್ತದೆಯೋ ಅಲ್ಲಿ ಆರೋಗ್ಯವಿರುತ್ತದೆ, ಸ್ವಚ್ಛತೆ ಎನ್ನುವುದು ಒಂದು ದಿನಕ್ಕೆ ಸೀಮಿತವಾಗದೇ ನಿರಂತರವಾಗಿರಬೇಕು, ನಗರ ಮತ್ತು ಗ್ರಾಮೀಣ ಪ್ರದೇಶಗಳನ್ನು ಕಸಮುಕ್ತವಾಗಿಸಲು ಎಲ್ಲರೂ ಸ್ಥಳೀಯ ಸಂಸ್ಥೆಗಳ ಕೈ ಜೋಡಿಸಬೇಕು ಎಂದು ಮನವಿ ಮಾಡಿದರು,

ಈ ಸಂದರ್ಭದಲ್ಲಿ ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಶಿಲ್ಪ, ನಗರಸಭೆ ಪೌರಾಯುಕ್ತ ಮನ್ಸೂರ್ ಆಲಿ, ವಕೀಲರ ಸಂಘದ ಜಿಲ್ಲಾಧ್ಯಕ್ಷ ಅಭಿಲಾಶ್, ಎಪಿಎಂಸಿ ಕಾರ್ಯದರ್ಶಿ ಉಮಾ, ವಕೀಲರ ಸಂಘದ ಸದಸ್ಯರು ಪದಾಧಿಕಾರಿಗಳು, ಕಂದಾಯ ಇಲಾಖೆ ಅಧಿಕಾರಿಗಳು ಮತ್ತು ಸಿಬ್ಬಂದಿ, ವಿವಿಧ ಇಲಾಖೆಯ ಅಧಿಕಾರಿಗಳು ಮತ್ತು ಸಿಬ್ಬಂದಿ, ವರ್ತಕರು, ರೈತರು ಹಾಜರಿದ್ದರು.

# ಪ್ರೆಸ್‌ಕ್ಲಬ್ ಕೌನ್ಸಿಲ್‌ನ ಕ್ಯಾಲೆಂಡರ್ ಬಿಡುಗಡೆ

**ಚಾಮರಾಜನಗರ:** ಪ್ರೆಸ್ ಕ್ಲಬ್ ಕೌನ್ಸಿಲ್ ನೂತನ ವರ್ಷದ ಕ್ಯಾಲೆಂಡರನ್ನು ಜಿಲ್ಲಾಧಿಕಾರಿಗಳಾದ ಸಿ.ಟಿ.ಶಿಲ್ಪಾ ನಾಗ್ ಬಿಡುಗಡೆ ಮಾಡಿದ್ದಾರೆ. ಈ ವೇಳೆ ಮಾತನಾಡಿದ ಅವರು ಉತ್ತಮ ಪ್ರಜಾಪ್ರಭುತ್ವದ ಅಶೋತ್ತರಗಳ ಸಕಾರಕ್ಕೆ ಪತ್ರಿಕಾ ಮಾಧ್ಯಮ ಕ್ಷೇತ್ರ ಕೂಡ ನ್ಯಾಯಾಂಗದಂತೆ ಸ್ವತಂತ್ರವಾಗಿ ಪ್ರಾಮಾಣಿಕತೆಯಿಂದ ಕೆಲಸ ಮಾಡುವ ಅಗತ್ಯವಿದೆ,ಮತ್ತು ಒಂದಕ್ಕೊಂದು ಪೂರಕವಾಗಿ ಹೊಂದಿಕೊಂಡು ತಮ್ಮ ಕರ್ತವ್ಯ ನಿರ್ವಹಿಸಿದರೆ ಪ್ರಜಾಪ್ರಭುತ್ವದ ಯಶಸ್ಸು ಸಾಧ್ಯ, ಆದ್ದರಿಂದ ದುರಾಡಳಿತ ಮತ್ತು ಭ್ರಷ್ಟಾಚಾರಕ್ಕೆ ಕಡಿವಾಣ ಹಾಕಬಹುದು ಎಂಬ ಅಭಿಪ್ರಾಯ ವ್ಯಕ್ತಪಡಿಸಿದರು.

ಪ್ರೆಸ್‌ಕ್ಲಬ್ ಕೌನ್ಸಿಲ್ ಜಿಲ್ಲಾಧ್ಯಕ್ಷರಾದ ಗೂಳಿಪುರ ಅನಿಲ್ ಕುಮಾರ್,ವಾರ್ತಾ ಇಲಾಖೆ ಸಹಾಯಕ ನಿರ್ದೇಶಕರಾದ ರಮೇಶ್, ಚಾಮರಾಜ ನಗರ ಜಿಲ್ಲಾಪತ್ರಕರ್ತರ ಸಂಘದ ಜಿಲ್ಲಾಧ್ಯಕ್ಷ ಜಿ.ಬಂಗಾರು, ಪ್ರಜಾ ಸೇನೆಯ ಉಪ ಸಂಪಾದಕರಾದ ಗಣಿಗನೂರು ಚಿನ್ನಸ್ವಾಮಿ, ಯಳಂದೂರು ತಾಲೂಕು ಅಧ್ಯಕ್ಷರಾದ ವಡಗೆರೆ ಆನಂದ್ ಕುಮಾರ್, ಕರ್ನಾಟಕ ಪತ್ರಕರ್ತರ ಸಂಘದ ಜಿಲ್ಲಾ ಕಾರ್ಯದರ್ಶಿ ಉಮೇಶ್ ಹಾಗೂ ಇತರರು ಹಾಜರಿದ್ದರು.

# ಎಸ್.ಎನ್.ಕ್ರಿಯಾ ಟ್ರಸ್ಟ್‌ನಿಂದ ತಲಕಾಯಲಬೆಟ್ಟಕ್ಕೆ ರಸ್ತೆ ನಿರ್ಮಾಣ

**ಶಿಡ್ಲಘಟ್ಟ:** ತಾಲ್ಲೂಕಿನ ಉತ್ತರ ದಿಕ್ಕಿನಲ್ಲಿ ಪಾಪಾಗ್ನಿ ನದಿ ದಡದಲ್ಲಿರುವ ತಲಕಾಯಲಬೆಟ್ಟದ ಶ್ರೀಭೂನಿಳಾ ಶ್ರೀ ದೇವಿ ಸಮೇತ ಶ್ರೀವೆಂಕಟರಮಣಸ್ವಾಮಿ ದೇವಾಲಯವು ಕೆಳಗಡೆ ಇದ್ದು ತಿರುಪತಿಯ ತಿರುಮಲ ಶ್ರೀ ವೆಂಕಟೇಶ್ವರಸ್ವಾಮಿಯಷ್ಟೇ ಈ ಭಾಗದಲ್ಲಿ ಪ್ರಸಿದ್ಧಿ ಪಡೆದಿದೆ, ತಲಕಾಯಲಬೆಟ್ಟದ ಮೇಲ್ಭಾಗದಲ್ಲಿ ಶ್ರೀಲಕ್ಷ್ಮಿವೆಂಕಟೇಶ್ವರ ದೇವಾಲಯವಿದ್ದು ಕಲ್ಲಿನ ಮೆಟ್ಟಿಲುಗಳ ಮೂಲಕ ಭಕ್ತಾದಿಗಳು ದರ್ಶನ ಪಡೆಯಲು ಹೋಗುತ್ತಿದ್ದರು. ವಾಹನಗಳ ಮೂಲಕ ತೆರಳಲು ರಸ್ತೆ ಇರಲಿಲ್ಲ. ಎಸ್.ಎನ್. ಕ್ರಿಯಾ ಟ್ರಸ್ಟ್ ನ ಅಧ್ಯಕ್ಷ ಹಾಗೂ ಕಾಂಗ್ರೆಸ್ ಮುಖಂಡ ಆಂಜಿನಪ್ಪ (ಪುಟ್ಟು) ಅವರು ಶಾಶ್ವತ ರಸ್ತೆಯನ್ನು ಅಭಿವೃದ್ಧಿಪಡಿಸುತ್ತಿದ್ದಾರೆ.ಈ ಹಿಂದೆ ಭಕ್ತಾದಿಗಳು ಬೆಟ್ಟವನ್ನು ಹತ್ತಲು ಮೆಟ್ಟಲುಗಳ ಮೂಲಕ ಹೋಗಬೇಕಿತ್ತು. ಇದೀಗ ಆಂಜಿನಪ್ಪ(ಪುಟ್ಟು) ನೇತೃತ್ವದಲ್ಲಿ ಸುಮಾರು 40 ಅಡಿ ಅಗಲದ ವಿಶಾಲವಾದ ರಸ್ತೆಯನ್ನು ಬೆಟ್ಟದ ಕೆಳಗಡೆಯಿಂದ ಬೆಟ್ಟದ ಮೇಲ್ಭಾಗದ ತುದಿಯವರೆಗೂ ಸುಮಾರು 3 ಕಿ.ಮೀ. ರಸ್ತೆಯನ್ನು ಅಭಿವೃದ್ಧಿ ಪಡಿಸಿದ್ದಾರೆ.



ಶ್ರೀಭೂನೀಳಾ ಶ್ರೀದೇವಿ ಸಮೇತ ವೆಂಕಟರಮಣಸ್ವಾಮಿಯ ದೇವಾಲಯ ಇರುವ ಈ ಸ್ಥಳ ಐತಿಹಾಸಿಕವಾಗಿ,ಧಾರ್ಮಿಕವಾಗಿಯೂ, ಪ್ರಾಕೃತಿಕವಾಗಿಯೂ ಸಾಕಷ್ಟು ಬೆರಗು ಮೂಡಿಸುವ ತಲಕಾಯಲಬೆಟ್ಟವು ಕೇವಲ ಭಕ್ತರನ್ನಷ್ಟೆ ಅಲ್ಲ ಪ್ರಕೃತಿ ಪ್ರಿಯರು, ಪ್ರವಾಸಿಗರಿಗೆ ಹೇಳಿ ಮಾಡಿಸಿದ ತಾಣವೂ ಆಗಿದೆ.

ಸುಮಾರು ಮೂರು ಕಿಲೋಮೀಟರ್ ಬೆಟ್ಟದ ನೂತನ ರಸ್ತೆಯಲ್ಲಿ ಕಾಲ್ನಡಿಗೆ ಮೂಲಕ ಸಂಚರಿಸಿದ ಆಂಜಿನಪ್ಪ (ಪುಟ್ಟು) ಅವರು ರಸ್ತೆ ಕಾಮಗಾರಿಯನ್ನು ಪರಿಶೀಲನೆ ನಡೆಸಿ ಬಳಿಕ ಮಾತನಾಡಿ ಶಿಡ್ಲಘಟ್ಟ ಕ್ಷೇತ್ರದ ತಿರುಪತಿ ಎಂದೇ ಪ್ರಸಿದ್ಧಿ ಪಡೆದಿರುವ ತಲಕಾಯಲಬೆಟ್ಟದ ಭೂನೀಳ ಸಮೇತ ಶ್ರೀ ಲಕ್ಷ್ಮೀವೆಂಕಟರಮಣಸ್ವಾಮಿ ದೇವಾಲಯವು ಈ ಭಾಗದಲ್ಲಿ ಬಹಳಷ್ಟು ಪ್ರಖ್ಯಾತಿ ಹೊಂದಿದೆ. ಹಾಗೆಯೇ ತಲಕಾಯಲಬೆಟ್ಟದ ತುದಿಯಲ್ಲಿ ಸಹ ಶ್ರೀ ಲಕ್ಷ್ಮಿವೆಂಕಟರಮಣಸ್ವಾಮಿ ದೇವಾಲಯ ಪ್ರತಿಷ್ಠಾಪಿಸಲಾಗಿದ್ದು, ಈ ದೇವಾಲಯಕ್ಕೆ ನಡೆದುಕೊಂಡು ಹೋಗಲು ಮೆಟ್ಟಿಲುಗಳ ವ್ಯವಸ್ಥೆ ಮಾತ್ರವೇ ಇದ್ದು, ಆದ್ರೆ ವಾಹನಗಳ ಮೂಲಕ ಬೆಟ್ಟಕ್ಕೆ ತೆರಳಿ ದೇವರ ದರ್ಶನ ಪಡೆಯಲುಅನಾನುಕೂಲವಾಗಿತ್ತು.ಇದೀಗ ಸುಮಾರು 40 ಅಡಿ ಅಗಲದ ವಿಶಾಲವಾದ ರಸ್ತೆಯನ್ನು ಬೆಟ್ಟದ ತುದಿಯವರೆಗೂ ಅಭಿವೃದ್ಧಿ ಪಡಿಸುತ್ತಿದ್ದು, ವಾಹನಗಳು ಸರಾಗವಾಗಿ ಸಂಚರಿಸಲು ಭಕ್ತಾದಿಗಳಿಗೆ ಮತ್ತು ಪ್ರವಾಸಿಗರಿಗೆ ಅನುಕೂಲವಾಗಲಿದೆ ಎಂದು ಹೇಳಿದ ಅವರು,ಕಾಮಗಾರಿಯು ಜನವರಿ 1, 2025 ರಂದು ಪ್ರಾರಂಭವಾಗಿ ಬೆಟ್ಟದ ತುದಿಯವರೆಗೂ ಬರದಿಂದ ಸಾಗಿ ಶೇ 80 ರಷ್ಟು ಕಾಮಗಾರಿ ಮುಗಿದಿದ್ದು ದೇವಾಲಯವಿರುವ ಸ್ಥಳಕ್ಕೆ ಸಂಪರ್ಕ ಕಲ್ಪಿಸುವ ರಸ್ತೆ ಕೆಲವೇ ದಿನಗಳಲ್ಲಿ ಪೂರ್ಣಗೊಳ್ಳಲಿದೆ ಇದರಿಂದ ಪ್ರವಾಸಿಗರಿಗೆ,ಭಕ್ತಾದಿಗಳಿಗೆ ಹಾಗು ಸ್ಥಳೀಯರಿಗೆ ಅನುಕೂಲವಾಗಲಿದೆ ಎಂದು ಹೇಳಿದರು.

ವಾಹನಗಳಲ್ಲಿ ಬರುವ ಭಕ್ತಾದಿಗಳ ವಾಹನ ನಿಲುಗಡೆಗೆ ಬೆಟ್ಟದ ಮೇಲಿನ ಖಾಲಿ ಸ್ಥಳ ಗುರ್ತಿಸಿ ಬಂಡೆ ಕಲ್ಲುಗಳು ಮತ್ತು ಗಿಡ ಗಂಟಿಗಳನ್ನು ತೆಗೆದು ಸಮತಟ್ಟಾಗಿ ಮಾಡಿನಿಲುಗಡೆಗೆ ಅನುಕೂಲ ಕಲ್ಪಿಸಲಾಗುವುದು ಎಂದರು. ಬೆಟ್ಟದ ರಸ್ತೆ ಪರಿಶೀಲನೆಯ ಮುನ್ನ ಶ್ರೀ ಭೂನೀಳಾ ಸಮೇತ ಶ್ರೀ ವೆಂಕಟರಮಣ ಸ್ವಾಮಿ ದೇವಾಲಯದಲ್ಲಿ ಆಂಜಿನಪ್ಪ (ಪುಟ್ಟು) ಅವರು ವಿಶೇಷ ಪೂಜೆಯನ್ನು ಸಲ್ಲಿಸಿದರು.

ಈ ಸಂದರ್ಭದಲ್ಲಿ ತಲಕಾಯಲಬೆಟ್ಟ ಗ್ರಾಮ ಪಂಚಾಯಿತಿ ಅಧ್ಯಕ್ಷ ವೆಂಕಟಸ್ವಾಮಿ,ಸದಸ್ಯರಾದ ಅಶ್ವತ್ ರೆಡ್ಡಿ, ಕೃಷ್ಣಾರೆಡ್ಡಿ,ನಾರಾಯಣರೆಡ್ಡಿ, ಸೀತಹಳ್ಳಿ ಮಂಜುನಾಥ್, ಆಟಗೊಲ್ಲಹಳ್ಳಿ ನಾರಾಯಣರೆಡ್ಡಿ, ಪುಸಗಾನದೊಡ್ಡಿ ಮಂಜುನಾಥ್, ರಮೇಶ್, ಗೌಡನಹಳ್ಳಿ ಮಂಜುನಾಥ್ ಮುಖಂಡರಾದ ಕೋಟಹಳ್ಳಿ ಶ್ರೀನಿವಾಸ್,ವೈ.ಹುಣಿಸೇನಹಳ್ಳಿ ಗ್ರಾಮ ಪಂಚಾಯತಿ ಅಧ್ಯಕ್ಷ ಮುರಳಿ,ರಾಜ್ ಕುಮಾರ್,ಹಿತ್ತಲಹಳ್ಳಿ ಮುನಿರಾಜು, ವರದರಾಜು, ರಮೇಶ್, ಸಾಧಿಕ್,ಗಂಜಿಗುಂಟೆ ವಸಂತಾಚಾರಿ, ಕೆ.ದೇವಗಾನಹಳ್ಳಿ ಶೇಖರ್ ರೆಡ್ಡಿ, ಅಕ್ಕಲಪ್ಪ ಮತ್ತಿತರರು ಹಾಜರಿದ್ದರು.

# ಸ್ವಾತಂತ್ರ್ಯ ನಂತರವೂ ಭೂಮಿಯ ಒಡೆಯರ ಪೂರ್ವಿಕರ ಸ್ವತ್ತು ಅವರ ತಲೆಮಾರಿಗೆ ದೊರಕುವುದೇ?

**ದೇ.ರಾ.ಜಗದೀಶ್ ದೇವಲಾಪುರ**

ರಾಜ್ಯದ ಉದ್ದಗಲಕ್ಕೂ ಪ್ರತಿ ಹಳ್ಳಿಯಲ್ಲಿಯೂ ಭೂ ಒಡೆತನದ ಕೂಗು ಪೂರ್ವಜರ ಹಕ್ಕು ಬಾಧ್ಯತೆ ಮಾಡದೇ ಇರುವುದು ಈಗಲೂ ಕಗ್ಗಂಟಾಗಿ ಅಲ್ಲಲ್ಲಿ ಉಳಿದಿರುವುದು ಮಂಡ್ಯ ಜಿಲ್ಲೆ ನಾಗಮಂಗಲ ತಾಲೂಕಿನಲ್ಲಿಸಾಕ್ಷಿಭೂತವಾಗಿ ನಿಂತಿದೆ.



ಸ್ವಾತಂತ್ರ್ಯ ಪೂರ್ವದಿಂದಲೂ ತಾತ ಮುತ್ತಾದ ಕಾಲದಿಂದಲೂ ಉಳುಮೆ ಮಾಡಿಕೊಂಡು ಬದುಕು ಕಟ್ಟಿಕೊಂಡು ಜೀವನ ನಡೆಸುತ್ತಾ ಬಂದಿರುವುದು ಇದುವರೆಗೂ ಅವರುಗಳೇ ಆ ನೆಲದ ಒಡೆಯರಾಗಿ ಬದುಕು ಕಟ್ಟಿ ಒಂದೇ ಗ್ರಾಮದ ಕುಟುಂಬಗಳು ಆ ನೆಲದ ಒಡಲಾಳ ಬದುಕು ಸಾಗುತ್ತಾ ಬಂದಿರುವುದು ನಾಗಮಂಗಲ ತಾಲೂಕಿನ ಬೆಳ್ಳೂರು ಹೋಬಳಿಯ ನಾಯಕನ ಕೊಪ್ಪಲು ಎಂಬ ಚಿಕ್ಕ ಗ್ರಾಮದ 70ಕ್ಕೂ ಅಧಿಕ ಕುಟುಂಬಗಳು ಬದುಕು ಕಟ್ಟುಕೊಂಡಿರುವುದು ಈ ಗ್ರಾಮದಲ್ಲಿ.

ಭೂ ಒಡೆತನದ ಕೂಗು ಹೋರಾಟದ ಕಿಚ್ಚು ದೇಶವಾಪಿಯಲ್ಲಿ ಇದ್ದರೂ ಗಮನದಲ್ಲಿಟ್ಟು ಪ್ರಧಾನಮಂತ್ರಿಗಳಾಗಿದ್ದ ಇಂದಿರಾಗಾಂಧಿಯವರು ಸ್ವತಂತ್ರ ಬಂದ ನಂತರವೂ ದೇಶದ ಭೂಮಿ ಶೇಕಡ 75ರಷ್ಟು ಉಳ್ಳವರ ಒಡೆತನದಲ್ಲಿತ್ತು 1982 ರಲ್ಲಿ ಉಳುವವನೇ ಭೂಮಿಯ ಒಡೆಯ ಎಂಬ ಕಾಯ್ದೆ ತಂದ ನಂತರ ಉಳ್ಳವರ ಭೂಮಿಯಲ್ಲಿ ಗೀತಾ ಮಾಡುತ್ತಿದ್ದ ಬಡ ಜನರಿಗೆ ಭೂಮಿ ಸಿಕ್ಕಿತು.



'ಅಂದೇ ಒಡೆತನದ ಹಕ್ಕು ಪಡೆದುಕೊಂಡ ಫಲಾನುಭವಿಗಳ ರೈತರು ಇಂದಿರಾಗಾಂಧಿಯವರನ್ನ ನೆನಪಿಸಿಕೊಳ್ಳುವುದು ಇಂದಿಗೂ ಇತಿಹಾಸದ ದಾಖಲೆಯಾಗಿದೆ.

ಈ ಎಲ್ಲಾ ಭೂ ಒಡೆತನದ ಹಕ್ಕು ಬಾಧ್ಯತೆಗಳು ನಾಯಕನ ಕೊಪ್ಪಲು ಗ್ರಾಮದ ಪೂರ್ವಜರು ದಾಖಲೆ ಮಾಹಿತಿಗಳನ್ನ ತಿಳಿಯದು ಅವರು ಅಂದಿನಿಂದ ಇಂದಿನವರೆಗೂ ಭೂ ಸ್ವಾಧೀನ ದಲ್ಲಿ ಬದುಕು ಕಟ್ಟಿಕೊಂಡು ಬೆಳೆದು ಬಂದವರು ಇಂತಹ ಗ್ರಾಮದ ಮಕ್ಕಳಿಗೆ ಮಂಕುಬೂದಿ ಎರಚಿ ಸ್ವಾರ್ಥ ಸಾಧನೆಯ ಬದುಕು ಕಟ್ಟಿಕೊಳ್ಳಲು ಸ್ವಾತಂತ್ರ ನಂತರದ ಹೆಜ್ಜೆ ಮುಂದಿಟ್ಟು ಭೂ ಆಕ್ರಮಣ ಮಾಡಿಕೊಳ್ಳುವುದು ಸಂಚು ಮಾಡಿಕೊಂಡು ಆಊರ ಗ್ರಾಮದ ಮೇಲೆಯೇ ಕಾನೂನು ರೀತಿಯ ಹೋರಾಟ ಮಾಡಲು ರೈತನನ್ನು ದಂಗೆ ಹೇಳಲು ತೆರೆಮರೆ ಯಲ್ಲಿ ನಡೆದ ಪ್ರಯತ್ನವೇ ಈ ಗ್ರಾಮದ ಭೂಮಿಯ ಸ್ವತ್ತು ಪಡೆಯಲು ಮುಂದಾಗಿರುವುದೇ ಸ್ವಾತಂತ್ರ್ಯ ನಂತರದ ನೈಜ ಸಾಕ್ಷಿಯಾಗಿ ಉಳಿದಿರುವುದು ಇಂದು.

ಈ ಗ್ರಾಮದ ಸರ್ವೆ ನಂಬರ್ 45 ರಲ್ಲಿ 18 ಎಕರೆ 14 ಕುಂಟೆ ಗೋಮಾಳ ಜಮೀನಿನಲ್ಲಿ ಸುಮಾರು 70 ಅಧಿಕ ಕುಟುಂಬಗಳು ಈ ನೆಲದ ಬದುಕು ಅನ್ನ ನೀರು ಅವರ ಪೂರ್ವಿಕ ಮುತ್ತಾತನಿಂದಲೂ ಈ ನೆಲದ ರೈತ ಮಕ್ಕಳಾಗಿ ಜೀವನದ ಬದುಕಿನ ಬಂಡಿ ಕಟ್ಟಿಕೊಂಡು ಹೋಗುತ್ತಿದ್ದ ಇವರಿಗೆ ಸ್ವಾತಂತ್ರ ಪಡೆದ ನಂತರ ಸ್ವಾತಂತ್ರ್ಯ ಪಡೆದ ದೇಶವಾದರೂ ಸ್ವಾತಂತ್ರ್ಯವಾಗಿದ್ದವರನ್ನೇ ಈ ಗ್ರಾಮವನ್ನು ಬಿಟ್ಟು ಓಡಿಸುವ ಪ್ರಯತ್ನ ಮಾಡುವುದು ಯಾವ ನ್ಯಾಯ ಎಂಬುದು ಜನಸಾಮಾನ್ಯರಲ್ಲಿ ಮೂಡುವ ಪ್ರಶ್ನೆಯಾಗಿದೆ.

ನಾಯಕನ ಕೊಪ್ಪಲು ಗ್ರಾಮದ ರೈತ ಮಕ್ಕಳಿಗೆ ಆ ನೆಲದ ಬದುಕು ಕಟ್ಟಿಕೊಳ್ಳುವ ಹಕ್ಕು ನೀಡುವವರು ಎಂಬುದನ್ನು ಪ್ರಕರಣಗಳಿದ್ದರೂ ನ್ಯಾಯಾಲಯದಲ್ಲಿ ಮೊರೆ ಹೋದರು ಈ ನೆಲದ ಸಾಕ್ಷಿ ಭೂತ ಎಷ್ಟು ವರ್ಷಗಳು ಅವರೆ ಇದ್ದರು ಇತ್ತೀಚೆಗೆ ಬಂದವರಿಗೆ ದಾರಿಕೊಟ್ಟರೆ ಯಾವ ನ್ಯಾಯ ಎಂಬುದು ಪ್ರಜ್ಞಾವಂತರಲ್ಲಿ ಮೂಡಿರುವ ಯಕ್ಷ ಪ್ರಶ್ನೆಯಾಗೆ ಉಳಿದಿದೆ.

# ಸೋಲೂರು ಹೋಬಳಿಗೆ 7 ಕೋಟಿ ಅನುದಾನ

ಮಾಗಡಿ: ಸೋಲೂರು ಹೋಬಳಿಗೆ 7 ಕೋಟಿ ಅನುದಾನ ತಂದಿದ್ದೇನೆ ಎಂದು ನೆಲಮಂಗಲ ಶಾಸಕ ಎನ್.ಶ್ರೀನಿವಾಸ್ ತಿಳಿಸಿದರು.

ತಾಲೂಕಿನ ಗುಡೇಮಾರನಹಳ್ಳಿ ಹ್ಯಾಂಡ್ ಪೋಸ್ಟ್ ನ ಸಿದ್ದಗಂಗಾ ಸಮುದಾಯ ಭವನದಲ್ಲಿ ನಡೆದ ಶಾಸಕರ ನಡೆ ಹಳ್ಳಿ ಕಡೆ ಎಂಬ ವಿನೂತನ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ದಲಿತ ಕಾಲೋನಿಗೆ ವಿಶೇ? ಅನುದಾನ ತಂದಿದ್ದು, ಈಗಾಗಲೇ ಚಾಲನೆ ನೀಡಿದ್ದೇನೆ. ಬಡವರ ಮನೆಗಳಿಗೆ ಬೆಳಕು ತರುವ ಕೆಲಸ ಮಾಡುತ್ತೇನೆ.ಸ್ವಂತ ನಿವೇಶನ ಹೊಂದಿರುವ ಬಡವರಿಗೆ 600 ಮನೆ ಮಂಜೂರಾತಿ ತಂದಿದ್ದೇನೆ. ಸೋಲೂರು ಹೋಬಳಿಗೆ ಇನ್ನೂ 1 ಸಾವಿರ ಮನೆ ಬೇಕು ಎಂದು ಸಚಿವ ಜಮೀರ್ ಅಹಮದ್ ಅವರಲ್ಲಿ ಮನವಿ ಮಾಡಿದ್ದೇನೆ. ಪ್ರಸ್ತುತ ಬಜೆಟ್ ಮುಗಿದ ನಂತರ 1.60 ಲಕ್ಷ ಇದ್ದ ಮನೆಯ ವೆಚ್ಚವನ್ನು 3 ಲಕ್ಷ ಹೆಚ್ಚಿಸಿ ಕೊಡಲಾಗುವುದಾಗಿ ಭರವಸೆ ಕೊಟ್ಟಿದ್ದಾರೆ. ನೆಲಮಂಗಲ ಕ್ಷೇತ್ರದ ವ್ಯಾಪ್ತಿಯಲ್ಲಿ ವಿಮಾನ ನಿಲ್ದಾಣ ಬೇಡ ; ನೆಲಮಂಗಲ ಕ್ಷೇತ್ರ ವ್ಯಾಪ್ತಿಯ ಸಾರ್ವನಿಕರು ಮನವಿ ಮಾಡಿರುವುದರಿಂದ ಜನರ ಮಾತಿಗೆ ಬದ್ಧನಾಗಿದ್ದೇನೆ. ಯಾವುದೇ ಕಾರಣಕ್ಕೂ ನನ್ನ ಕ್ಷೇತ್ರದಲ್ಲಿ ವಿಮಾನ ನಿಲ್ದಾಣ ಬೇಡ ಎಂದು ಸರ್ಕಾರ ಸಹ ಸಕಾರಾತ್ಮಕವಾಗಿ ಸ್ಪಂದಿಸಿದಿದೆ. ಸೋಲೂರು ಹೋಬಳಿಯ ಜನರ ಕೂಗಿಗೆ ಚುನಾವಣೆಯ ಪೂರ್ವದಲ್ಲಿಯೇ ಮಾತು ಕೊಟ್ಟಿದ್ದೆ. ಅದರಂತೆ ಸೋಲೂರು ಹೋಬಳಿಯನ್ನು ನೆಲಮಂಗಲ ಸೇರಿಸುತ್ತೇವೆ. ಜನತೆಯ ಪರವಾಗಿದ್ದೇನೆ. ಸರ್ಕಾರಿ ಕೆರೆಕಟ್ಟೆ ಸರ್ಕಾರಿ ಜಾಗ ಒತ್ತುವರಿಯಾಗಿರುವ ದಾಖಲೆ ಕೊಟ್ಟರೆ ವಾರದೊಳಗೆ ನಿರ್ಧಾಕ್ಷಣ್ಯವಾಗಿ ತೆರುವುಗೊಳಿಸುವ ಕೆಲಸ ಮಾಡುತ್ತೇನೆ.



ಇದೇ ವೇಳೆ ನೂರಾರು ರೈತರು ಸಾಗುವಳಿ ಚೀಟಿ, ಇ-ಖಾತೆ ಸಂಬಂಧ ಅರ್ಜಿಯನ್ನು ಶಾಸಕರಿಗೆ ನೀಡಿ ಮನವಿ ಮಾಡಿದರು. ಸ್ಥಳದಲ್ಲಿಯೇ ತಹಶೀಲ್ದಾರ್ ಶರತ್‌ಕುಮಾರ್‌ಗೆ ಅರ್ಜಿ ನೀಡಿ ಕೂಡಲೆ ವಿಲೇವಾರಿಗೆ ಸೂಚನೆ ನೀಡಿದರು. ಕುಡಿಯುವ ನೀರು ಕೊಳವೆಬಾವಿ ದುರಸ್ಥಿ ಕುರಿತು ಹಲವರು ಮುಖಂಡರು ಶಾಸಕರ ಗಮನಕ್ಕೆ ತಂದರು.

ಈ ಕಾರ್ಯಕ್ರಮ ಕೇವಲ ಸಂಕೇತಿಕ ಮುಂದಿನ ದಿನಗಳಲ್ಲಿ ಜನಸ್ಪಂದನ ಸಭೆಯನ್ನು ಕರೆಯಲಾಗುವುದು. ಆಗ ತಹಶೀಲ್ದಾರ್ ಇತರೆ ತಾಲೂಕು ಮಟ್ಟದ ಅಧಿಕಾರಿಗಳು ಕಡ್ಡಾಯವಾಗಿರಬೇಕು. ನನ್ನ ನಡೆ ಹಳ್ಳಿ ಕಡೆ ವ್ಯಾಪ್ತಿಗೆ ಸಂಬಂಧ ಪಟ್ಟ ಅಧಿಕಾರಿ ವರ್ಗದವರು ಇದ್ದರೆ ಸಾಕು ಹಳ್ಳೀಜನರ ಸಮಸ್ಯೆ ಆಲಿಸಿ ಅಲ್ಲೇ ಬಗೆಹರಿಸುವ ಪ್ರಮಾಣಿಕ ಪ್ರಯತ್ನ ಮಾಡುವುದಾಗಿ ಶಾಸಕರು ತಿಳಿಸಿದರು.ಇಓ ಜಯಪಾಲ್,ತಾಲೂಕು ಮಟ್ಟದ ಅಧಿಕಾರಿಗಾದ ಅರಣ್ಯಾಧಿಕಾರಿ ಚೈತ್ರಾ, ಕೃಷಿ ಸಹಾಯಕ ನಿರ್ದೇಶಕಿ ವಿಜಯ ಶವಣೂರು, ತೋಟಗಾರಿಕೆ ಸಹಾಯಕ ನಿರ್ದೇಶಕ ಸಂತೋಷ್‌ಕುಮಾರ್, ಸಿಡಿಪಿಓ ಸುರೇಂದ್ರ, ಬೆಸ್ಕಾಂ ಎಇಇ ಶಿವರಾಜ್, ಲಕ್ಕೇನಹಳ್ಳಿ ಗ್ರಾಪಂ ಅಧ್ಯ? ನಾರಾಯಣ್, ಬಿಟ್ಟಸಂದ್ರ ಗ್ರಾಪಂ ಅಧ್ಯಕ್ಷ ಗಂಗರಂಗಯ್ಯ, ಶಂಕರಪ್ಪ, ಎಸ್ ಸಿಬಿಎಸ್ ಕಿರಣ್‌ಕುಮಾರ್, ಜಿಪಂ ಮಾಜಿ ಸದಸ್ಯ ರಂಗಸ್ವಾಮಿ, ಸಿ.ಆರ್.ಗೌಡ. ಕುಮಾರ್, ಪಿಡಿಓ ನಾಗರಾಜು, ಮೂರ್ತಿ, ವೆಂಕಟೇಶ್, ಜಯರಾಮ್, ಆಂಜನಪ್ಪ, ರಮೇಶ್ ಇತರರು ಇದ್ದರು.

# ಶ್ರೀಶನೇಶ್ವರ, ಮುನೇಶ್ವರ ಸ್ವಾಮೀಯ ಜಾತ್ರಾ ಮಹೋತ್ಸವ

**ಮಾಗಡಿ:** ತಾಲೂಕಿನ ದೊಡ್ಡಸೋಮನ ಹಳ್ಳಿ ಶ್ರೀಶನೇಶ್ವರ ಸ್ವಾಮಿ, ಮುನೇಶ್ವರ ಸ್ವಾಮೀಯ 27 ನೇವರ್ಷದ ಜಾತ್ರಾ ಮಹೋತ್ಸವ ಹಾಗೂ 48 ಅಡಿಯ ಶ್ರೀಅಭಯಾಂಜನೇಯ ಸ್ವಾಮೀಯ ನೂತನ ಪ್ರತಿಮೆ ಲೋಕಾರ್ಪಣೆ ಕಾರ್ಯಕ್ರಮ ಫೆ.2ರಂದು ನಡೆಯಲಿದೆ ಎಂದು ಪ್ರಧಾನ ಅರ್ಚಕ ಶಿವಮ್ಮ ಸಿದ್ದಗಂಗಯ್ಯ ತಿಳಿಸಿದ್ದಾರೆ.

ಫೆ.1 ರಂದು ಶನಿವಾರ ಗಂಗಾ ಪೂಜೆ, ಗಣಪತಿ ಪೂಜೆ, ಪಂಚಗವ್ಯ, ವಾಸ್ತು ಶಾಂತಿ, ವಾಸ್ತು ಹೋಮ, ರಾಕ್ಷೋಘ್ನಹೋಮ, ಪ್ರವೇಶ ಬಲಿ, ಕುಂಭಾರಾಧನೆ, ನೂತನ ವಿಗ್ರಹಕ್ಕೆ ರಕ್ಷಾ ಬಂಧನ ನಡೆಯಲಿದ್ದು ರಾತ್ರಿ 10-30ಕ್ಕೆ ರಾಜ ಸತ್ಯವ್ರತ ಅಥವಾ ಶನಿಪ್ರಭಾವ ಪೌರಾಣಿಕ ನಾಟಕ ನಡೆಯಲಿದೆ ಎಂದರು.

ಫೆ. 2 ರಂದು ಭಾನುವಾರ ಬೆಳಗ್ಗೆ 9-40ರಿಂದ 10-50 ಕ್ಕೆ ಶ್ರೀಅಭಯಾಂಜನೇಯ ಸ್ವಾಮಿ ಪ್ರತಿಮೆ ಉದ್ಘಾಟನೆಯಾಗಲಿದ್ದು ಸ್ಥಿರಬಿಂಭ ಪ್ರತಿಷ್ಠಾಪನೆ, ಆಷ್ಟ ಬಂಧನ ಸಮರ್ಪಣೆ, ಮಹಾ ಕುಂಭಾಭಿಷೇಕ, ಸುಪ್ರಭಾತ ಸೇವೆ, ವೇದಪಾರಾಯಣ, ಗಣಪತಿ ಪೂಜೆ, ಪುಣ್ಯಾ:, ವೇದಿಹುತಿ, ನೇತ್ರೋನ್ಮಿಲನ, ಹೋಮ, ಮಹಾ ಪೂರ್ಣಾಹುತಿ, ಜಪಹೋಮ, ಫಲಪಂಚಾಮೃತ ಅಭಿಷೇಕ, ಗೋಪೂಜೆ ನಡೆಯಲಿದೆ, ಭಾನುವಾರ ಮಧ್ಯಾಹ್ನ 1 ಗಂಟೆಗೆ ಶ್ರೀಶನೇಶ್ವರ ಸ್ವಾಮಿ, ಶ್ರೀ ಮುನೇಶ್ವರ ಸ್ವಾಮಿ, ಬಸವೇಶ್ವರ ಸ್ವಾಮಿ, ಕೆಂಚನಹಳ್ಳಿ ಲಕ್ಷಿದೇವಿ, ಬಿಲ್ಲಿಕೋಟೇಮ್ಮ ಸೋಮೇನಾಳಮ್ಮ ದೇವರುಗಳ ಉತ್ಸವವು ದೇವಾಲಯದ ಆವರಣದಲ್ಲಿ ವಿವಿಧ ಸಾಂಸ್ಕೃತಿಕ ಕಲಾತಂಡಗಳೊಂದಿಗೆ ಮೆರವಣಿಗೆ



ನಡೆಯಲಿದ್ದು ನಿರಂತರ ಅನ್ನದಾಸೋಹ ಕಾರ್ಯಕ್ರಮ ನಡೆಯಲಿದೆ ಎಂದರು. 48 ಅಡಿಯ ಶ್ರೀಅಭಯಾಂಜನೇಯ ಸ್ವಾಮೀಯ ನೂತನ ಪ್ರತಿಮೆ ಯನ್ನು ಸಿದ್ದಗಂಗಾ ಮಠದ ಸಿದ್ದಲಿಂಗ ಸ್ವಾಮೀಜಿ ಲೋಕಾರ್ಪಣೆಮಾಡಲಿದ್ದು, ಆದಿಚುಂಚನಗಿರಿ ಮಠದ ನಿರ್ಮಾಲಾನಂದ ನಾಥ ಸ್ವಾಮೀಜಿ ಜಾತ್ರಾ ಮಹೋತ್ಸವಕ್ಕೆ ಚಾಲನೆ ನೀಡಲಿದ್ದಾರೆ, ಸ್ಪಟಿಕಪುರಿ ಮಹಾಸಂಸ್ಥಾನ ಮಠದ ನಂಜಾವಧೂತ ಮಹಾಸ್ವಾಮೀಜಿ, ವಿಶ್ವ ಒಕ್ಕಲಿಗರ ಮಠದ ಡಾ.ನಿಶ್ಚಲಾನಂದ ಸ್ವಾಮೀಜಿ, ಬ್ರಹ್ಮಾಂಡ ಗುರೂಜಿ ನರೇಂದ್ರ ಬಾಬು ಶರ್ಮ, ಶಾಸಕ ಎಚ್.ಸಿ.ಬಾಲಕೃಷ್ಣ, ಮಾಜಿ ಶಾಸಕ ಎ.ಮಂಜುನಾಥ್, ವೀರಶೈವ ಮುಖಂಡ ಸೇರಿದಂತೆ ಚುನಾಯಿತ ಪ್ರತಿನಿಧಿಗಳು ಭಾಗವಹಿಸಲಿದ್ದಾರೆ ಎಂದು ದೇವರಾಜು ತಿಳಿಸಿದ್ದಾರೆ.

# ಕುಷ್ಠರೋಗದ ಬಗ್ಗೆ ತಪ್ಪು ಕಲ್ಪನೆಗಳನ್ನು ಹೋಗಲಾಡಿಸಬೇಕು: ಜಿಲ್ಲಾಧಿಕಾರಿ

**ಚಿಕ್ಕಬಳ್ಳಾಪುರ:** ರಾಷ್ಟ್ರೀಯ ಕುಷ್ಠರೋಗ ನಿರ್ಮೂಲನಾ ಕಾರ್ಯಕ್ರಮದಡಿ ಜನವರಿ 30 ರಿಂದ ಫೆಬ್ರವರಿ 13 ರವರೆಗೆ ಜಿಲ್ಲೆಯಾದ್ಯಂತ ಸ್ಪರ್ಶ್ ಕುಷ್ಠರೋಗ ಅರಿವು ಆಂದೋಲನಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ, ಈ ನಿಟ್ಟಿನಲ್ಲಿ ನಮ್ಮ ಜಿಲ್ಲೆಯನ್ನು ಕುಷ್ಠಮುಕ್ತ ಜಿಲ್ಲೆಯನ್ನಾಗಿ ಮಾಡಲು ಸರ್ವಪ್ರಯತ್ನವನ್ನು ಮಾಡುತ್ತಿದ್ದೇವೆ ಎಂದು ಜಿಲ್ಲಾಧಿಕಾರಿ ಪಿ.ಎನ್. ರವೀಂದ್ರ ಹೇಳಿದ್ದಾರೆ.

ಕುಷ್ಠರೋಗವನ್ನು ಸುಲಭವಾಗಿ ಪತ್ತೆ ಹಚ್ಚಬಹುದು ಮತ್ತು ಗುಣಪಡಿಸಬಹುದಾಗಿದೆ, ಎಲ್ಲಾ ಕುಷ್ಠರೋಗ ಪ್ರಕರಣಗಳನ್ನು ಸಮೀಕ್ಷೆ ಮೂಲಕ ಪತ್ತೆ ಮಾಡುವ ಪ್ರಯತ್ನ ಮಾಡಲಾಗುತ್ತಿದೆ, ಜಿಲ್ಲೆಯಲ್ಲಿ ಲಭ್ಯವಿರುವ ಎಲ್ಲಾ ಸಂಪಸ್ಮೂಲಗಳನ್ನು ನಾವು ಬಳಸಿಕೊಳ್ಳುತ್ತೇವೆ, ಕುಷ್ಠರೋಗದಿಂದ ಬಳಲುತ್ತಿರುವ ವ್ಯಕ್ತಿಗಳು ಮತ್ತು ಅವರ ಕುಟುಂಬ ಸದಸ್ಯರೊಂದಿಗೆ ಯಾವುದೇ ರೀತಿಯ ತಾರತಮ್ಯ ಮಾಡಬಾರದು, ಕುಷ್ಠರೋಗ ಪೀಡಿತ ವ್ಯಕ್ತಿಗಳ ವಿರುದ್ಧ ಕಳಂಕ ಮತ್ತು ತಾರತಮ್ಯವನ್ನು ಕೊನೆಗೊಳಿಸಲು ಹಾಗೂ ಅವರನ್ನು ಮುಖ್ಯವಾಹಿನಿಗೆ ತರಲು ನಾವು ವೈಯಕ್ತಿಕವಾಗಿ ಮತ್ತು ಸಾಮೂಹಿಕವಾಗಿ ಕೆಲಸ ಮಾಡುತ್ತೇವೆ ಎಂದರು

"ಒಟ್ಟಾಗಿ, ನಾವು ಕುಷ್ಠರೋಗದ ಬಗ್ಗೆ ಜಾಗೃತಿ ಮೂಡಿಸೋಣ, ತಪ್ಪು ಕಲ್ಪನೆಗಳನ್ನು ಹೋಗಲಾಡಿಸೋಣ ಮತ್ತು ಕುಷ್ಠರೋಗದಿಂದ ಯಾರೂ ಬಾಧಿತರಾಗದಂತೆ ನೋಡಿಕೊಳ್ಳೋಣ" ಎಂದು ಪ್ರತಿಜ್ಞಾವಿಧಿಯನ್ನು ಈ ಸಂದರ್ಭದಲ್ಲಿ ಜಿಲ್ಲಾಧಿಕಾರಿ ಪಿ.ಎನ್. ರವೀಂದ್ರ ಬೋಧಿಸಿದರು.



# ದಲಿತ ಪ್ರಜಾ ಸೇನೆ ಪದಾಧಿಕಾರಿಗಳ ನೇಮಕ

**ಕೋಲಾರ:** ನಗರದಬುದ್ಧ ಪ್ರಾರ್ಥನಾ ಮಂದಿರದಲ್ಲಿ ದಲಿತ ಪ್ರಜಾ ಸೇನೆ ಡಿಪಿಎಸ್ ಸಂಘಟನೆ ನೂತನ ಪದಾಧಿಕಾರಿಗಳನ್ನು ಡಿಪಿಎಸ್ ಸಂಘಟನೆ ಸಂಸ್ಥಾಪಕ ಅಧ್ಯಕ್ಷ ಡಾಕ್ಟರ್ ಮುನಿರಾಜುರವರು ನೀಲಿ ಶಾಲು ಹಾಕಿ ಅಭಿನಂದಿಸಿದರು. ಈ ಸಂದರ್ಭದಲ್ಲಿ ಡಿಪಿಎಸ್ ಸಂಘಟನೆ ವಿಭಾಗಿಯ ಅಧ್ಯಕ್ಷರಾದ ಇರಗಸಂದ್ರ ಮುನಿರಾಜು ನೇತೃತ್ವದಲ್ಲಿ ನೂತನ ಪದಾಧಿಕಾರಿಗಳ ನೇಮಕ ಕಾರ್ಯಕ್ರಮವು ನಡೆಯಿತು

ಡಿಪಿಎಸ್ ಸಂಘಟನೆ ರಾಜ್ಯಾಧ್ಯಕ್ಷರನ್ನಾಗಿ ಸೂಲೂರು ಅಂಜಪ್ಪ ಗೌರವಾಧ್ಯಕ್ಷರಾಗಿ ನರಸಾಪುರ ನಾರಾಯಣಸ್ವಾಮಿ ಮಹಿಳಾ ಘಟಕ ಜಿಲ್ಲಾಧ್ಯಕ್ಷರಾಗಿ ಭಾಗ್ಯಮ್ಮ ಡಿಪಿಎಸ್ ಸಂಘಟನೆ ಉಪ ಜಿಲ್ಲಾ ಉಪಾಧ್ಯಕ್ಷರಾಗಿ ಕರಾಟೆ ರಾಮಚಂದ್ರ ಕಾನೂನು ಘಟಕದ ಅಧ್ಯಕ್ಷರಾಗಿ ರಮೇಶ್ ಮುಂತಾದವರನ್ನು ರಾಜ್ಯ ಜಿಲ್ಲಾ ಮತ್ತು ತಾಲೂಕು ಪದಾಧಿಕಾರಿಗಳನ್ನು ನೇಮಕ ಮಾಡಲಾಯಿತು.

ಡಾಕ್ಟರ್ ಮುನಿರಾಜು ರವರು ಮಾತನಾಡುತ್ತ ಎಲ್ಲಾ ಜಾತಿ ಬಡವರ ಸಂಕಷ್ಟಗಳಿಗೆ ಸ್ಪಂದಿಸಿ ಹೋರಾಟ ಮಾಡಬೇಕು ಅವರ ಕಷ್ಟಗಳಿಗೆ ಧ್ವನಿಯಾಗಬೇಕೆಂದು ನೂತನ ಪದಾಧಿಕಾರಿಗಳಿಗೆ ಕರೆ ನೀಡಿದರು

ಈ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಅರಹಳ್ಳಿ ಎಸ್‌ಎಫ್‌ಎಸ್ ಸೊಸೈಟಿ ಅಧ್ಯಕ್ಷ ಭಗವಾನ್ ಕಾಜಿ ಕಲ್ಲಹಳ್ಳಿ ನಾರಾಯಣಸ್ವಾಮಿ ಕೊಡಿ ರಾಮಸಂದ್ರ ನಾರಾಯಣಪ್ಪ ಖಾದ್ರಿಪುರ ಬಾಬು ಡಿಪಿಎಸ್ ನವಶಕ್ತಿ ಮುಂತಾದ ಪ್ರಮುಖರು ಹಾಜರಿದ್ದರು.



# ಚೆಸ್ಕಾಂ ಅಧಿಕಾರಿಗಳ ನಿರ್ಲಕ್ಷ್ಯ ನೆಲ ಕಚ್ಚುತ್ತಿರುವ ಫಸಲು

**ಚಾಮರಾಜನಗರ:** ಚೆಸ್ಕಾಂ ಅಧಿಕಾರಿಗಳ ನಿರ್ಲಕ್ಷ್ಯತನದಿಂದ ಜಮೀನುಗಳಿಗೆ ಸಕಾಲಕ್ಕೆ ವಿದ್ಯುತ್ ಹರಿಸದ ಹಿನ್ನಲೆಯಲ್ಲಿ ರೈತರು ಬೆಳೆದ ಫಸಲು ನೆಲ ಕಚ್ಚುತ್ತಿರುವ ಘಟನೆ ಚಾಮರಾಜನಗರ ತಾಲ್ಲೂಕಿನ ಹೆಗ್ಗೋತಾರ ಗ್ರಾಮದಲ್ಲಿ ನಡೆದಿದೆ.

ಚಾಮರಾಜನಗರ ತಾಲ್ಲೂಕಿನ ಹೆಗ್ಗೋತಾರ ಗ್ರಾಮದ ರೈತ ರಾಜಶೇಖರ್ ರವರಿಗೆ ಸೇರಿದ ಸರ್ವೆ ನಂ: 245 ರಲ್ಲಿನ 3.12 ಪ್ರದೇಶದಲ್ಲಿ ಕೃಷಿ ಮಾಡಿದ್ದು, ಅದರಲ್ಲಿ 2.20 ಎಕರೆಯಲ್ಲಿ ಬಾಳೆ ಹಾಕಿದ್ದರು. ಇನ್ನೇನು ಬಾಳೆ ಕಟಾವು ಮಾಡುವ ಹಂತದಲ್ಲಿರುವಾಗಲೇ ಚೆಸ್ಕಾಂ ಅಧಿಕಾರಿಗಳು ಕಳೆದ 20 ದಿನಗಳ ಹಿಂದೆ ವಿದ್ಯುತ್ ಸಂಪರ್ಕ ಕಡಿತಗೊಳಿಸಿದ್ದರು. ಇದರಿಂದಾಗಿ ರೈತ ರಾಜಶೇಖರ್ ರವರಿಗೆ ಸುಮಾರು ಒಂದು ಲಕ್ಷ ರೂ ನಷ್ಟ ಬೆಳೆ ನಷ್ಟವಾಗಿದೆ ಎಂದು ದೂರಿದ್ದಾರೆ.



ಇದೇ ಜನವರಿ 12 ರಂದು ಜಮೀನಿನ ಸಮೀಪ ಇದ್ದ ವಿದ್ಯುತ್ ಕಂಬದ ಬಳಿ ಜಾನುವಾರುವೊಂದು ವಿದ್ಯುತ್ ಸ್ಪರ್ಶದಿಂದ ಸಾವನ್ನಪ್ಪಿತ್ತು. ಅಂದು ವಿದ್ಯುತ್ ಸಂಪರ್ಕ ಕಡಿತ ಗೊಳಿಸಿದವರು ಇದೂವರೆಗೂ ವಿದ್ಯುತ್ ಸಂಪರ್ಕ ಕೊಟ್ಟಿಲ್ಲ ಎಂದು ರೈತ ರಾಜಶೇಖರ್ ಹೇಳುವರು.

ವಿದ್ಯುತ್ ಸಂಪರ್ಕ ಇಲ್ಲದೆ ಜಮೀನಿನಲ್ಲಿ ಬೆಳೆದ ಬೆಳೆಗೆ ನೀರು ಹಾಯಿಸಲು ಸಾಧ್ಯವಾಗುತ್ತಿಲ್ಲ ಎಂದು ಚೆಸ್ಕಾಂನ ಸಹಾಯಕ ಕಾರ್ಯಪಾಲಕ ಇಂಜನೀಯರ್ ರವರಿಗೆ ಮನವಿ ಮಾಡಿದರೂ ಯಾವುದೇ ಪ್ರಯೋಜನವಾಗಿಲ್ಲ ಎಂದಿರುವ ರೈತ ರಾಜಶೇಖರ್ ಚೆಸ್ಕಾಂ ಅಧಿಕಾರಿಗಳು ರೈತರ ಜಮೀನಿಗೆ ವಿದ್ಯುತ್ ಸಂಪರ್ಕ ಕೊಡದಿದ್ದಲ್ಲಿ ಹೋರಾಟ ನಡೆಸಬೇಕಾಗುತ್ತದೆ ಎಂದು ಎಚ್ಚರಿಸಿದ್ದಾರೆ.

# ಅಪ್ರಾಪ್ತರು ವಾಹನ ಚಲಾಯಿಸಿದರೆ ಪೋಷಕರ ಮೇಲೂ ಕ್ರಮ

ಚಿಕ್ಕಬಳ್ಳಾಪುರ: ಹದಿನೆಂಟು ವರ್ಷದ ಒಳಗಿನ ಯುವಕ, ಯುವತಿಯರು ವಾಹನ ಸವಾರಿ ಅಥವಾ ಚಲಾಯಿಸಿ ಅಪಘಾತ ಮಾಡಿದರೆ ಅಂತಹವರಿಗೆ ಶಾಶ್ವತವಾಗಿ ವಾಹನ ಚಲಾವಣೆಯ ಪರವಾನಗಿಯನ್ನು ನೀಡದಂತೆ ಕ್ರಮವಹಿಸಲು ಜಿಲ್ಲಾಧಿಕಾರಿ ಪಿ.ಎನ್. ರವೀಂದ್ರ ಅವರು ಪ್ರಾದೇಶಿಕ ಸಾರಿಗೆ ಅಧಿಕಾರಿಯವರಿಗೆ ಸೂಚನೆ ನೀಡಿದ್ದಾರೆ.

ಗುರುವಾರ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ನಡೆದ 'ರಸ್ತೆ ಸುರಕ್ಷತಾ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಹದಿನೆಂಟು ವರ್ಷದ ಒಳಗಿನವರು ಯಾವುದೇ ಕಾರಣಕ್ಕೂ ದ್ವಿಚಕ್ರ ವಾಹನಗಳನ್ನು ಸವಾರಿ ಮಾಡಬಾರದು ಹಾಗೂ ಲಘುವಾಹನಗಳನ್ನು ಚಲಾಯಿಸುವುದನ್ನೂ ಮಾಡಬಾರದು, ಒಂದು ವೇಳೆ ಈ ಸಂಚಾರಿ ನಿಯಮ ಉಲ್ಲಂಘಿಸಿದರೆ ಕಟ್ಟು ನಿಟ್ಟಿನ ಕಾನೂನು ಕ್ರಮವನ್ನು ಅಂತಹವರ ಮೇಲೆ ತೆಗೆದುಕೊಳ್ಳುವ ಜೊತೆಗೆ ಅವರ ಪೋಷಕರನ್ನು ಸಹ ಕಾನೂನು ಕ್ರಮಕ್ಕೆ ಒಳಪಡಿಸಬೇಕು, ಆ ನಿಟ್ಟಿನಲ್ಲಿ ಪೊಲೀಸ್ ಇಲಾಖೆ ಮತ್ತು ಸಾರಿಗೆ ಇಲಾಖೆ ಅಧಿಕಾರಿಗಳು ಪರಿಶೀಲಿಸಿ ದಂಡ ವಿಧಿಸಬೇಕು ಎಂದು ತಿಳಿಸಿದರು.

ಜೂನ್ 2024ರಿಂದ ಈ ವರೆಗೆ ಜಿಲ್ಲೆಯ ವ್ಯಾಪ್ತಿಯಲ್ಲಿ ವಾಹನ ಅಪಘಾತಗಳಿಂದ 430 ಜನರಿಗೆ ಸಣ್ಣಪುಟ್ಟ ಗಾಯಗಳಾಗಿವೆ ಮತ್ತು 161 ಸಾವು ನೋವುಗಳು ಸಂಭವಿಸಿವೆ, ಮುಖ್ಯವಾಗಿ ಚಿಕ್ಕಬಳ್ಳಾಪುರ ನಗರ, ಪೆರೇಸಂದ್ರ ಮತ್ತು ಚಿಂತಾಮಣಿ ನಗರ ಸಂಚಾರಿ ಠಾಣೆಗಳ ವ್ಯಾಪ್ತಿಯಲ್ಲಿ ಅಪಘಾತಗಳು ಹೆಚ್ಚಾಗಿ ಸಂಭವಿಸುತ್ತಿವೆ, ಈ ಠಾಣೆಗಳ ವ್ಯಾಪ್ತಿಯಲ್ಲಿ ಅಪಘಾತ ಸಂಭವಿಸಬಹುದಾದ ಬ್ಲಾಕ್‌ಸ್ಪಾಟ್‌ಗಳಲ್ಲಿ ಸೂಚನಾ ಫಲಕಗಳು ಸಮರ್ಪಕವಾಗಿ ನಿಯಮಾವಳಿಗಳ ರೀತಿ ಹಾಕಬೇಕು ಮತ್ತು ರಸ್ತೆ ಉಬ್ಬುಗಳನ್ನು (ಹಂಪ್ಸ್) ನಿರ್ಮಿಸಬೇಕು, ಅತಿವೇಗ ಚಾಲನೆ, ಚಾಲನೆಯಲ್ಲಿ ಮೊಬೈಲ್ ಬಳಕೆ, ಮದ್ಯ ಸೇವಿಸಿ ಚಾಲನೆ ಮಾಡುವುದು ಸೇರಿದಂತೆ ಇನ್ನಿತರ ಸಂಚಾರಿ ನಿಯಮಗಳನ್ನು ಉಲ್ಲಂಘಿಸುವ ಸವಾರರು ಮತ್ತು ಚಾಲಕರಿಂದ ದಂಡ ವಸೂಲಿ ಮಾಡಲು ಅಧಿಕಾರಿಗಳಿಗೆ ಸೂಚಿಸಿದರು.

ಜಿಲ್ಲೆಯ ವ್ಯಾಪ್ತಿಯ ರಾಷ್ಟ್ರೀಯ ಹೆದ್ದಾರಿಗಳಲ್ಲಿ 17 ಮತ್ತು ರಾಜ್ಯ ಹೆದ್ದಾರಿಗಳಲ್ಲಿ 11 ಬ್ಲಾಕ್‌ಸ್ಪಾಟ್‌ಗಳನ್ನು ಗುರುತಿಸಲಾಗಿದೆ, ಈ ಬ್ಲಾಕ್‌ಸ್ಪಾಟ್‌ಗಳಿಗೆ ಸಂಬಂಧ ಪಟ್ಟ ಅಧಿಕಾರಿಗಳು ಭೇಟಿ ನೀಡಿ ತಪಾಸಣೆ ಮಾಡಬೇಕು,



ಅಪಘಾತ ಸಂಭವಿಸಲು ಕಾರಣವಾಗಿರುವ ಮೂಲ ಭೂತ ಸೌಲಭ್ಯಗಳ ಕೊರತೆಯನ್ನು ನೀಗಿಸಲು ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕು, ಸೂಚನಾ ಫಲಕಗಳನ್ನು ಅಳವಡಿಸಬೇಕು, ಜೊತೆಗೆ ಸ್ಥಳೀಯವಾಗಿ ಅಪಘಾತಕ್ಕೆ ಒಳಗಾಗಿ ಸಾವುನೋವು ಆಗಿರುವವರ ವಿವರ ಪಡೆದು ಜಾಗೃತಿ ಮೂಡಿಸಬೇಕು, ಸಂಚಾರಿ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸುವ ಮೂಲಕ ತಮ್ಮ ಪ್ರಾಣವನ್ನು ಉಳಿಸಿಕೊಳ್ಳುವಂತೆ ಅರಿವು ಮೂಡಿಸಬೇಕು, ಕಳೆದ ಏಳು ತಿಂಗಳಲ್ಲಿ ಜಿಲ್ಲೆಯಲ್ಲಿ ಸಂಜೆ 6 ರಿಂದ 9 ಗಂಟೆಯವರೆಗೆ 118 ಅಪಘಾತಗಳು ಸಂಭವಿಸಿವೆ. ಈ ಅವಧಿಯಲ್ಲಿ ಸಾರಿಗೆ ಮತ್ತು ಪೊಲೀಸ್ ಇಲಾಖೆಯ ಅಧಿಕಾರಿಗಳು, ಸಿಬ್ಬಂದಿ ಹೆಚ್ಚಿನ ನಿಗಾ ವಹಿಸಿ ಕರ್ತವ್ಯ ನಿರ್ವಹಿಸಬೇಕು, ಸಂಚಾರಿ ನಿಯಮಗಳ ಪಾಲನೆ ಮತ್ತು ಸೂಚನೆ ನೀಡುವ ತಂತ್ರಾಂಶಗಳ ಅಳವಡಿಕೆಯ ವ್ಯವಸ್ಥೆಯನ್ನು ವಾಹನಗಳಲ್ಲಿ ಅಳವಡಿಸಲಾಗಿದೆಯೇ ಅಥವಾ ಇಲ್ಲವೆ ಎಂಬುದನ್ನು ಸಾರಿಗೆ ಇಲಾಖೆಯ ಅಧಿಕಾರಿಗಳು ಪರಿಶೀಲಿಸಬೇಕು. ಈ ಕಾರ್ಯಕ್ರಮವನ್ನು ಆಂದೋಲನ ರೂಪದಲ್ಲಿ ಕೈಗೊಳ್ಳಬೇಕು ಎಂದು ಜಿಲ್ಲಾಧಿಕಾರಿಗಳು ತಿಳಿಸಿದರು.

ಈ ಸಂದರ್ಭದಲ್ಲಿ ಸಂಚಾರಿ ನಿಯಮಗಳ ಕುರಿತು ಸಾರ್ವಜನಿಕರಿಗೆ ಅರಿವು ಮೂಡಿಸುವ ಕರಪತ್ರಗಳನ್ನು ಬಿಡುಗಡೆ ಮಾಡಿದರು. ಸಭೆಯಲ್ಲಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕುಶಲ್ ಚೌಕ್ಸೆ, ಲೋಕೋಪಯೋಗಿ ಇಲಾಖೆಯ ಕಾರ್ಯಪಾಲಕ ಅಭಿಯಂತರಾದ ಗಿರೀಶ್, ಪ್ರಾದೇಶಿಕ ಸಾರಿಗೆ ಅಧಿಕಾರಿ ವಿವೇಕಾನಂದ ರೈ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ. ಮಹೇಶ್ ಕುಮಾರ್, ಕೆ.ಎಸ್.ಆರ್.ಟಿ.ಸಿ ವಿಭಾಗೀಯ ನಿಯಂತ್ರಣಾಧಿಕಾರಿ ವಿ.ಬಸವರಾಜು, ಮನ್ಸೂರ್ ಅಲಿ,

ಜಿಲ್ಲಾ ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕಿ ಕೆ.ಮಾಧವಿ, ವಿವಿಧ ಇಲಾಖೆಗಳ ಅಧಿಕಾರಿಗಳು ಉಪಸ್ಥಿತರಿದ್ದರು.

# ಜೆಟ್–ಸೇನಾ ಹೆಲಿಕಾಪ್ಟರ್ ಅಪಘಾತ: ಯಾರೂ ಬದುಕುಳಿದಿಲ್ಲ–ಟ್ರಂಪ್

**ವಾಷಿಂಗ್ಟನ್:** ರೊನಾಲ್ಡ್ ರೀಗನ್ ರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಇಳಿಯಬೇಕಿದ್ದ ಪ್ಯಾಸೆಂಜರ್ ಜೆಟ್ ಮತ್ತು ಸೇನಾ ಹೆಲಿಕಾಪ್ಟರ್ ನಡುವೆ ಸಂಭವಿಸಿದ ಭೀಕರ ಅಪಘಾತದಲ್ಲಿ ಯಾರೂ ಬದುಕುಳಿದಿಲ್ಲ ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಸ್ಪಷ್ಟಪಡಿಸಿದ್ದಾರೆ.

ಪ್ಯಾಸೆಂಜರ್ ಜೆಟ್ ಮತ್ತು ಸೇನಾ ಹೆಲಿಕಾಪ್ಟರ್ ಡಿಕ್ಕಿ ಹೊಡೆದು ವಾಷಿಂಗ್ಟನ್ ಡಿಸಿಯ ವೈಟ್‌ಹೈಸ್ ಸಮೀಪದ ಪೊಟೊಮ್ಯಾಕ್ ನದಿಗೆ ಬಿದ್ದು ಮುಳುಗಿದವು. ರಾತ್ರಿಯಿಡೀ ಬೃಹತ್ ಶೋಧ ಮತ್ತು ರಕ್ಷಣಾ ಕಾರ್ಯಾಚರಣೆ ನಡೆದಿದೆ. ರಕ್ಷಣೆಗೆ ಎಲ್ಲ ಅವಕಾಶಗಳನ್ನು ಬಳಸಿಕೊಳ್ಳಲಾಗಿದೆ. ಘಟನೆಯಲ್ಲಿ ಯಾರೂ ಬದುಕುಳಿದಿಲ್ಲ ಎಂಬುದು ದುಃಖದ ಸಂಗತಿ ಎಂದು ಟ್ರಂಪ್ ಅವರು ಶ್ವೇತಭವನದಲ್ಲಿ ನಡೆಸಿದ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

"60 ಪ್ರಯಾಣಿಕರು ಮತ್ತು ನಾಲ್ವರು ಸಿಬ್ಬಂದಿಯನ್ನು ಹೊತ್ತೊಯ್ಯುತ್ತಿದ್ದ ಅಮೆರಿಕನ್ ಏರ್ಲೈನ್ಸ್‌ನ ಪ್ರಾದೇಶಿಕ ಜೆಟ್, ರೀಗನ್ ರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಲ್ಯಾಂಡ್ ಆಗಬೇಕಿತ್ತು. ಈ ಸಂದರ್ಭದಲ್ಲಿ ಮೂವರು ಮಿಲಿಟರಿ ಸದಸ್ಯರನ್ನು ಹೊತ್ತೊಯ್ಯುತ್ತಿದ್ದ ಸೇನಾ ಬ್ಲ್ಯಾಕ್‌ಹಾಕ್ ಹೆಲಿಕಾಪ್ಟರ್ ವಿಮಾನಕ್ಕೆ ಡಿಕ್ಕಿ ಹೊಡೆದಿದೆ. ವಿಮಾನ ಕಾನ್ಸಾಸ್‌ನ ವಿಚಿಟಾದಿಂದ ಬರುತ್ತಿತ್ತು" ಎಂದು ಅವರು ಮಾಹಿತಿ ನೀಡಿದರು.

ವಾಷಿಂಗ್ಟನ್ ಡಿಸಿ ಅಗ್ನಿಶಾಮಕ ದಳದ ಮುಖ್ಯಸ್ಥ ಜಾನ್ ಡೊನ್ನೆಲ್ಲಿ ಗುರುವಾರ ಬೆಳಿಗ್ಗೆ ಸುದ್ದಿಗಾರರೊಂದಿಗೆ ಮಾತನಾಡುತ್ತಾ, "ರಕ್ಷಣಾ ತಂಡಗಳು ಇಲ್ಲಿಯವರೆಗೆ ವಿಮಾನದಿಂದ 27 ಶವಗಳನ್ನು ಮತ್ತು ಹೆಲಿಕಾಪ್ಟರ್‌ನಿಂದ ಒಂದು ಶವವನ್ನು ಹೊರತೆಗೆದಿವೆ" ಎಂದು ತಿಳಿಸಿದ್ದಾರೆ. ರಷ್ಯಾ ಸೇರಿದಂತೆ ಇತರ ದೇಶಗಳ ಪ್ರಜೆಗಳಿಗೆ ಮಾಹಿತಿ ನೀಡಲಾಗುತ್ತಿದೆ ಎಂದು ಟ್ರಂಪ್ ಹೇಳಿದ್ದಾರೆ.

"ನಮ್ಮಲ್ಲಿ ರಷ್ಯಾದ ತುಕಡಿ ಇದೆ. ದುರದೃಷ್ಟವಶಾತ್, ಕೆಲವು ಪ್ರತಿಭಾನ್ವಿತರು ಆ ವಿಮಾನದಲ್ಲಿದ್ದರು. ಇದಕ್ಕಾಗಿ ಕ್ಷಮಿಸಿ" ಎಂದ ಟ್ರಂಪ್, ಈ ಶವಗಳನ್ನು ಅವರ ಹತ್ತಿರದ ಮತ್ತು ಆತ್ಮೀಯರಿಗೆ ವರ್ಗಾಯಿಸಲು ಅಮೆರಿಕ ರಷ್ಯಾದೊಂದಿಗೆ ಸಂಪರ್ಕದಲ್ಲಿದೆ. ಇನ್ನೂ ಕೆಲವು ಮಂದಿ ಇದ್ದು, ನಾವು ಅವರ ಬಗ್ಗೆ ಸದ್ಯದಲ್ಲೇ ಘೋಷಿಸಲಿದ್ದೇವೆ. ನಮಗೆ ಕೆಲವು ನಿರ್ದಿಷ್ಟ ಮಾಹಿತಿ ಇದೆ. ಪ್ರಯಾಣಿಕರಿಗೆ ಸಂಬಂಧಪಟ್ಟ ದೇಶಗಳಿಗೆ ಕರೆ ಮಾಡುತ್ತಿದ್ದೇವೆ. ನಾವು ಅವರಲ್ಲಿ ಹೆಚ್ಚಿನವರೊಂದಿಗೆ ಮಾತನಾಡಿದ್ದೇವೆ. ಜನರನ್ನು ಕಳೆದುಕೊಂಡ ದುಃಖದಲ್ಲಿ



ನಾವೆಲ್ಲ ಇದ್ದೇವೆ. ಇದಕ್ಕೆ ವಿಷಾದಿಸುತ್ತೇನೆ" ಎಂದಿದ್ದಾರೆ.

ಅಪಘಾತದಲ್ಲಿ ಸಾವನ್ನಪ್ಪಿದ ಯುವ ಫಿಗರ್ ಸ್ಕೇಟರ್‌ಗಳಾದ ಜಿನ್ನಾ ಹ್ಯಾನ್ ಮತ್ತು ಸ್ಪೆನ್ಸರ್ ಲೇನ್ ಯುವ ಫಿಗರ್ ಸ್ಕೇಟರ್‌ಗಳು ಸಾವು: ದುರಂತದಲ್ಲಿ ಮೃತಪಟ್ಟ ಪ್ರಯಾಣಿಕರಲ್ಲಿ ಕಾನ್ಸಾಸ್‌ನ ವಿಚಿಟಾದಲ್ಲಿ ನಡೆದ ಯುಎಸ್ ಫಿಗರ್ ಸ್ಕೇಟಿಂಗ್ ಚಾಂಪಿಯನ್‌ಶಿಪ್‌ನಿಂದ ಹಿಂತಿರುಗುತ್ತಿದ್ದ ಬೋಸ್ಟನ್‌ನ ಸ್ಕೇಟಿಂಗ್ ಕ್ಲಬ್‌ನ ಹಲವು ಸದಸ್ಯರಿದ್ದರು. ಮೃತರಲ್ಲಿ ಯುವ ಫಿಗರ್ ಸ್ಕೇಟರ್‌ಗಳಾದ ಜಿನ್ನಾ ಹ್ಯಾನ್ ಮತ್ತು ಸ್ಪೆನ್ಸರ್ ಲೇನ್, ಅವರ ತಾಯಂದಿರು ಮತ್ತು ರಷ್ಯಾ ಮೂಲದ ಫಿಗರ್ ಸ್ಕೇಟಿಂಗ್ ತರಬೇತುದಾರರಾದ ಎವ್ಗೆನಿಯಾ ಶಿಶ್ಕೋವಾ ಮತ್ತು ವಾಡಿಮ್ ನೌಮೊವ್ ಸೇರಿದ್ದಾರೆ.

ಹೆಲಿಕಾಪ್ಟರ್‌ನಲ್ಲಿತ್ತೇ ತಾಂತ್ರಿಕ ಸಮಸ್ಯೆ: ಈ ಅಪಘಾತಕ್ಕೆ ಕಾರಣವೇನೆಂದು ಸದ್ಯಕ್ಕೆ ನಮಗೆ ತಿಳಿದಿಲ್ಲ. ಆದರೆ ನಮಗೆ ಕೆಲವು ಬಲವಾದ ಅಭಿಪ್ರಾಯಗಳಿವೆ ಎಂದು ಟ್ರಂಪ್ ಹೇಳಿದ್ದಾರೆ.

**ಟ್ರಂಪ್ ವಾಗ್ದಾಳಿ:** "ನಾನು ಅಧಿಕಾರದಲ್ಲಿದ್ದಾಗ ಯೋಗ್ಯತೆ, ಅತ್ಯಂತ ಹೆಚ್ಚಿನ ಬುದ್ಧಿಮತ್ತೆ ಮತ್ತು ಮಾನಸಿಕವಾಗಿ ಬಲಿಷ್ಠರಾಗಿದ್ದವರಿಗೆ ಮಾತ್ರ ಏರ್ ಟ್ರಾಫಿಕ್ ಕಂಟ್ರೋಲರ್‌ಗಳಾಗಿ ಅರ್ಹತೆ ಪಡೆಯಲು ಅನುಮತಿಸುತ್ತಿದ್ದೆ. ಈ ಮೂಲಕ ಸುರಕ್ಷತೆಗೆ ಮೊದಲ ಆದ್ಯತೆ ನೀಡಿದೆ. ಆದರೆ ನಾನು ಅಧಿಕಾರದಿಂದ ಇಳಿದ ನಂತರ ಬೈಡನ್ ಅಧಿಕಾರ ವಹಿಸಿಕೊಂಡಾಗ, ಅದಕ್ಕೂ ಮೊದಲು ಒಬಾಮಾ ಅವರು ಡೆಮಾಕ್ರಟಿಕ್ ನೀತಿಗೆ ಪ್ರಾಧಾನ್ಯತೆ ನೀಡಿದರು. ಅವರ ರಾಜಕೀಯ ಇನ್ನೂ ಕೆಟ್ಟದಾಗಿತ್ತು" ಎಂದು ಟ್ರಂಪ್ ಟೀಕಿಸಿದರು.

## ವಿಮಾನ ಅಪಘಾತ: ಪ್ರಧಾನಿ ಮೋದಿ ಸಂತಾಪ

**ನವದೆಹಲಿ:** ವಾಷಿಂಗ್ಟನ್ ಡಿಸಿಯಲ್ಲಿ ಹಾರಾಟದ ವೇಳೆ ವಿಮಾನ ಮತ್ತು ಹೆಲಿಕಾಪ್ಟರ್ ನಡುವೆ ಸಂಭವಿಸಿದ ಅಪಘಾತದಲ್ಲಿ ಸಾವನ್ನಪ್ಪಿದವರಿಗೆ ಪ್ರಧಾನಿ ನರೇಂದ್ರ ಮೋದಿ ಸಂತಾಪ ವ್ಯಕ್ತಪಡಿಸಿದ್ದಾರೆ.



ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ಪೋಸ್ಟ್ ಮಾಡಿರುವ ಅವರು, ವಾಷಿಂಗ್ಟನ್ ಡಿಸಿಯಲ್ಲಿ ನಡೆದ ವಿಮಾನ ಅಪಘಾತದಲ್ಲಿ ಸಾವನ್ನಪ್ಪಿದ ಸುದ್ದಿ ದುಃಖ ತರಿಸಿತು. ಮೃತರ ಕುಟುಂಬಗಳಿಗೆ ನನ್ನ ಸಂತಾಪಗಳು. ಈ ಸಂಕಷ್ಟದ ಸಮಯದಲ್ಲಿ ನಾವು ಅಮೆರಿಕದ ಜನರೊಂದಿಗೆ ನಿಲ್ಲುತ್ತೇವೆ ಎಂದು ತಿಳಿಸಿದ್ದಾರೆ.

ವಿಮಾನದಲ್ಲಿ ಎಲ್ಲ 64 ಮಂದಿ ಸಾವು: ಬುಧವಾರ ರಾತ್ರಿ 9ರ ಸುಮಾರಿಗೆ ರೊನಾಲ್ಡ್ ರೀಗನ್ ವಾಷಿಂಗ್ಟನ್ ನ್ಯಾಷನಲ್ ಏರ್‌ಪೋರ್ಟ್ ಸಮೀಪ ಪ್ಯಾಸೆಂಜರ್ ವಿಮಾನ ಮತ್ತು ಸೇನಾ ಹೆಲಿಕಾಪ್ಟರ್ ನಡುವೆ ಡಿಕ್ಕಿ ಸಂಭವಿಸಿತ್ತು. ಪ್ಯಾಸೆಂಜರ್ ಜೆಟ್ ವಿಮಾನದಲ್ಲಿದ್ದ ಸಿಬ್ಬಂದಿ ಸೇರಿ ಎಲ್ಲ 64 ಮಂದಿ ಸಾವನ್ನಪ್ಪಿದ್ದಾರೆ ಎಂದು ಅಮೆರಿಕದ ಅಧಿಕಾರಿಗಳು ತಿಳಿಸಿದ್ದಾರೆ.

ಒಬಾಮಾ, ಬೈಡನ್ ಅವಧಿಯಲ್ಲಿ ವಾಯು ಸುರಕ್ಷತೆಯಲ್ಲಿ ರಾಜಿ–ಟ್ರಂಪ್ ವಾಗ್ದಾಳಿ: ಈ ಅಪಘಾತ ಬೆನ್ನಲ್ಲೇ ಮಾತನಾಡಿದ ಅಮೆರಿಕ ಅಧ್ಯಕ್ಷ ಟ್ರಂಪ್, ಡೆಮಾಕ್ರಟಿಕ್ ನೀತಿಯ ವಿರುದ್ಧ ಕಿಡಿಕಾರಿದ್ದಾರೆ. ಒಬಾಮಾ ಮತ್ತು ಬೈಡನ್ ಅವಧಿಯಲ್ಲಿ ವಾಯು ಸುರಕ್ಷತೆಯಲ್ಲಿ ರಾಜಿ ಮಾಡಲಾಗಿದೆ ಎಂದು ಆರೋಪಿಸಿದ್ದಾರೆ.

# ಹಿಂದುತ್ವದ ವರ್ಚಸ್ಸಿಗೆ ಧಕ್ಕೆ ತರಲು ಪಿತೂರಿ: ಆರೋಪ

**ನವದೆಹಲಿ:** ಮಹಾ ಕುಂಭಮೇಳ ದುರಂತವು ಹಿಂದುತ್ವದ ವರ್ಚಸ್ಸಿಗೆ ಧಕ್ಕೆ ತರುವ ಯೋಜಿತ ಮತ್ತು ಪ್ರಾಯೋಜಿತ ಪಿತೂರಿಯಾಗಿದೆ ಎಂದು ಬಾಗೇಶ್ವರ ಧಾಮ್ ಪ್ರಧಾನ ಅರ್ಚಕ ಧೀರೇಂದ್ರ ಶಾಸ್ತ್ರಿ ಶುಕ್ರವಾರ ಹೇಳಿದ್ದಾರೆ.

ಉತ್ತರ ಪ್ರದೇಶದ ಪ್ರಯಾಗ್‌ರಾಜ್‌ನಲ್ಲಿ ಮಾತನಾಡಿದ ಅವರು, ಈ ಘಟನೆ ದುರಂತಮಯ, ಹೃದಯ ವಿದ್ರಾವಕ ಮತ್ತು ಊಹಿಸಲಾಗದ್ದು ಎಂದರು.

30 ಜನರು ಸಾವನ್ನಪ್ಪಿ, 60ಕ್ಕೂ ಹೆಚ್ಚು ಜನರು ಗಾಯಗೊಂಡ ಕಾಲ್ತುಳಿತದ ಘಟನೆ ನಡೆಯಲು ಜನದಟ್ಟಣೆಯೂ ಒಂದು ಕಾರಣವಾಗಿದೆ ಎಂದ ಅವರು, ಇದರ ಹಿಂದೆ ಹಿಂದುತ್ವದ ಇಮೇಜ್?ಗೆ ಹಾನಿಯುಂಟು ಮಾಡುವ ದೊಡ್ಡ ಪಿತೂರಿಯೂ ಇದೆ ಎಂದು ದೂರಿದರು.

ಘಟನೆಗೆ ಧೀರೇಂದ್ರ ಶಾಸ್ತ್ರಿ ಕಾರಣ – ಆರೋಪ: ಪ್ರಯಾಗ್‌ರಾಜ್?ನಲ್ಲಿ ನಡೆದ ಕಾಲ್ತುಳಿತದ ಘಟನೆಗೆ ಬಾಬಾ ಬಾಗೇಶ್ವರ ಧೀರೇಂದ್ರ ಶಾಸ್ತ್ರಿಯೇ ಕಾರಣ ಎಂದು ಉತ್ತರ ಪ್ರದೇಶದ ನಾಗಿನಾ ಲೋಕಸಭಾ ಸಂಸದ ಮತ್ತು ಆಜಾದ್ ಸಮಾಜ ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಚಂದ್ರಶೇಖರ್



ಆಜಾದ್ ಆರೋಪಿಸಿದ್ದಾರೆ. ಧೀರೇಂದ್ರ ಶಾಸ್ತ್ರಿ ವಿರುದ್ಧ ಪ್ರಕರಣ ದಾಖಲಿಸಿ ಕ್ರಮ ಕೈಗೊಳ್ಳಬೇಕು ಎಂದು ಅವರು ಆಗ್ರಹಿಸಿದ್ದಾರೆ.

ಮೌನಿ ಅಮಾವಾಸ್ಯೆಯಂದು ಅಮೃತ ವರ್ಷ ಸಮಯದಲ್ಲಿ ಇಲ್ಲಿಗೆ ಬಾರದ ಭಕ್ತಾದಿಗಳು ದೇಶದ್ರೋಹಿಗಳು ಎಂದು ಬಾಗೇಶ್ವರ್ ಬಾಬಾ ಹೇಳಿದ್ದರು ಹಾಗೂ ಈ ಹೇಳಿಕೆಯ ನಂತರ ಅಲ್ಲಿಗೆ ಅಪಾರ ಸಂಖ್ಯೆಯ ಭಕ್ತಾದಿಗಳು ಹೋಗಿದ್ದರಿಂದಲೇ ಜನದಟ್ಟಣೆ ಉಂಟಾಯಿತು ಎಂದು ಪ್ರತಿಪಾದಿಸಿರುವ ಆಜಾದ್, ಈ ಘಟನೆಗೆ ಕಾರಣರಾದ ಧೀರೇಂದ್ರ ಶಾಸ್ತ್ರಿಯನ್ನು ಜೈಲಿಗಟ್ಟಬೇಕು ಎಂದು ಆಗ್ರಹಿಸಿದ್ದಾರೆ.

ಭಕ್ತರ ಸುರಕ್ಷತೆಗಾಗಿ ಕಠಿಣ ಕ್ರಮ ಜಾರಿ: ಮಹಾ ಕುಂಭಮೇಳದಲ್ಲಿ ಕಾಲ್ತುಳಿತದಲ್ಲಿ ಕನಿಷ್ಠ 30 ಜನರು ಸಾವನ್ನಪ್ಪಿದ ಒಂದು ದಿನದ ನಂತರ, ಉತ್ತರ ಪ್ರದೇಶ ಸರ್ಕಾರ ಗುರುವಾರ ಜನಸಂದಣಿ ನಿರ್ವಹಣೆ ಮತ್ತು ಭಕ್ತರ ಸುರಕ್ಷತೆಗಾಗಿ ಕಠಿಣ ಕ್ರಮಗಳನ್ನು ಜಾರಿಗೆ ತಂದಿದೆ. ಹೊಸ ನಿಯಮಗಳ ಪ್ರಕಾರ ವಾಹನ ಸಂಚಾರವನ್ನು ನಿರ್ಬಂಧಿಸಲಾಗಿದ್ದು, ವಿಐಪಿ ಪಾಸ್?ಗಳನ್ನು ರದ್ದುಗೊಳಿಸಲಾಗಿದೆ, ಭದ್ರತಾ ನಿಯೋಜನೆಯನ್ನು ಹೆಚ್ಚಿಸಲಾಗಿದೆ ಮತ್ತು ಮೇಳ ನಗರವನ್ನು ಸಂಪರ್ಕಿಸುವ ಪಾಂಟೂನ್ ಸೇತುವೆಗಳ ಮೇಲಿನ ಅನಗತ್ಯ ನಿರ್ಬಂಧಗಳನ್ನು ಕೊನೆಗೊಳಿಸಲಾಗಿದೆ.

ಬಸಂತ್ ಪಂಚಮಿಯಂದು ಮುಂದಿನ ಅಮೃತ ಸ್ನಾನ ಮುಗಿಯುವ ಒಂದು ದಿನದ ನಂತರದವರೆಗೆ ಅಂದರೆ ಫೆಬ್ರವರಿ 4 ರವರೆಗೆ ಮಹಾ ಕುಂಭ ಪ್ರದೇಶವು ವಾಹನ ರಹಿತ ವಲಯವಾಗಿರುತ್ತದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಈ ಮೊದಲು ಸೂಕ್ತ ಪಾಸ್ ಹೊಂದಿರುವ ವಾಹನಗಳಿಗೆ ಮಹಾ ಕುಂಭ ಸ್ಥಳದಲ್ಲಿ ಸ್ಥಾಪಿಸಲಾದ ವಿವಿಧ ಶಿಬಿರಗಳವರೆಗೆ ಪ್ರಯಾಣಿಸಲು ಅವಕಾಶವಿತ್ತು. ಆದರೆ ಈಗ ಫೆಬ್ರವರಿ 4 ರವರೆಗೆ ಪ್ರಯಾಗ್ ರಾಜ್?ನ ಹೊರಗಿನಿಂದ ಬರುವ ನಾಲ್ಕು ಚಕ್ರದ ವಾಹನಗಳು ಮತ್ತು ಬಸ್ಸುಗಳ ಪ್ರವೇಶವನ್ನು ಸರ್ಕಾರ ನಿಷೇಧಿಸಿದೆ ಎಂದು ಅವರು ಹೇಳಿದರು.

ಕಿರಿದಾದ ದ್ವಾರದಿಂದ ಸಮಸ್ಯೆ: ಸಂಗಮಕ್ಕೆ ಹೋಗುವ ದ್ವಾರ ತೀರಾ ಕಿರಿದಾಗಿದ್ದರಿಂದ ಹಾಗೂ ಯಾತ್ರಾರ್ಥಿಗಳ ಸಂಖ್ಯೆ ಹೆಚ್ಚಾಗಿದ್ದರಿಂದ ಕಾಲ್ತುಳಿತದ ಘಟನೆ ನಡೆಯಲು ಕಾರಣವಾಯಿತು ಎಂದು ಬುಧವಾರದ ದುರಂತಕ್ಕೆ ಸಾಕ್ಷಿಯಾದ ಜನ ತಿಳಿಸಿದ್ದಾರೆ.

"ಸುಮಾರು ಒಂದು ಗಂಟೆ ಕಾಲ ಆ ಜನಸಮೂಹದಲ್ಲಿ ನಿಂತವರ ಉಸಿರುಗಟ್ಟಲಾರಂಭಿಸಿದ್ದರಿಂದ ಇತರ ಮಾರ್ಗಗಳ ಬ್ಯಾರಿಕೇಡ್?ಗಳನ್ನು ತೆಗೆಯುವಂತೆ ಜನರು ಪೊಲೀಸರಿಗೆ ಹೇಳುತ್ತಿದ್ದರು. ನಮಗೆ ಉಸಿರಾಡಲು ಸಹ ಸಾಧ್ಯವಾಗಲಿಲ್ಲ" ಎಂದು ತನ್ನ ಆರು ಸದಸ್ಯರ ಕುಟುಂಬದೊಂದಿಗೆ ಗುಂಪಿನಲ್ಲಿದ್ದ ಜಗ್ವಂತಿ ದೇವಿ ಅವರನ್ನು ಉಲ್ಲೇಖಿಸಿ ಸುದ್ದಿ ಸಂಸ್ಥೆ ರಾಯಿಟರ್ಸ್ ವರದಿ ಮಾಡಿದೆ.

# ಕೊಚ್ಚಿ: ಅಕ್ರಮವಾಗಿ ತಂಗಿದ್ದ 27 ಬಾಂಗ್ಲಾದೇಶಿ ಪ್ರಜೆಗಳ ಬಂಧನ

**ಕೊಚ್ಚಿ:** ಕೇರಳದ ಕೊಚ್ಚಿಯಲ್ಲಿ ಅಕ್ರಮವಾಗಿ ವಾಸವಾಗಿದ್ದ 27 ಬಾಂಗ್ಲಾದೇಶಿ ಪ್ರಜೆಗಳನ್ನು ಬಂಧಿಸಲಾಗಿದೆ.

ಎರ್ನಾಕುಲಂ ಜಿಲ್ಲೆಯ ಉತ್ತರ ಪರವೂರ್ ಪ್ರದೇಶದಲ್ಲಿ ಎರ್ನಾಕುಲಂ ಗ್ರಾಮಾಂತರ ಪೊಲೀಸರು ಮತ್ತು ಭಯೋತ್ಪಾದನಾ ನಿಗ್ರಹ ದಳ ನಡೆಸಿದ ಜಂಟಿ ಕಾರ್ಯಾಚರಣೆಯಲ್ಲಿ ಅವರನ್ನು ಬಂಧಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಭಾರತದ ಒಳಗೆ ಅಕ್ರಮವಾಗಿ ನುಸಿಳಿದ ಬಂದ ಬಾಂಗ್ಲಾದೇಶಿ ಪ್ರಜೆಗಳು ನಾವು ಪಶ್ಚಿಮ ಬಂಗಾಳದವರೆಂದು ಹೇಳ?ಕೊಂಡು ವಲಸೆ ಕಾರ್ಮಿಕರ ಸೋಗಿನಲ್ಲಿ ವಿವಿಧ ಸ್ಥಳಗಳಲ್ಲಿ ಕೆಲಸ ಮಾಡುತ್ತಿದ್ದರು.

ಬಂಧಿತರನ್ನು ವಿಚಾರಣೆ ನಡೆಯುತ್ತಿದೆ ಎಂದು ಉನ್ನತ ಪೊಲೀಸ್ ಅಧಿಕಾರಿಯೊಬ್ಬರು



ತಿಳಿಸಿದ್ದಾರೆ.ಕಳೆದ ಎರಡು ವಾರಗಳ ಹಿಂದೆ 28 ವರ್ಷದ ತಸ್ಲಿಮಾ ಬೇಗಂ ಎಂಬಾಕೆಯನ್ನು ಬಂಧಿಸಿದ ನಂತರ ಎರ್ನಾಕುಲಂ ಗ್ರಾಮಾಂತರ ಜಿಲ್ಲಾ ಪೊಲೀಸ್ ಮುಖ್ಯಸ್ಥ ವೈಭವ್ ಸಕ್ಸೇನಾ ಅವರು ಪ್ರಾರಂಭಿಸಿದ ವಿಶೇಷ ಕಾರ್ಯಾಚರಣೆಯ ಆಪರೇಷನ್ ಕ್ಲೀನ್‌ನ ಭಾಗವಾಗಿ ಇವರನ್ನು ಪತ್ತೆ ಹಚ್ಚಿ ಬಂಧಿಸಲಾಗಿದೆ.

# ಬ್ರಿಕ್ಸ್ ರಾಷ್ಟ್ರಗಳಿಗೆ ಟ್ರಂಪ್ ವಾರ್ನಿಂಗ್

**ವಾಷಿಂಗ್ಟನ್:** ಅಂತರರಾಷ್ಟ್ರೀಯ ವ್ಯಾಪಾರದಲ್ಲಿ ಅಮೆರಿಕದ ಡಾಲರ್ ಅನ್ನು ಬದಲಿಸಲು ಪ್ರಯತ್ನಿಸಿದರೆ ಬ್ರಿಕ್ಸ್ ರಾಷ್ಟ್ರಗಳ ವಿರುದ್ಧ ಶೇಕಡಾ 100 ರಷ್ಟು ಸುಂಕವನ್ನು ವಿಧಿಸುವುದಾಗಿ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಮತ್ತೊಮ್ಮೆ ಎಚ್ಚರಿಸಿದ್ದಾರೆ.

ಬ್ರಿಕ್‌ಸ ಹತ್ತು ದೇಶಗಳ ಅಂತರ್ ಸರ್ಕಾರಿ ಸಂಸ್ಥೆಯಾಗಿದೆ ರಷ್ಯಾ, ಭಾರತ, ಚೀನಾ, ದಕ್ಷಿಣ ಆಫ್ರಿಕಾ, ಈಜಿಪ್ಟ, ಇಥಿಯೋಪಿಯಾ, ಇಂಡೋನೇಷಿಯಾ, ಇರಾನ್ ಮತ್ತು ಯುನೈಟೆಡ್ ಅರಬ್ ಎಮಿರೇಟ್ಸ್ ದೇಶಗಳನ್ನು ಒಳಗೊಂಡಿದೆ.

ಬ್ರಿಕ್‌ಸ ದೇಶಗಳು ಡಾಲರ್‌ನಿಂದ ದೂರ ಸರಿಯಲು ಪ್ರಯತ್ನಿಸುತ್ತಿವೆ, ಅಂತಹ ಪ್ರಯತ್ನ ಮುಂದುವರೆದರೆ ತಕ್ಕ ಪಾಠ ಕಲಿಸಬೇಕಾಗುತ್ತದೆ ಎಂದು ಟ್ರಂಪ್ ತಮ ಮಾಲೀಕತ್ವದ ಸಾಮಾಜಿಕ ಮಾಧ್ಯಮ ವೇದಿಕೆಯಾದ ಟ್ರೂತ್ ಸೋಶಿಯಲ್‌ನಲ್ಲಿ ಪೋಸ್ಟ್ ಮಾಡಿದ್ದಾರೆ.

ಅಂತರರಾಷ್ಟ್ರೀಯ ವ್ಯಾಪಾರದಲ್ಲಿ ಅಥವಾ ಬೇರೆಲ್ಲಿಯಾದರೂ ಬ್ರಿಕ್ಸ್ ಯುಎಸ್ ಡಾಲರ್ ಅನ್ನು ಬದಲಿಸುವ ಯಾವುದೇ ಅವಕಾಶವಿಲ್ಲ,



ಮತ್ತು ಯಾವುದೇ ದೇಶವು ಸುಂಕಗಳಿಗೆ ಹಲೋ ಹೇಳಬೇಕು ಮತ್ತು ಅಮೆರಿಕಕ್ಕೆ ವಿದಾಯ ಹೇಳಬೇಕು! ಎಂದು ಟ್ರಂಪ್ ಬೆದರಿಕೆ ಹಾಕಿದ್ದಾರೆ.

ತಮ ಸ್ವಂತ ಕರೆನ್ಸಿಯನ್ನು ತೇಲಿಸುವ ಯಾವುದೇ ಕ್ರಮದ ವಿರುದ್ಧ ಬ್ರಿಕ್ಸ್ ರಾಷ್ಟ್ರಗಳನ್ನು ಟ್ರಂಪ್ ಪದೇ ಪದೇ ಟೀಕಿಸುತ್ತಿದ್ದರೂ, ಇದು ಇದುವರೆಗಿನ ಅವರ ಪ್ರಬಲ ವಿರೋಧವಾಗಿದೆ. ಡಿಸೆಂಬರ್‌ನಲ್ಲೂ ಟ್ರಂಪ್ ಇಂತಹ ಕ್ರಮದ ವಿರುದ್ಧ ಬ್ರಿಕ್‌ಸ ರಾಷ್ಟ್ರಗಳಿಗೆ ಎಚ್ಚರಿಕೆ ನೀಡಿದ್ದರು.

# 3,200 ಕೋಟಿ ತೆರಿಗೆ ವಂಚನೆ ಇಬ್ಬರು ಮಾಸ್ಟರ್‌ಮೈಂಡ್ಸ್ ಸೆರೆ

**ಬೆಂಗಳೂರು:** ತೆರಿಗೆ ವಂಚನೆ ಮಾಹಿತಿ ಆಧರಿಸಿ ಬೆಂಗಳೂರು ಹಾಗೂ ಮುಂಬೈನ 30 ಕಡೆಗಳಲ್ಲಿ ದಾಳಿ ನಡೆಸಿರುವ ಕೇಂದ್ರದ ಜಿಎಸ್‌ಟಿ ಗುಪ್ತಚರ ನಿರ್ದೇಶನಾಲಯದ ಅಧಿಕಾರಿಗಳು 3,200 ಕೋಟಿ ರೂ. ವಂಚನೆ ಹಣ ಪತ್ತೆ ಹಚ್ಚಿದ್ದಾರೆ. ವಂಚನೆ ಕೃತ್ಯದಲ್ಲಿ ಭಾಗಿಯಾಗಿದ್ದ ಆರೋಪದಡಿ ಇಬ್ಬರನ್ನು ಬಂಧಿಸಲಾಗಿದ್ದು, ಮತ್ತೊಬ್ಬನಿಗೆ ಶೋಧ ನಡೆಯುತ್ತಿದೆ.

ಡಿಜಿಜಿಐ ಬೆಂಗಳೂರು ವಲಯದ ಹೆಚ್ಚುವರಿ ಪ್ರಧಾನ ನಿರ್ದೇಶಕಿ ಸುಚೇತಾ ಶ್ರೀಜೆಷಾ ನೇತೃತ್ವದಲ್ಲಿ ದಾಳಿ ನಡೆದಿದೆ. ಆರೋಪಿಗಳು ನಕಲಿ ಕಂಪೆನಿಗಳನ್ನು ಸೃಷ್ಟಿಸಿ ವಂಚನೆಯಲ್ಲಿ ತೊಡಗಿರುವುದು ಬಯಲಾಗಿದೆ. ನಕಲಿ ಹೂಡುವಳಿ ತೆರಿಗೆ ಜಮೆ (ಇನ್‌ಪುಟ್ ಟ್ಯಾಕ್ಸ್ ಕ್ರೆಡಿಟ್) ಮೂಲಕ 665 ಕೋಟಿ ರೂ. ಪಡೆದಿದ್ದಾರೆ. ನಕಲಿ ಇನ್‌ವಾಯ್ಸ್ ಸೃಷ್ಟಿಸಿ ಇಷ್ಟು ಮೊತ್ತದ ವಂಚನೆ ಎಸಗಿದ್ದಾರೆ ಎಂದು ಸುಚೇತಾ ತಿಳಿಸಿದ್ದಾರೆ.

ಕಂಪೆನಿಗಳು ಕಾರ್ಯನಿರ್ವಹಿಸುತ್ತಿದ್ದ ಸ್ಥಳಗಳಿಂದ ಅಧಿಕಾರಿಗಳು ನಕಲಿ ದಾಖಲೆಗಳನ್ನು ವಶಕ್ಕೆ ಪಡೆದಿದ್ದಾರೆ. ಅಲ್ಲದೆ, 15 ನಕಲಿ ಕಂಪೆನಿಗಳನ್ನೂ ಪತ್ತೆ ಮಾಡಿದ್ದಾರೆ. ಈ ಪೈಕಿ 9 ಕಂಪೆನಿಗಳು ಷೇರುಪೇಟೆಯಲ್ಲೂ ನೋಂದಣಿಯಾಗಿವೆ ಎಂಬ ಭಯಾನಕ ಬೆಳವಣಿಗೆಯನ್ನೂ ಬಯಲಿಗೆಳೆದಿದ್ದಾರೆ.

ಈ ನಕಲಿ ಕಂಪೆನಿಗಳ ಪ್ರವರ್ತಕರು, ತಮ್ಮ ಕಂಪೆನಿಗಳು ಹೆಚ್ಚು ವ್ಯವಹಾರಗಳನ್ನು ಮಾಡುತ್ತಿವೆ ಎಂಬುದನ್ನು ತೋರಿಸಲು ದೊಡ್ಡ ಪ್ರಮಾಣದಲ್ಲಿ ನಕಲಿ ಇನ್‌ವಾಯ್ಸ್‌ಗಳನ್ನು ಸೃಷ್ಟಿಸುತ್ತಿದ್ದರು. ಇದರೊಂದಿಗೆ ಈ ಕಂಪೆನಿಗಳ ಷೇರು ಬೆಲೆಗಳೂ ಹೆಚ್ಚಾಗುತ್ತಿದ್ದವು. ಷೇರುಗಳ ಬೆಲೆ ಹೆಚ್ಚಿದಂತೆ ಅವುಗಳನ್ನು ತಕ್ಷಣವೇ ಮಾರಾಟ ಮಾಡಿ, ಸಾಕಷ್ಟು ದುಡ್ಡು ಮಾಡಿ ಕಂಪೆನಿಗಳಿಂದಲೇ ಹೊರ ಬರುತ್ತಿದ್ದರು. ನಕಲಿ ಕಂಪೆನಿಗಳೆಂಬ ಅರಿವಿಲ್ಲದೆ ಇಂಥ ಕಂಪೆನಿಗಳ ಷೇರುಗಳಲ್ಲಿ ಹಣ ಹೂಡಿಕೆ ಮಾಡುವ ಜನ ಸಾಮಾನ್ಯರಿಗೆ ಈ ಮೂಲಕ ವಂಚನೆಯಾಗುತ್ತಿತ್ತು ಎಂಬ ವಿಚಾರ ಅಧಿಕಾರಿಗಳು ನಡೆಸಿದ ತನಿಖೆಯಲ್ಲಿ ಬಹಿರಂಗಗೊಂಡಿದೆ.

# ಪ್ರೋತ್ಸಾಹಧನ ನೀಡಲು ಒತ್ತಾಯ



**ಶಿಡ್ಲಘಟ್ಟ:** ರಾಜ್ಯ ಸರ್ಕಾರವು ಪ್ರತಿ ಲೀಟರ್ ಹಾಲಿಗೆ 5 ರೂ.ಗಳ ಪ್ರೋತ್ಸಾಹಧನ ನೀಡುತ್ತಿದ್ದು, ಅದನ್ನೂ ಸಕಾಲಕ್ಕೆ ನೀಡುತ್ತಿಲ್ಲ ಇವೆಲ್ಲಾ ಸಮಸ್ಯೆಗಳಿಂದ ಕೋಲಾರ, ಚಿಕ್ಕಬಳ್ಳಾಪುರ ಜಿಲ್ಲೆಗಳಲ್ಲಿ ಹಾಲು ಉತ್ಪಾದನೆ ತೀರಾ ಕುಸಿದಿದ್ದು, ಈ ಪರಿಸ್ಥಿತಿ ಮುಂದುವರಿಯಲು ಬಿಡಬಾರದು ಪ್ರತಿ ಲೀಟರ್‌ಗೆ 20 ರೂ. ಪ್ರೋತ್ಸಾಹಧನ ಅಥವಾ ಲೀಟರ್ ಹಾಲಿಗೆ 50 ರೂ.ಗಳನ್ನು ನೀಡಬೇಕೆಂದು ಸರಕಾರವನ್ನು ಶಾಸಕರಾದ ಬಿ.ಎನ್. ರವಿಕುಮಾರ್ ಒತ್ತಾಯಿಸಿದರು.

ತಾಲ್ಲೂಕಿನ ಮೇಲೂರು ಗ್ರಾಮದ ತಮ್ಮ ಗೃಹ ಕಚೇರಿಯಲ್ಲಿ ತಿಪ್ಪೇನಹಳ್ಳಿ ಹಾಲು ಉತ್ಪಾದಕರ ಸಹಕಾರ ಸಂಘದ ನೂತನ ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ನಿರ್ದೇಶಕರನ್ನು ಸನ್ಮಾನಿಸಿ, ಅಭಿನಂದಿಸಿ ಅವರು ಮಾತನಾಡಿದರು.

ಹಾಲು ಉತ್ಪಾದಕರಾದ ರೈತರಿಗೆ ಪ್ರತಿ ಲೀಟರ್ ಹಾಲಿಗೆ 20 ರೂ.ಗಳ ಪ್ರೋತ್ಸಾಹಧನ ನೀಡಬೇಕು, ಇಲ್ಲವಾದಲ್ಲಿ ಹೈನುಗಾರಿಕೆ ಕಷ್ಟವಾಗಲಿದ್ದು ತೀವ್ರ ಸಂಕಷ್ಟಕ್ಕೆ ಉತ್ಪಾದಕರು ಸಿಲುಕುತ್ತಾರೆ ಎಂದು ಹೇಳಿದರು.

ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗಳಲ್ಲಿ ಹೈನುಗಾರಿಕೆಯು ಪ್ರಧಾನ ಕಸುಬಾಗಿದ್ದು ಲಕ್ಷಾಂತರ ಕುಟುಂಬಗಳು ಹೈನುಗಾರಿಕೆಯಿಂದ ಬದುಕು ಕಟ್ಟಿಕೊಂಡಿವೆ ಆದರೆ ಇತ್ತೀಚಿನ ದಿನಗಳಲ್ಲಿ ಹೈನುಗಾರಿಕೆ ನಷ್ಟದಾಯಕವಾಗುತ್ತಿದ್ದು, ಅನೇಕ ಕುಟುಂಬಗಳು ಹೈನುಗಾರಿಕೆಯಿಂದ ವಿಮುಖವಾಗುತ್ತಿವೆ ಎಂದು ಆತಂಕ ವ್ಯಕ್ತಪಡಿಸಿದರು.

ಈ ವೇಳೆ ತಿಪ್ಪೇನಹಳ್ಳಿ ಡೇರಿ ನೂತನ ಅಧ್ಯಕ್ಷ ಜೆಡಿಎಸ್ ಬೆಂಬಲಿತ ಟಿ.ಎಲ್.ಅಂಬರೀಷ್, ಉಪಾಧ್ಯಕ್ಷೆ ಶಕುಂತಲಮ್ಮ, ನಿರ್ದೇಶಕರಾದ ವೆಂಕಟೇಶಪ್ಪ, ಆಂಜಿನಪ್ಪ, ರಾಮಚಂದ್ರ, ನಾಗರಾಜ್, ರಮೇಶ್, ಕೃಷ್ಣಪ್ಪ ಅವರನ್ನು ಅಭಿನಂದಿಸಲಾಯಿತು.

ಈ ಸಂದರ್ಭದಲ್ಲಿ ಕೋಚಿಮುಲ್ ಮಾಜಿ ನಿರ್ದೇಶಕರಾದ ಬಂಕ್ ಮುನಿಯಪ್ಪ, ಕೃಷಿ ಪಂಡಿತ ಪ್ರಶಸ್ತಿ ವಿಜೇತ ಹುಜಗೂರು ರಾಮಣ್ಣ, ಲಕ್ಷ್ಮೀನಾರಾಯಣಪ್ಪ, ಎಂ.ನಂಜಪ್ಪ,ರಾಜಣ್ಣ, ವಿಜಯ್ ಕುಮಾರ್ ಇನ್ನೀತರರು ಹಾಜರಿದ್ದರು.

# ಬಜೆಟ್ 2025 ಆರ್ಥಿಕ ಸಮೀಕ್ಷೆ: 6.3–6.8% ಬೆಳವಣಿಗೆ

**ನವದೆಹಲಿ:** ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಬಜೆಟ್ ಅಧಿವೇಶನದ ಆರಂಭದಲ್ಲಿ ಸಂಸತ್ತಿನಲ್ಲಿ ಆರ್ಥಿಕ ಸಮೀಕ್ಷೆ 2025 ಅನ್ನು ಮಂಡಿಸಿದರು. ಆರ್ಥಿಕ ಸಮೀಕ್ಷೆಯು ಭಾರತೀಯ ಆರ್ಥಿಕತೆಯು 6.3–6.8% ರಷ್ಟು ಬೆಳವಣಿಗೆಯಾಗಲಿದೆ ಎಂದು ಯೋಜಿಸಿದೆ. ಮೋದಿ 3.0 ಸರ್ಕಾರದ ಬಜೆಟ್ 2025 ಅನ್ನು ಫೆಬ್ರವರಿ 1 ರಂದು ಮಂಡಿಸಲಾಗುತ್ತದೆ. ಕೇಂದ್ರ ಬಜೆಟ್ ಭಾಷಣಕ್ಕೆ ಮುಂಚಿತವಾಗಿ, ಆರ್ಥಿಕ ಸಮೀಕ್ಷೆಯನ್ನು ಸಂಸತ್ತಿನಲ್ಲಿ ಮಂಡಿಸಲಾಗಿದೆ.

ಆರ್ಥಿಕ ಸಮೀಕ್ಷೆ 2024–25 ಆರ್ಥಿಕತೆಯ ಪ್ರಸ್ತುತ ಕಾರ್ಯಕ್ಷಮತೆಯ ಅಧಿಕೃತ ಮೌಲ್ಯಮಾಪನವನ್ನು ಒದಗಿಸುತ್ತದೆ ಮತ್ತು ರಾಷ್ಟ್ರೀಯ ಸವಾಲುಗಳನ್ನು ಎತ್ತಿ ತೋರಿಸುತ್ತದೆ. ಮುಖ್ಯ ಆರ್ಥಿಕ ಸಲಹೆಗಾರ ವಿ ಅನಂತ ನಾಗೇಶ್ವರನ್ ನೇತೃತ್ವದ ತಂಡವು ಆರ್ಥಿಕ ಸಮೀಕ್ಷೆಯನ್ನು ಸಿದ್ಧಪಡಿಸಿದೆ. ಇದು ಸುಧಾರಣಾ ತಂತ್ರಗಳು ಮತ್ತು ಬೆಳವಣಿಗೆಯ ನಿರೀಕ್ಷೆಗಳನ್ನು ವಿವರಿಸುತ್ತದೆ. ಇದು ವಿವಿಧ ಆರ್ಥಿಕ ವಲಯಗಳ ಸಮಗ್ರ ವಿಶ್ಲೇಷಣೆಯನ್ನು ಪ್ರಸ್ತುತಪಡಿಸುತ್ತದೆ ಮತ್ತು ಮುಂಬರುವ ಆರ್ಥಿಕ ವರ್ಷಕ್ಕೆ ಮುನ್ಸೂಚನೆಗಳನ್ನು ಒದಗಿಸುತ್ತದೆ.

ಸಚಿವೆ ಸೀತಾರಾಮನ್ ಅವರ ಬಜೆಟ್ ಭಾಷಣವು ಬಹು ತ್ರೈಮಾಸಿಕ ಕನಿಷ್ಠ ಮಟ್ಟಕ್ಕೆ ಕುಸಿದಿರುವ ಜಿಡಿಪಿ ಬೆಳವಣಿಗೆಯನ್ನು ಉತ್ತೇಜಿಸುವತ್ತ ಗಮನ ಹರಿಸುವ ಸಾಧ್ಯತೆಯಿದೆ. ಭಾರತವು ಇನ್ನೂ ವಿಶ್ವದ ಅತ್ಯಂತ ವೇಗವಾಗಿ ಬೆಳೆಯುತ್ತಿರುವ ಪ್ರಮುಖ ಆರ್ಥಿಕತೆಯಾಗಿದೆ.

# ವಿದೇಶಿ ಹಸ್ತಕ್ಷೇಪವಿಲ್ಲದೆ ಮೊದಲ ಅಧಿವೇಶನ ನಡೆಯುತ್ತಿದೆ, ರಾಹುಲ್‌ಗೆ ಮೋದಿ ಟಾಂಗ್

ಹತ್ತು ವರ್ಷಗಳಲ್ಲಿ ವಿದೇಶಿ ಹಸ್ತಕ್ಷೇಪವಿಲ್ಲದೆ ನಡೆಯುತ್ತಿರುವ ಮೊದಲ ಅಧಿವೇಶನವಿದು ಎಂದು ಪ್ರಧಾನಿ ನರೇಂದ್ರ ಮೋದಿ ವಿಪಕ್ಷ ನಾಯಕ ರಾಹುಲ್ ಗಾಂಧಿಗೆ ಟಾಂಗ್ ಕೊಟ್ಟಿದ್ದಾರೆ. 2014 ರಿಂದ, ಇದು ಮೊದಲ ಸಂಸತ್ ಅಧಿವೇಶನವಾಗಿದ್ದು, ನಮ್ಮ ವ್ಯವಹಾರಗಳಲ್ಲಿ ಯಾವುದೇ ವಿದೇಶಿ ಹಸ್ತಕ್ಷೇಪ ಕಂಡುಬಂದಿಲ್ಲ, ಇದರಲ್ಲಿ ಯಾವುದೇ ವಿದೇಶಿ ಶಕ್ತಿಗಳಿಲ್ಲ. ಪ್ರತಿ ಬಜೆಟ್ ಅಧಿವೇಶನಕ್ಕೂ ಮುನ್ನ ನಾನು ಇದನ್ನು ಗಮನಿಸಿದ್ದೇನೆ ಎಂದು ಪ್ರಧಾನಿ ಮೋದಿ ಹೇಳಿದರು.

2014ರಿಂದಲೂ ಯಾವುದಾದರೂ ಒಂದು ವಿಚಾರವನ್ನಿಟ್ಟುಕೊಂಡು ತೊಂದರೆ ಸೃಷ್ಟಿಸಲು ಕೆಲವರು ಸಿದ್ಧರಿರುತ್ತಿದ್ದರು. ಆದರೆ 10 ವರ್ಷಗಳ ಬಳಿಕ ಯಾವುದೇ ವಿದೇಶಿ ಹಸ್ತಕ್ಷೇಪವಿಲ್ಲದೆ ಅಧಿವೇಶನ ನಡೆಯುತ್ತಿದೆ. 2047 ರಲ್ಲಿ ಅಭಿವೃದ್ಧಿ ಹೊಂದಿದ ಭಾರತದ ಸಂಕಲ್ಪವನ್ನು ಈಡೇರಿಸುತ್ತದೆ ಎಂದು ನಾನು ವಿಶ್ವಾಸದಿಂದ ಹೇಳಬಲ್ಲೆ ಎಂದು ಪ್ರಧಾನಿ ಮೋದಿ ಹೇಳಿದ್ದಾರೆ.

ದೇಶವಾಸಿಗಳು ಒಟ್ಟಾಗಿ ನಾವು ಈ ನಿರ್ಣಯವನ್ನು ಪ್ರಯತ್ನದಿಂದ ಈಡೇರಿಸುತ್ತೇವೆ. ಮೂರನೇ ಅವಧಿಯಲ್ಲಿ, ನಾವು ದೇಶದ ಸರ್ವತೋಮುಖ ಅಭಿವೃದ್ಧಿಯತ್ತ ಮಿಷನ್ ಮೋಡ್‌ನಲ್ಲಿ ಮುನ್ನಡೆಯುತ್ತಿದ್ದೇವೆ. ನಾವೀನ್ಯತೆ, ಸೇರ್ಪಡೆ ಮತ್ತು ಹೂಡಿಕೆ ಇದು ನಮ್ಮ ಆರ್ಥಿಕ ಚಟುವಟಿಕೆಯ ಮಾರ್ಗಸೂಚಿಯ ಆಧಾರವಾಗಿದೆ.



ಜಾರ್ಜ್ ಸೊರೊಸ್ ಈ ಹಿಂದೆ ಚಳಿಗಾಲದ ಅಧಿವೇಶನದ ಸಮಯದಲ್ಲಿ ಬಿಲಿಯನೇರ್ ಜಾರ್ಜ್ ಸೊರೊಸ್ ಮತ್ತು ಅವರ ಎನ್?ಜಿಒ ದಿ ಓಪನ್ ಸೊಸೈಟಿ ಫೌಂಡೇಷನ್?ನೊಂದಿಗಿನ ಕಾಂಗ್ರೆಸ್ ನಾಯಕಿ ಸೋನಿಯಾಗಾಂಧಿ ಸಂಬಂಧದ ಕುರಿತು ವಿಷಯವನ್ನು ಬಿಜೆಪಿ ಪ್ರಸ್ತಾಪಿಸಿತ್ತು. ಈ ವಿಷಯವು ಡಿಸೆಂಬರ್ 8 ಹಾಗೂ ನಂತರದ ದಿನಗಳಲ್ಲಿ ಸಂಸತ್ತಿನಲ್ಲಿ ಪ್ರಾಬಲ್ಯ ಸಾಧಿಸಿತ್ತು. ಸೋನಿಯಾ ಗಾಂಧಿ ಅವರು ಜಾರ್ಜ್ ಸೊರೊಸ್ ಅವರ ಪ್ರತಿಷ್ಠಾನದಿಂದ ನಿಧಿಯನ್ನು ಹೊಂದಿರುವ ಸಂಸ್ಥೆಯೊಂದಿಗೆ ಸಂಬಂಧ ಹೊಂದಿದ್ದಾರೆ ಎಂದು ಬಿಜೆಪಿ ಆರೋಪಿಸಿದೆ. ಈ ಆರೋಪಗಳನ್ನು ಕಾಂಗ್ರೆಸ್ ನಿರಾಕರಿಸಿತ್ತು.

ಹಿಂಡನ್‌ಬರ್ಗ್ ರಿಪೋರ್ಟ್‌ಅದಾನಿ ಸಮೂಹವು ಷೇರುಗಳ ಅಕ್ರಮದಲ್ಲಿ ತೊಡಗಿಕೊಂಡಿರುವುದಲ್ಲದೆ ದಶಕಗಳಿಂದ ಲೆಕ್ಕಪತ್ರ ವಂಚನೆ ಎಸಗಿದೆ ಎಂದು ಹಿಂಡನ್‌ಬರ್ಗ್ ರಿಸರ್ಚ್ ವರದಿ ಆರೋಪಿಸಿತ್ತು. ಗೌತಮ್ ಅದಾನಿ 120 ಶತಕೋಟಿ ಡಾಲರ್ ಸಂಪತ್ತನ್ನು ಹೊಂದಿದ್ದು, ಕಳೆದ ಮೂರು ವರ್ಷಗಳಲ್ಲಿ ಸುಮಾರು 100 ಶತಕೋಟಿ ಡಾಲರ್‌ನಷ್ಟು ಸಂಪತ್ತು ಹೆಚ್ಚಿಸಿಕೊಂಡಿದ್ದರು. ಅವರ ಒಡೆತನದ ವಿವಿಧ ಕಂಪನಿಗಳ ಷೇರುಗಳ ದರ ಸರಾಸರಿ ಶೇ 819ರಷ್ಟು ಹೆಚ್ಚಾಗಿತ್ತು. ಅದಾನಿ ಸಮೂಹದ ಮಾಜಿ ಹಿರಿಯ ಅಧಿಕಾರಿಗಳು ಸೇರಿದಂತೆ ಅನೇಕರನ್ನು ಸಂದರ್ಶನ ನಡೆಸಿದ್ದ ಕಂಪನಿ ಸಾವಿರಾರು ದಾಖಲೆಗಳನ್ನು ಪರಿಶೀಲಿಸಿ, ವಿವಿಧ ರಾಷ್ಟ್ರಗಳ ವೆಬ್‌ಸೈಟ್‌ಗಳನ್ನೂ ಪರಿಶೀಲಿಸಿ ವರದಿ ಸಿದ್ಧಪಡಿಸಲಾಗಿದೆ ಎಂದು ಹಿಂಡನ್‌ಬರ್ಗ್ ರಿಸರ್ಚ್ ಹೇಳಿತ್ತು. ಈ ವಿಚಾರ ಸದನದಲ್ಲಿ ಚರ್ಚೆಗೆ ಗ್ರಾಸವಾಗಿತ್ತು.

ಹಿಂಡನ್‌ಬರ್ಗ್ ವರದಿ ಬೆನ್ನಲ್ಲೇ ಷೇರು ಮಾರುಕಟ್ಟೆಯಲ್ಲಿ ಅದಾನಿ ಸಮೂಹದ ಅಂಗ ಸಂಸ್ಥೆಗಳ ಷೇರು ಮೌಲ್ಯದಲ್ಲಿ ಭಾರೀ ಕುಸಿತವಾಗಿತ್ತು. ಅದಾನಿ ಟೋಟಲ್ ಗ್ಯಾಸ್, ಅದಾನಿ ಎಂಟರ್‌ಪ್ರೈಸಸ್, ಅದಾನಿ ಟ್ರಾನ್ಸ್?ಮಿಷನ್, ಅದಾನಿ ಗ್ರೀನ್ ಎನರ್ಜಿ, ಅದಾನಿ ಪೋರ್ಟ್ಸ್ ಆಯಂಡ್ ಸ್ಪೆಷಲ್ ಎಕನಾಮಿಕ್ ಝೋನ್, ಅದಾನಿ ಪವರ್, ಅದಾನಿ ವಿಲ್ಮರ್ ಷೇರುಗಳು ಶೇ 1ರಿಂದ 4ರಷ್ಟು ಕೆಳಮಟ್ಟದಲ್ಲಿ ವಹಿವಾಟು ನಡೆಸಿದ್ದವು. ಪರಿಣಾಮವಾಗಿ ಅದಾನಿ ಸಮೂಹ ಬುಧವಾರ ಒಂದೇ ದಿನದ ವಹಿವಾಟಿನಲ್ಲಿ 46,086 ಕೋಟಿ ರೂ. ಕಳೆದುಕೊಂಡಿತ್ತು.

ಪೆಗಾಸಸ್ 2017ರಲ್ಲಿ ಇಸ್ರೇಲ್ ಜೊತೆ ಮಾಡಿಕೊಂಡ ರಕ್ಷಣಾ ಒಪ್ಪಂದದ ಭಾಗವಾಗಿ ಭಾರತವು ಪೆಗಾಸಸ್ ತಂತ್ರಾಂಶ ಖರೀದಿಸಿದೆ ಎಂದು 'ನ್ಯೂಯಾರ್ಕ್ ಟೈಮ್ಸ್' ವರದಿಪ್ರಕಟಿಸಿತ್ತು. ಅದಾದ ಬಳಿಕ ಪೆಗಾಸಸ್ ವಿವಾದ ಮತ್ತೆ ಮುನ್ನೆಲೆಗೆ ಬಂದಿತ್ತು.

## ಟೀಂ ಇಂಡಿಯಾಗೆ
# ಬಿಗ್ ರಿಲೀಫ್

ಪ್ರಸ್ತುತ ಇಂಗ್ಲೆಂಡ್ ವಿರುದ್ಧ ಟಿ20 ಸರಣಿಯನ್ನು ಆಡುತ್ತಿರುವ ಟೀಂ ಇಂಡಿಯಾಕ್ಕೆ ಮೂರನೇ ಪಂದ್ಯದ ಸೋಲಿನ ಆಘಾತ ಒಂದೆಡೆಯಾದರೆ, ಮತ್ತೊಂದೆಡೆ ಸ್ಟಾರ್ ಆಟಗಾರರ ಇಂಜುರಿ ಸಮಸ್ಯೆ ಮತ್ತೊಂದು ಹಿನ್ನಡೆಯಾಗಿತ್ತು. ಜಸ್ಪ್ರೀತ್ ಬುಮ್ರಾರಿಂದ ಹಿಡಿದು ನಿತೀಶ್ ಕುಮಾರ್ ರೆಡ್ಡಿವರೆಗೆ ಹಲವು



ಆಟಗಾರರು ಗಾಯದ ಸಮಸ್ಯೆಯಿಂದ ತಂಡದಿಂದ ಹೊರಗುಳಿದಿದ್ದಾರೆ.

ಆದರೆ ಇದೀಗ ಭಾರತ ತಂಡದ ಸ್ಟಾರ್ ಆಟಗಾರ ರೊಬ್ಬರು ಫಿಟ್ ಆಗಿದ್ದು, ನಾಲ್ಕನೇ ಟಿ20 ಪಂದ್ಯದಲ್ಲಿ ಆಡಲು ಸಜ್ಜಾಗಿರುವುದರಿಂದ ತಂಡಕ್ಕೆ ಕೊಂಚ ರಿಲೀಫ್ ನೀಡಿದೆ. ಈ ಆಟಗಾರ ಮತ್ಯಾರು ಅಲ್ಲ ಗೇಮ್ ಫಿನಿಶರ್ ಖ್ಯಾತಿಯ ರಿಂಕು ಸಿಂಗ್. ಸರಣಿಯ ಮಧ್ಯದಲ್ಲಿ ಗಾಯಕ್ಕೆ ತುತ್ತಾಗಿದ್ದ ರಿಂಕು ಇದೀಗ ಸಂಪೂರ್ಣ ಫಿಟ್ ಆಗಿದ್ದು ಆಡಲು ಸಿದ್ಧರಾಗಿದ್ದಾರೆ ಎಂದು ತಂಡದ ಸಹಾಯಕ ಕೋಚ್ ರಿಯಾನ್ ತೆಂಡಾಶ್ಕೇಟ್ ಹೇಳಿದ್ದಾರೆ. ಭಾರತ ಮತ್ತು ಇಂಗ್ಲೆಂಡ್ ನಡುವಿನ 5 ಪಂದ್ಯಗಳ ಟಿ20 ಸರಣಿಯ ನಾಲ್ಕನೇ ಪಂದ್ಯ ಶುಕ್ರವಾರ, ಜನವರಿ 31 ರಂದು ಪುಣೆಯಲ್ಲಿ ನಡೆಯಲಿದೆ. ಈ ಪಂದ್ಯಕ್ಕೂ ಮುನ್ನ ಟೀಂ ಇಂಡಿಯಾ ಸತತ 2 ದಿನ ಅಭ್ಯಾಸ ನಡೆಸಿತ್ತು. ಪಂದ್ಯದ ಒಂದು ದಿನದ ಮೊದಲು ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಕೋಚ್ ರಯಾನ್, ರಿಂಕು ಸಿಂಗ್ ಬ್ಯಾಟಿಂಗ್ ಅಭ್ಯಾಸ ಮಾಡಿದ್ದು ಸಂಪೂರ್ಣವಾಗಿ ಫಿಟ್ ಆಗಿದ್ದಾರೆ. ಹೀಗಾಗಿ ಅವರು ಸರಣಿಯ ಮೂರನೇ ಪಂದ್ಯಕ್ಕೆ ಲಭ್ಯವಾಗಲಿದ್ದಾರೆ ಎಂದು ಹೇಳಿದ್ದಾರೆ. ಸರಣಿಯ ಮೊದಲ ಪಂದ್ಯವನ್ನು ಆಡಿದ್ದ ರಿಂಕು ಎರಡನೇ ಪಂದ್ಯಕ್ಕೂ ಮುನ್ನ ಇಂಜುರಿಗೆ ತುತ್ತಾಗಿದ್ದರು. ಇದರಿಂದಾಗಿ ಅವರು ಎರಡನೇ ಮತ್ತು ಮೂರನೇ ಪಂದ್ಯಗಳಿಂದ ಹೊರಗುಳಿದಿದ್ದರು. ಇದೀಗ ಮುಂದಿನ ಪಂದ್ಯದಲ್ಲಿ ರಿಂಕು ಆಡುವ ಹನ್ನೊಂದರ ಬಳಗದಲ್ಲಿ ಸ್ಥಾನ ಪಡೆಯುವುದು ಖಚಿತವಾಗಿದ್ದು, ಯಾವ ರೀತಿಯ ಪ್ರದರ್ಶನ ನೀಡುತ್ತಾರೆ ಎಂಬುದು ಎಲ್ಲರ ಕುತೂಹಲಕ್ಕೆ ಕಾರಣವಾಗಿದೆ. ರಿಂಕು ಸಿಂಗ್ ಆಗಮನದಿಂದಾಗಿ ತಂಡದಲ್ಲಿ ಬದಲಾವಣೆ ಖಚಿತವಾಗಿದ್ದು, ವಿಕೆಟ್‌ಕೀಪರ್ ಬ್ಯಾಟ್ಸ್‌ಮನ್ ಧ್ರುವ್ ಜುರೆಲ್ ಬದಲಿಗೆ ರಿಂಕು ಮತ್ತೆ ತಂಡ ಸೇರಿಕೊಳ್ಳಲಿದ್ದಾರೆ. ರಿಂಕು ಇಂಜುರಿಗೆ ತುತ್ತಾದ ಕಾರಣ ಕಳೆದ ಎರಡು ಪಂದ್ಯಗಳಲ್ಲಿ ಜುರೆಲ್‌ಗೆ ಅವಕಾಶ ಸಿಕ್ಕರೂ ಅವರು ಯಾವುದೇ ಪ್ರಭಾವ ಬೀರಲು ಸಾಧ್ಯವಾಗಲಿಲ್ಲ. ಚೆನ್ನೈನಲ್ಲಿ ನಡೆದ ಪಂದ್ಯದಲ್ಲಿ ಕೇವಲ 4 ರನ್ ಗಳಿಸಿದ್ದ ಜುರೇಲ್, ರಾಜ್‌ಕೋಟ್‌ನಲ್ಲಿ ಕೇವಲ 2 ರನ್ ಗಳಿಸಿ ಔಟಾಗಿದ್ದರು.

## ಸಿನಿಮಾ ಗೆದ್ದಿದ್ದು ತುಂಬಾ ಖುಷಿಯಾಗಿದೆ



'ನಮ್ಮ ಚಿತ್ರ ನೋಡಿದ ಎಲ್ಲರೂ ಪಾಸಿಟಿವ್ ಆಗಿ ಮಾತನಾಡುವುದು ನೋಡಿ ಖುಷಿಯಾಗಿದೆ. ಚಿತ್ರಮಂದಿರಗಳ ಸಂಖ್ಯೆ ಕೂಡ ಜಾಸ್ತಿಯಾಗಿದೆ. ತೆಲುಗು ಡಬ್ಬಿಂಗ್ ರೈಟ್ಸ್ ಉತ್ತಮ ಮೊತ್ತಕ್ಕೆ ಮಾರಾಟವಾಗಿದೆ. ನೋಡದವರು ಕೂಡಲೇ ಈ ಸಿನಿಮಾ ನೋಡಿ' ಎಂದು ರಿಷಿ ಹೇಳಿದ್ದಾರೆ. ಕೆ.ಎಸ್. ನಂದೀಶ್ ನಿರ್ದೇಶನ, ಅಶ್ವಿನಿ ವಿಜಯ್ ಲೋಹಿತ್ ನಿರ್ಮಾಣದ 'ರುದ್ರ ಗರುಡ ಪುರಾಣ' ಸಿನಿಮಾದ ಸಕ್ಸಸ್‌ಮೀಟ್‌ನಲ್ಲಿ ಅವರು ಈ ಮಾತು ಹೇಳಿದರು.

'ರುದ್ರ ಗರುಡ ಪುರಾಣ' ಸಸ್ಪೆನ್ಸ್ ಥ್ರಿಲ್ಲರ್ ಆಗಿದ್ದು, ಪ್ರೇಕ್ಷಕರಿಗೆ ಮೆಚ್ಚುಗೆ ಪಡೆದುಕೊಂಡಿದೆ. ಈ ಕಾರಣಕ್ಕೆ ನಿರ್ಮಾಪಕ ಲೋಹಿತ್ ಪ್ರೇಕ್ಷಕರಿಗೆ ಮತ್ತು ಚಿತ್ರತಂಡದವರಿಗೆ ಧನ್ಯವಾದ ಸಲ್ಲಿಸಿದ್ದಾರೆ. ಮುಂದಿನ ದಿನಗಳಲ್ಲಿ ಜಾಸ್ತಿ ಪ್ರೇಕ್ಷಕರು ಸಿನಿಮಾ ನೋಡುವ ವಿಶ್ವಾಸ ವ್ಯಕ್ತಪಡಿಸಿದ್ದಾರೆ. ಸುದ್ದಿಗೋಷ್ಠಿಯಲ್ಲಿ ಶಿವರಾಜ ಕೆ ಆರ್ ಪೇಟೆ, ಗಿರೀಶ್ ಶಿವಣ್ಣ, ಛಾಯಾಗ್ರಾಹಕ ಸಂದೀಪ್ ಕುಮಾರ್, ಸಂಕಲನಕಾರ ಮನು ಶೇಡ್ಗಾರ್, ಸಂಭಾಷಣೆ ಬರೆದಿರುವ ರಘು ನಿಡುವಳ್ಳಿ ಇದ್ದರು.

ರಿವೇಂಜ್‌ನ ಥ್ರಿಲ್ ಒದಗಿಸುವ ತನಿಖೆಯ ಕತೆ: ಬದುಕಿದ್ದಾಗ ಭೂಮಿ ಮೇಲೆ ಮಾಡಿದ ಪಾಪಗಳಿಗೆ ಸತ್ತು ನರಕಕ್ಕೆ ಹೋಗಿ ಶಿಕ್ಷೆ ಅನುಭವಿಸೋದು ಸುಳ್ಳು, ಇಲ್ಲಿ ಮಾಡಿದ ಪಾಪಕ್ಕೆ ಇಲ್ಲೇ ಶಿಕ್ಷೆ ಅನುಭವಿಸಿ ಎನ್ನುತ್ತದೆ 'ರುದ್ರ ಗರುಡ ಪುರಾಣ' ಚಿತ್ರ. 'ಇಲ್ಲೇ ಸ್ವರ್ಗ, ಇಲ್ಲೇ ನರಕ. ಮೇಲೇನಿಲ್ಲ' ಎನ್ನುವ ಹಾಡಿನ ಸಾಲನ್ನು ಗಟ್ಟಿಯಾಗಿ ನಂಬಿಕೊಂಡಿದೆ. ಹಾಗಾದರೆ ಇಲ್ಲಿನ ಪಾಪಗಳಿಗೆ ಇಲ್ಲೇ ಶಿಕ್ಷೆ ಕೊಡೋದು ಯಾರು ಎನ್ನುವ ಕುತೂಹಲ ಮತ್ತು ಆ ಸಸ್ಪೆನ್ಸ್ ಹಿಂದಿರುವ ತಣ್ಣನೆಯ ಕ್ರೌರ್ಯ, ಇದರಿಂದ ಬದುಕು ಕಳೆದುಕೊಂಡಿದ್ದು ಯಾರೆಂಬ ಹುಡುಕಾಟದ ಆಸಕ್ತಿದಾಯಕ ತನಿಖಾ ಕಥನವಿದು.

# ದಕ್ಷಿಣದ ನಟರ ಅವಶ್ಯಕತೆಯಿದೆ



ರೆಜಿನಾ ಕಸಾಂಡ್ರಾ ತೆಲುಗು ಮಾತ್ರವಲ್ಲದೆ ತಮಿಳು, ಮಲಯಾಳಂ, ಕನ್ನಡ ಮತ್ತು ಹಿಂದಿಯಂತಹ ಇತರ ಭಾಷೆಗಳಲ್ಲಿಯೂ ನಟಿಸಿ ತಮ್ಮದೇ ಆದ ವಿಶಿಷ್ಟ ಸ್ಥಾನವನ್ನು ಗಳಿಸಿದ್ದಾರೆ.

ತೆಲುಗಿನಲ್ಲಿ 'ಸುಬ್ರಹ್ಮಣ್ಯಂ ಫಾರ್ ಸೇಲ್', 'ಪಿಲ್ಲಾ ನುವ್ವು ಲೇನಿ ಜೀವಿತಂ', 'ಸೌಖ್ಯಂ' ಮುಂತಾದ ಚಿತ್ರಗಳಲ್ಲಿ ಅವರಿಗೆ ಗುರುತಿಸುವಿಕೆ ದೊರಕಿದೆ. ಹಲವಾರು ಚಿತ್ರಗಳಲ್ಲಿ ಐಟಂ ಹಾಡುಗಳಲ್ಲಿ ನಟಿಸಿರುವ ಅವರು 'ಆಚಾರ್ಯ' ಚಿತ್ರದಲ್ಲಿ ಮೆಗಾಸ್ಟಾರ್ ಚಿರಂಜೀವಿ ಅವರೊಂದಿಗೆ ಹೆಜ್ಜೆ ಹಾಕಿದ್ದಾರೆ.

ಇತ್ತೀಚೆಗೆ ಕೆಲವು ವೆಬ್ ಸರಣಿಗಳಲ್ಲಿಯೂ ಅವರು ನಟಿಸಿದ್ದಾರೆ. ಇತ್ತೀಚೆಗೆ, ನಟ ಅಜಿತ್ ನಟಿಸಿರುವ 'ವಿದಾಮುಯರ್ಚಿ' ಚಿತ್ರದಲ್ಲಿ ಪ್ರಮುಖ ಪಾತ್ರವನ್ನು ನಿರ್ವಹಿಸಿದ್ದಾರೆ. ಈ ಪ್ರಚಾರದ ಭಾಗವಾಗಿ ಅವರು ಹಿಂದಿ ಚಿತ್ರರಂಗದ ಬಗ್ಗೆ ಆಸಕ್ತಿದಾಯಕ ಹೇಳಿಕೆಗಳನ್ನು ನೀಡಿದ್ದಾರೆ. ಹಿಂದಿ ಚಿತ್ರರಂಗದ ಬಗ್ಗೆ ನಟಿ ರೆಜಿನಾ ಮಾತನಾಡುತ್ತಾ, ಪ್ರಸ್ತುತ ಆ ಉದ್ಯಮಕ್ಕೆ ದಕ್ಷಿಣದ ನಟರ ಅವಶ್ಯಕತೆಯಿದೆ ಎಂದು ಹೇಳಿದರು.

ಇತ್ತೀಚಿನ ಸಂದರ್ಶನವೊಂದರಲ್ಲಿ ದಕ್ಷಿಣದ ನಟರಿಗೆ ಬಾಲಿವುಡ್‌ನಲ್ಲಿರುವ ಅವಕಾಶಗಳ ಬಗ್ಗೆ ರೆಜಿನಾ ಮಾತನಾಡಿದ್ದು, ಬಾಲಿವುಡ್‌ನವರಿಗೆ ಈಗ ಬೇರೆ ಆಯ್ಕೆಗಳಿಲ್ಲ. ಹಿಂದೆ ಕಠಿಣ ಪರಿಸ್ಥಿತಿಗಳಿದ್ದವು. ದಕ್ಷಿಣ ಭಾರತದ ಚಿತ್ರರಂಗದ ನಟರಿಗೆ ಅಲ್ಲಿ ಅವಕಾಶಗಳು ಸಿಗುವುದು ತುಂಬಾ ಕಷ್ಟಕರವಾಗಿತ್ತು. ಆಗ ನೀವು ದಕ್ಷಿಣದಿಂದ ಬಂದವರು ಎಂದು ತಿಳಿದರೆ ಅವಕಾಶಗಳನ್ನು ನೀಡುತ್ತಿರಲಿಲ್ಲ.

ಭಾಷಾ ತೊಂದರೆಗಳು ಸಹ ಒಂದು ಕಾರಣವಾಗಿರಬಹುದು. ಆದರೆ, ಕರೋನಾ ನಂತರ ಉದ್ಯಮದಲ್ಲಿ ಪರಿಸ್ಥಿತಿ ಬದಲಾಗಿದೆ. ದಕ್ಷಿಣದ ಚಲನಚಿತ್ರ ತಾರೆಯರಿಗೂ ಈಗ ಅವರು ಅವಕಾಶಗಳನ್ನು ನೀಡುತ್ತಿದ್ದಾರೆ. ತಮ್ಮ ಚಿತ್ರಗಳನ್ನು ಹೆಚ್ಚಿನ ಪ್ರೇಕ್ಷಕರಿಗೆ ತಲುಪಿಸಲು ಅವರು ದಕ್ಷಿಣದ ನಟರನ್ನು ಆಯ್ಕೆ ಮಾಡಿಕೊಳ್ಳುವುದು ಅಗತ್ಯವಾಗಿದೆ ಎಂದು ಹೇಳಿದರು. ಬಾಲಿವುಡ್‌ನಲ್ಲಿ ಯೋಜನೆಗಳನ್ನು ಮಾಡುವ ಬಗ್ಗೆ ಮಾತನಾಡುತ್ತಾ, ತಾನು ಯಾವುದೇ ತೊಂದರೆಗಳನ್ನು ಎದುರಿಸಿಲ್ಲ ಎಂದು ಹೇಳಿದರು.

ರೆಜಿನಾ ನಟಿಸಿರುವ ಇತ್ತೀಚಿನ ಚಿತ್ರ 'ವಿದಾಮುಯರ್ಚಿ'. ಅಜಿತ್ ನಾಯಕರಾಗಿರುವ ಈ ಚಿತ್ರವನ್ನು ನಿರ್ದೇಶಕ ಮ್ಯಾಗಿಜ್ ತಿರುಮೇನಿ ನಿರ್ದೇಶಿಸಿದ್ದಾರೆ. ತ್ರಿಷ ನಾಯಕಿ. ಅರ್ಜುನ್ ಪ್ರಮುಖ ಪಾತ್ರದಲ್ಲಿ ನಟಿಸಿದ್ದಾರೆ. ಈ ಚಿತ್ರದಲ್ಲಿ ರೆಜಿನಾ ಅರ್ಜುನ್ ಜೊತೆ ಕಾಣಿಸಿಕೊಳ್ಳಲಿದ್ದಾರೆ. ಫೆಬ್ರವರಿ 6 ರಂದು ಈ ಚಿತ್ರ ಬಿಡುಗಡೆಯಾಗಲಿದೆ.

ಚಿತ್ರದಲ್ಲಿ ತಮ್ಮ ಪಾತ್ರದ ಬಗ್ಗೆ ಮಾತನಾಡುತ್ತಾ, ಈ ಚಿತ್ರದ ಪ್ರಚಾರದ ವೀಡಿಯೊಗಳನ್ನು ನೋಡಿ ಅನೇಕರು ನನ್ನ ಪಾತ್ರದ ಬಗ್ಗೆ ಚರ್ಚಿಸುತ್ತಿದ್ದಾರೆ. ನನ್ನದು ಸಕಾರಾತ್ಮಕ ಪಾತ್ರವೇ ಅಥವಾ ನಕಾರಾತ್ಮಕ ಪಾತ್ರವೇ ಎಂದು ಅನುಮಾನ ವ್ಯಕ್ತಪಡಿಸುತ್ತಿದ್ದಾರೆ. ನನ್ನ ಪಾತ್ರದ ಬಗ್ಗೆ ಪ್ರೇಕ್ಷಕರು ಈ ರೀತಿ ಮಾತನಾಡುವುದು ನನಗೆ ತುಂಬಾ ಇಷ್ಟವಾಯಿತು ಎಂದರು. ಮ್ಯಾಗಿಜ್ ಈ ಚಿತ್ರಕ್ಕಾಗಿ ತಮ್ಮನ್ನು ಸಂಪರ್ಕಿಸಿದಾಗ ಮೊದಲು ಬೇರೆ ಪಾತ್ರದ ಬಗ್ಗೆ ಹೇಳಿದ್ದರು, ನಂತರ ಈ ಪಾತ್ರವನ್ನು ನೀಡಿದರು ಎಂದು ತಿಳಿಸಿದರು.

# ● ಯುವ ಗಾಯಕರಿಗೆ ಶ್ರೇಯಾ ಟಿಪ್ಸ್



ಸುಮಧುರ ಕಂಠದಿಂದ ಪ್ರಸಿದ್ಧರಾಗಿರುವ ಶ್ರೇಯಾ ಘೋಷಾಲ್‌ಗೆ ದೇಶಾದ್ಯಂತ ಸಾವಿರಾರು ಅಭಿಮಾನಿಗಳಿದ್ದಾರೆ. ಹೊಸ ಗಾಯಕರಿಗೆ ಅವರು ನಿಜಕ್ಕೂ ಆದರ್ಶ. ಅಷ್ಟೇ ಅಲ್ಲ, ಅಂಥ ಉತ್ತಮ ಕಂಠವನ್ನು ಬೆಳೆಸಿಕೊಳ್ಳಲು ನಿರಂತರ ಸ್ವರ ಸಾಧನೆ ಅತ್ಯಗತ್ಯ.

ಗಾಯಕರಾಗಬೇಕೆಂದರೆ ನಿರಂತರ ಸಾಧನೆ ಬಹಳ ಮುಖ್ಯ. ಸ್ಕೇಲ್ಸ್, ಅರ್ಪೆಗ್ಗಿಯೋಸ್, ಉಸಿರಾಟ ನಿಯಂತ್ರಣ ವ್ಯಾಯಾಮಗಳಂತಹ ದೈನಂದಿನ ವ್ಯಾಯಾಮಗಳನ್ನು ಮಾಡಬೇಕೆಂದು ಶ್ರೇಯಾ ಘೋಷಾಲ್ ಒತ್ತಿ ಹೇಳಿದ್ದಾರೆ. ಇದು ಸ್ವರತಂತುಗಳನ್ನು ಬಲಪಡಿಸಲು, ಚುರುಕುತನವನ್ನು ಸುಧಾರಿಸಲು ಮತ್ತು ನಿಮ್ಮ ಸ್ವರ ಆರೋಗ್ಯವನ್ನು ಕಾಪಾಡಿಕೊಳ್ಳಲು ಸಹಾಯ ಮಾಡುತ್ತದೆ. ನಿಯಮಿತವಾಗಿ ಅಭ್ಯಾಸ ಮಾಡುವುದರಿಂದ ನಿಮ್ಮ ಧ್ವನಿಯ ಮೇಲೆ ಉತ್ತಮ ನಿಯಂತ್ರಣ ಬರುತ್ತದೆ.

ಬಲವಾದ, ಸ್ಥಿರವಾದ ಧ್ವನಿಗೆ ಸರಿಯಾದ ಉಸಿರಾಟವು ಅಡಿಪಾಯ. ಡಯಾಫ್ರಮ್‌ನಿಂದ ಉಸಿರಾಡಲು ಶ್ರೇಯಾ ಆಕಾಂಕ್ಷಿ ಗಾಯಕರಿಗೆ ಸಲಹೆ ನೀಡುತ್ತಾರೆ, ಇದು ಅವರ ಧ್ವನಿಯ ಮೇಲೆ ಹೆಚ್ಚಿನ ನಿಯಂತ್ರಣವನ್ನು ನೀಡುತ್ತದೆ ಮತ್ತು ಶ್ರಮವಿಲ್ಲದೆ ದೀರ್ಘಕಾಲದವರೆಗೆ ಸ್ವರಗಳನ್ನು ಹಿಡಿದಿಡಲು ಸಹಾಯ ಮಾಡುತ್ತದೆ. ಸ್ಪಷ್ಟ, ಶಕ್ತಿಯುತ ಮತ್ತು ಸುಮಧುರವಾದ ಹಾಡನ್ನು ಹಾಡಲು ಉಸಿರಾಟ ನಿಯಂತ್ರಣವನ್ನು ಕಲಿಯುವುದು ಬಹಳ ಮುಖ್ಯ. ಹಾಡುವುದು ಎಂದರೆ ಕೇವಲ ನಿಖರತೆಯ ಬಗ್ಗೆ ಅಲ್ಲ, ಹಾಡಿನ ಭಾವನಾತ್ಮಕ ಆಳವನ್ನು ತಿಳಿಸುವುದು ಕೂಡ. ಹಾಡಿನ ಸಾಹಿತ್ಯದೊಂದಿಗೆ ಸಂಪರ್ಕ ಸಾಧಿಸುವುದು ಮತ್ತು ಅದರ ಭಾವನಾತ್ಮಕ ಒಳಸುಳಿಗಳನ್ನು ನಿಮ್ಮ ಧ್ವನಿಯ ಮೂಲಕ ವ್ಯಕ್ತಪಡಿಸುವ ಮಹತ್ವವನ್ನು ಶ್ರೇಯಾ ಎತ್ತಿ ತೋರಿಸುತ್ತಾರೆ.

ಗಾಯಕರು ಎತ್ತರ ಮತ್ತು ಕಡಿಮೆ ಸ್ವರಗಳೆರಡನ್ನೂ ಸುಲಭವಾಗಿ ಹಾಡುವುದರ ಮೇಲೆ ಕೆಲಸ ಮಾಡಬೇಕು. ಸರಿಯಾದ ತಂತ್ರದ ಜೊತೆಗೆ ನಿಯಮಿತವಾದ ಸ್ವರ ವ್ಯಾಯಾಮಗಳು ಗಾಯಕರು ತಮ್ಮ ಸ್ವರ ಸಾಮರ್ಥ್ಯವನ್ನು ವಿಸ್ತರಿಸಲು ಸಹಾಯ ಮಾಡುತ್ತದೆ, ವಿವಿಧ ಹಾಡುಗಳು ಮತ್ತು ಶೈಲಿಗಳನ್ನು ನಿರ್ವಹಿಸಲು ಅನುವು ಮಾಡಿಕೊಡುತ್ತದೆ ಎಂದು ಶ್ರೇಯಾ ಘೋಷಾಲ್ ಹೇಳಿದ್ದಾರೆ.

# ಬೆಸ್ಟ್ ಆ್ಯಕ್ಟರ್ ಪ್ರಶಸ್ತಿ ಪಡೆದ ಸಮರ್ಜಿತ್

ಭಾರತದ ಸಿನಿಮಾ ರಂಗದಲ್ಲಿ ತನ್ನ ನಟನೆಯ ಮೂಲಕ ಭರವಸೆ ಮೂಡಿಸಿರುವ ಸಮರ್ಜಿತ್ ಲಂಕೇಶ್ ಅವರಿಗೆ ರಾಷ್ಟ್ರಮಟ್ಟದ ಪ್ರತಿಷ್ಠಿತ ಲುಮಿರೆ ಅತ್ಯುತ್ತಮ ಉದಯೋನ್ಮುಖ ನಟ ಪ್ರಶಸ್ತಿ ಕಳೆದ ವರ್ಷ ಲಭಿಸಿದೆ.

ಶ್ರೀ ರಾಘವೇಂದ್ರ ಚಿತ್ರವಾಣಿ ಪ್ರಶಸ್ತಿ: ರಾಘವೇಂದ್ರ ಚಿತ್ರವಾಣಿ ಸಂಸ್ಥೆಯ 49ನೇ ವಾರ್ಷಿಕೋತ್ಸವ ಹಾಗೂ 24ನೇ ವರ್ಷದ ಪ್ರಶಸ್ತಿ ಪ್ರದಾನ ಸಮಾರಂಭ ಇತ್ತೀಚೆಗೆ ಬೆಂಗಳೂರಿನ ಎಂಎಂ ಲೆಗಸಿಯಲ್ಲಿ ಅದ್ದೂರಿಯಾಗಿ ನೆರವೇರಿತು.

ಹತ್ತಾರು ಗಣ್ಯರ ಸಮ್ಮುಖದಲ್ಲಿ ಸಾಧಕರಿಗೆ ಪ್ರಶಸ್ತಿ ವಿತರಣೆ ಮಾಡಲಾಯ್ತು ಹಾಗೆ ಉದಯೋನ್ಮುಖ ನಟ ಪ್ರಶಸ್ತಿ ಪಡೆದ ಸಮರ್ಜಿತ್ ಲಂಕೇಶ್ ತನ್ನ ಮಡಿಲಿಗೆ ಮತ್ತೊಂದು ಪ್ರಶಸ್ತಿಯನ್ನು ಸೇರಿಸಿಕೊಂಡಿದ್ದಾರೆ.

ಗೌರಿ ಚಿತ್ರ : ಗೌರಿ' ಸಿನಿಮಾದ ಮೂಲಕ ಇಂದ್ರಜಿತ್ ಲಂಕೇಶ್ ಅವರ ಪುತ್ರ ಸಮರ್ಜಿತ್ ಲಂಕೇಶ್ ಅವರು ಹೀರೋ ಆಗಿ ಕನ್ನಡ ಚಿತ್ರರಂಗಕ್ಕೆ ಕಾಲಿಟ್ಟರು. ಅವರ ನಟನೆಗೆ ವೀಕ್ಷಕರಿಂದ ಮೆಚ್ಚುಗೆ ಸಿಕ್ಕಿತು.

ಡಾನ್ಸ್ ಹಾಗೂ ಮಾರ್ಷಿಯಲ್ ಆರ್ಟ್ಸ್ ನಲ್ಲಿ ಪ್ರವೀಣತೆಯನ್ನು ಹೊಂದಿರುವ ಸಮರ್ಜಿತ್ ಲಂಕೇಶ್ ಅವರು ರಾಷ್ಟ್ರ ಮಟ್ಟದಲ್ಲಿ ಪ್ರೇಕ್ಷಕ ಸಮೂಹವನ್ನು ಹೊಂದಿದ್ದಾರೆ. ಈಗ ಅವರು ಪ್ಯಾನ್ ಇಂಡಿಯಾ ಮಟ್ಟದಲ್ಲಿ ದೊಡ್ಡ ಬ್ಯಾನರ್ ನಡಿ ನಟಿಸುತ್ತಿದ್ದಾರೆ.

ಪ್ರಮುಖ ಪಾತ್ರದಲ್ಲಿ ನಡೆಸುತ್ತಿರುವ ಸಮರ್ಜಿತ್ ಲಂಕೇಶ್ ಅವರು ದೇಶದ ಪ್ರಸಿದ್ಧ ತಾರೆಯರ ಜೊತೆಗೆ



ಪರದೆಯನ್ನು ಹಂಚಿಕೊಳ್ಳುತ್ತಿದ್ದಾರೆ. ತನ್ನ ಪ್ರತಿಭೆ ಹಾಗೂ ನಟನೆಯ ಸಮರ್ಪಣಾ ಭಾವದಿಂದ ಸಮರ್ಜಿತ್ ಲಂಕೇಶ್ ಭಾರತದ ಸಿನಿಮಾ ರಂಗದಲ್ಲಿ ತಾರೆಯಾಗಿ ಉದಯಿಸುವ ಭರವಸೆ ಮೂಡಿಸಿದ್ದಾರೆ.

ತಂದೆ ಇಂದ್ರಜಿತ್ ಲಂಕೇಶ್ ನಿರ್ದೇಶನದ ಗೌರಿ ಚಿತ್ರದಲ್ಲಿ ಸಮರ್ಜಿತ್ ಲಂಕೇಶ್ ಅವರು ನಾಯಕ ಪಾತ್ರ ಮಾಡುವ ಮೂಲಕ ಮೆಚ್ಚುಗೆ ಪಡೆದಿದ್ದರು. ಈ ಚಿತ್ರದಲ್ಲಿ ನಾಯಕಿಯಾಗಿ ಸಾನ್ಯಾ ಅಯ್ಯರ್ ನಟಿಸಿದ್ದರು.



# ಮೊನಾಲಿಸಾ ಸೌಂದರ್ಯಕ್ಕೆ
## ಮನಸೋತ ಕಂಗನಾ

2025ರ ಮಹಾ ಕುಂಭಮೇಳ ಮೂಲಕ ಆನ್‌ಲೈನ್ ಸಂಚಲನ ಸೃಷ್ಟಿಸಿರುವ ಇಂದೋರ್‌ನ ಮೊನಾಲಿಸಾ ಬಹುತೇಕ ನೆಟ್ಟಿಗರ ಚರ್ಚೆಯ ವಿಷಯವಾಗಿದ್ದಾರೆ. ಬಹುತೇಕರು ಈ ಚೆಲುವೆಯನ್ನು ನ್ಯಾಚುರಲ್ ಬ್ಯೂಟಿ ಎಂದು ಹಾಡಿ ಹೊಗಳಿದ್ದಾರೆ. ವೈರಲ್ ಬ್ಯೂಟಿಯನ್ನೀಗ ಬಾಲಿವುಡ್ ಬ್ಯೂಟಿ, ರಾಜಕಾರಣಿ ಕಂಗನಾ ರಣಾವತ್ ಕೂಡಾ ಹೊಗಳಿದ್ದಾರೆ.

ಇದೀಗ ಇಂದೋರ್ ಚೆಲುವೆಯನ್ನು ಹೊಗಳಿರುವ ಕಂಗನಾ ರಣಾವತ್, ಸಿನಿಮಾ ಎಂಬ ಗ್ಲ್ಯಾಮರ್ ಲೋಕದಲ್ಲಿ ಹಾಲ್ಗೆನ್ನೆ ಚೆಲುವೆಯರಿಗೆ ಮಾತ್ರ ಪ್ರಾಮುಖ್ಯತೆ ನೀಡುವವರ ಬಗ್ಗೆ ಪ್ರಶ್ನೆಗಳನ್ನೆತ್ತಿದ್ದಾರೆ. ದೀಪಿಕಾ ಮತ್ತು ಬಿಪಾಶಾರಂತಹ ಕೃಷ್ಣಸುಂದರಿಯರ ಆರಂಭಿಕ ದಿನಗಳನ್ನು ನೆನಪಿಸಿಕೊಂಡರು.

ಕಂಗನಾ ರಣಾವತ್ ತಮ್ಮ ಇನ್‌ಸ್ಟಾಗ್ರಾಮ್‌ನಲ್ಲಿ, 'ಈ ಪುಟ್ಟ ಹುಡುಗಿ ತನ್ನ ನ್ಯಾಚುರಲ್ ಬ್ಯೂಟಿಯಿಂದ ಇಂಟರ್ನೆಟ್‌ನಲ್ಲಿ ಸದ್ದು ಮಾಡಿದ್ದಾರೆ' ಎಂದು ಬರೆದಿದ್ದಾರೆ. ಆದರೆ, ಫೋಟೋಗಳು ಮತ್ತು ಸಂದರ್ಶನಗಳಿಗಾಗಿ ಅವರಿಗೆ ಕಿರುಕುಳ ನೀಡಿದ ಜನರನ್ನು ನಾನು ಇಷ್ಟಪಡೋದಿಲ್ಲ. ಮತ್ತೊಂದೆಡೆ, ಗ್ಲ್ಯಾಮರ್ ಲೋಕದಲ್ಲಿರುವ ಜನರು 'ಡಾರ್ಕ್ ಟೋನ್' ಅನ್ನು ಏಕೆ ಇಷ್ಟಪಡುವುದಿಲ್ಲ ಎಂಬುದು ನನಗೆ ಆಶ್ಚರ್ಯವಾಗುತ್ತದೆ ಎಂದು ತಿಳಿಸಿದ್ದಾರೆ.

ಡಾರ್ಕ್ ಬ್ಯೂಟಿಯರನ್ನು ಸಹ ಸಮಾನವಾಗಿ ಪ್ರೀತಿಸುತ್ತಿದ್ದ ಭಾರತೀಯ ಚಿತ್ರರಂಗದ ಆ ಯುಗವನ್ನು ಕಂಗನಾ ನೆನಪಿಸಿಕೊಂಡರು. 'ಜನರು ಅನು ಅಗರ್ವಾಲ್, ಕಾಜೋಲ್, ದೀಪಿಕಾ, ಬಿಪಾಶಾ ಮತ್ತು ರಾಣಿ ಮುಖರ್ಜಿ ಅವರನ್ನು ಪ್ರೀತಿಸಿದಷ್ಟು ಯುವ ನಟಿಯರನ್ನು ಪ್ರೀತಿಸುತ್ತಾರೆಯೇ'? ಎಂದು ಕೇಳಿದ್ದಾರೆ. ಸದ್ಯ ಎಲ್ಲಾ ನಟಿಯರು ಹೇಗೆ ಇಷ್ಟೊಂದು ಸುಂದರಿಯಾದರು? ಯೌವನದಲ್ಲಿ ಡಾರ್ಕ್ ಟೋನ್ ಹೊಂದಿದ್ದವರು ಸಹ. ಮೊನಾಲಿಸಾರನ್ನು ಇಷ್ಟಪಡುವವರು ಹೊಸ ಪ್ರತಿಭೆಗಳಿಗೂ ಅದೇ ಮಹತ್ವ ಏಕೆ ಕೊಡಬಾರದು? ಎಂದು ಪ್ರಶ್ನಿಸಿದ್ದಾರೆ

ಪ್ರಕಾಶಕ– ಸಂಪಾದಕ ಹಾಗೂ ಮಾಲೀಕ ಲಕ್ಷ್ಮೀಪ್ರಸನ್ನ ಆರ್.ಹೆಚ್. ಅವರಿಂದ #1652/6, 20ನೇ ತಿರುವು, 8ನೇ ಮುಖ್ಯರಸ್ತೆ, ಸಿ ಬ್ಲಾಕ್, ಸಹಕಾರ ನಗರ, ಬೆಂಗಳೂರು–560092 ಇಲ್ಲಿ ಪ್ರಕಟಗೊಂಡು, ಮುದ್ರಣ: ಪಿ.ಎನ್.ಪ್ರಿಂಟರ್ಸ್, ನರಸಿಪಾಳ್ಯ, ಅರಿಶಿಣಕುಂಟೆ(ಪೋ.), ನೆಲಮಂಗಲ, ಬೆಂಗಳೂರು–562123 ಇಲ್ಲಿ ಮುದ್ರಿಸಲ್ಪಟ್ಟಿದೆ. RNI.KAR/KAN/2009/31934, ದೂರವಾಣಿ: 9448074878
Edited, Published and Owned by Laxmiprasanna R.H, #1652/6, 20th Cross, 8th Main, C Block, SahakarNagar, Bangalore-560092. Printed by P N Printers, Narasipalya, Arishinakunte(Post), Kasaba(hobali), Nelamangala, Bengaluru-562123
Email-mussanje2010@gmail.com, Phone: 9448074878